ಶ್ರೀಪಂಚರತ್ನ ಹರಿಪಾಠ

ಅರ್ಥ ಸಹಿತ

ಶ್ರೀ ನಿವೃತ್ತಿನಾಥ, ಶ್ರೀ ಜ್ಞಾನದೇವ, ಶ್ರೀ ಏಕನಾಥ
ಶ್ರೀ ನಾಮದೇವ ಮತ್ತು ಶ್ರೀ ತುಕಾರಾಮ



ಪ್ರಕಾಶಕರು

ಶ್ರೀ ಸಂತ ಜ್ಞಾನೇಶ್ವರ ಸಾಧಕಾಶ್ರಮ

ಜ್ಞಾನೇಶ್ವರ ಪ್ರಸಾದ ಬಿಲ್ಡಿಂಗ್, ಭೈರಪ್ಪನವರ ನಗರ, ಹುಬ್ಬಳ್ಳಿ-೫೮೦ ೦೨೯.
ಜಿಲ್ಲಾ ಧಾರವಾಡ (ಕರ್ನಾಟಕ ರಾಜ್ಯ)
ದೂರವಾಣಿ : (೦೮೩೬) ೨೩೫೦೬೩೧

ಶ್ರೀ ಪಂಚರತ್ನ ಹರಿಪಾಠ

ಅನುಕ್ರಮಣಿಕೆ

ಮುನ್ನುಡಿ

ಸಂಸಾರ ತಾಪದಿಂದ ಬೆಂದು ಜರ್ಜರಿತರಾಗಿ ಅನುತಾಪಗೊಂಡವರು, ಹೇಗಾದರೂ ಮಾಡಿ ತಮ್ಮ ಉದ್ಧಾರ ಮಾಡಿಕೊಳ್ಳಬೇಕೆಂಬ ಪ್ರಯತ್ನದಲ್ಲಿರುತ್ತಾರೆ. ಅಂಥವರ ಸಲುವಾಗಿ, ಸಂತರು ನಾಮಜಪವೆಂಬ ಸಂಶಯರಹಿತ ಸರಳ ಮಾರ್ಗವನ್ನು ತೋರಿಸಿದ್ದಾರೆ. ನಾಮಜಪವು ಸುಲಭ ಸಾಧನವಾಗಿದ್ದು, ತಮ್ಮ ತಮ್ಮ ಉದ್ಯೋಗ-ವ್ಯವಹಾರಗಳನ್ನು ನಿರ್ವಹಿಸುತ್ತಾ, ತಾವು ಇದ್ದ ಸ್ಥಿತಿಯಲ್ಲಿಯೇ, ಇದ್ದ ಸ್ಥಳದಲ್ಲಿಯೇ ಮಾಡಬಹುದು; ಯಾಕೆಂದರೆ ನಾಮಜಪಕ್ಕೆ ವಿಧಿ ನಿಷೇಧ, ದೇಶಕಾಲ ಇತ್ಯಾದಿ ಯಾವುದೇ ಬಂಧನವಿಲ್ಲ.

ನಾಮಜಪದ ಮಹಿಮೆಯು ವರ್ಣನಾತೀತವಾಗಿರುತ್ತದೆ. ನಾಮದಲ್ಲಿ ನಾಮೀ ಅಂದರೆ ಪರಮಾತ್ಮನ ವಾಸ್ತವ್ಯವಿರುತ್ತದೆಯಾದ್ದರಿಂದ, ಪರಮಾತ್ಮನಂತೇ ನಾಮವು ವ್ಯಾಪಕ ಹಾಗೂ ಸುಖದಾಯಕವಾಗಿರುತ್ತದೆ. ವ್ರತ, ತಪ, ದಾನ, ಪ್ರಯಾಗಾದಿ ತೀರ್ಥಕ್ಷೇತ್ರ, ವೇದಪಠಣ, ಶಾಸ್ತ್ರಾಭ್ಯಾಸ, ಇವಾವೂ ನಾಮಜಪದ ಸರಿಸಾಟಿಯಾಗಲಾರವು; ಹಾಗೂ ನಾಮಜಪವು ಸ್ವತಂತ್ರವಾಗಿ, ಅಂದರೆ ಯಾವುದೇ ಅನ್ಯ ಸಾಧನೆಗಳನ್ನು ಅವಲಂಬಿಸದೇ, ನಿಶ್ಚಿತ ಗುರಿ ತಲುಪಿಸುವುದೆಂದು ಎಲ್ಲ ಸಂತರ ಖಚಿತ ಹಾಗೂ ಒಮ್ಮತದ ಅಭಿಪ್ರಾಯವಿದೆ. ನಾಮಜಪವೆಂಬ ಅಮೃತರಸಸ್ವಾದದಲ್ಲಿ ತನ್ನನ್ನು ತಾನು ಮರೆತವನು, ಪರಮಾತ್ಮಸ್ವರೂಪನೇ ಆಗಿರುತ್ತಾನೆಂದು ಎಲ್ಲ ಸಂತರು ಹೇಳಿದ್ದಾರೆ.

ನಾಮವೆಂದರೆ, ಪರಮಾತ್ಮನ ನಾಮದ ಬೀಜಾಕ್ಷರಗಳು. ಹರಿಹರಿ, ರಾಮರಾಮ, ಕೃಷ್ಣಕೃಷ್ಣ, ವಿಠ್ಠಲವಿಠ್ಠಲ, ರಾಮಕೃಷ್ಣಹರಿ ಇವೆಲ್ಲವೂ ಒಂದೇ ಇದ್ದು, ಭೇದ-ಭಾವ ಎಣಿಸದೇ, ಇವುಗಳಲ್ಲಿ ಯಾವುದಾದರೂ ಒಂದು ಮಂತ್ರವನ್ನು ಅಥವಾ ಕೆಲವನ್ನು ಅಥವಾ ಎಲ್ಲವನ್ನೂ ಸತತವಾಗಿ ನಾಲಿಗೆಯಿಂದ ಪುನಃ ಪುನಃ ಉಚ್ಚರಿಸುವುದೇ ನಾಮಜಪ. ನಿತ್ಯ ನಿಯಮದಿಂದ ಹಾಗೂ ಶಕ್ಯವಿದ್ದಷ್ಟು ಏಕಾಗ್ರತೆಯಿಂದ ನಾಮಜಪಿಸುತ್ತ ಕ್ರಮೇಣ ಜಪ ಮಾಡುವ ಅವಧಿಯನ್ನು ಹೆಚ್ಚಿಸಲು ಪ್ರಯತ್ನಿಸಬೇಕು. ವಿಷಯಗಳ ಬೆಂಬತ್ತಿ ಕ್ಷಣ-ಕ್ಷಣ ಚಂಚಲವಾಗಿರುವುದೇ ಮನಸ್ಸಿನ ಸ್ವಭಾವವಾದ್ದರಿಂದ, ನಾಮಜಪದ ಸಹಾಯದಿಂದ ಮನಸ್ಸನ್ನು ಅಂತರ್ಮುಖಿಯಾಗಿಸಲು ಪ್ರಯತ್ನಿಸಬೇಕು. ಹೀಗೆ ಮಾಡುವ ನಾಮಜಪ ಸಾಧನೆಯಿಂದ, ಹಿಂದಿನ ಎಷ್ಟೋ ಜನ್ಮಗಳಲ್ಲಿ ಕೂಡಿಹಾಕಿದ್ದ ಪಾಪಗಳು ಕಡಿಮೆಯಾಗುತ್ತಾ, ಕಾಮ, ಕ್ರೋಧ, ಮತ್ಸರಾದಿ ವಿಕಾರಗಳ ಉಪಟಳ ಕಡಿಮೆಯಾಗಿ, ನಾಮಧಾರಕನಿಗೆ ಬ್ರಹ್ಮಭಾವ ಯೋಗ್ಯತೆಯುಂಟಾಗುತ್ತದೆಂದು ಎಲ್ಲ ಸಂತರು ಹೇಳಿದ್ದಾರೆ.

ಶ್ರೀ ಸಂತ ಜ್ಞಾನೇಶ್ವರ ಸಾಧಕಾಶ್ರಮ,
ಹುಬ್ಬಳ್ಳಿ.

ಆಶ್ವಿನ ಶುದ್ಧ ದಶಮಿ (ವಿಜಯದಶಮಿ)
ದಿ. ೪-೧೦-೨೦೦೩



ಶ್ರೀ ಗುರು ನಿವೃತ್ತಿನಾಥರ ಹರಿಪಾಠ

೧) ಹರಿವೀಣ ದೈವತ ನಾಹೀ ಪೈ ಅನುಚಿತ್ತೀ । ಅಖಂಡ ಶ್ರೀಪತೀ ನಾಮ ವಾಚೇ ॥
ರಾಮಕೃಷ್ಣ ಮೂರ್ತಿ ಯಾ ಜಪಾ ಆವೃತ್ತೀ । ನಿತ್ಯ ನಾಮೇ ತೃಪ್ತಿ ಝಾಲೀ ಆಮ್ಹಾ ॥
ನಾಮಾಚೇನಿ ಸ್ಮರಣೇ ನಿತ್ಯ ಪೈ ಸುಖಾತ । ದುಜೆಯಾಚೀ ಮಾತ ನೆಣೋ ಆಮ್ಹೀ ॥
ನಿವೃತ್ತಿ ಜಪತು ಅಖಂಡ ನಾಮಾವಳೀ । ಹೃದಯಕಮಳೀ ಕೇಶಿರಾಜ ॥

ಶಿವಾವತಾರಿಯಾದ ಶ್ರೀ ಗುರು ನಿವೃತ್ತಿನಾಥರು ಹೇಳುವದೇನೆಂದರೆ, ನಾನು ಅಖಂಡ ಶ್ರೀಪತಿಯ ನಾಮ ಜಪ ಮಾಡುತ್ತೇನೆ. ಹರಿಯ ಹೊರತಾಗಿ ಯಾವ ದೈವತವೂ ನನ್ನ ಚಿತ್ತದಲ್ಲಿ ಇಲ್ಲಾ, ರಾಮಕೃಷ್ಣ ಮೂರ್ತಿಯ ಸದಾ ಧ್ಯಾನ ಮತ್ತು ಜಪದ ಆವೃತ್ತಿಯಿಂದಲೇ ನಮಗೆ ನಿತ್ಯ ತೃಪ್ತಿ. ನಾಮಸ್ಮರಣೆಯಿಂದಲೇ ನಿತ್ಯ ಸುಖವಿದ್ದು, ಬೇರೆ ಸಾಧನೆಗಳ ಮಾತೇ ಇಲ್ಲಾ. ಹೃದಯ ಕಮಲದಲ್ಲಿ ಕೇಶಿರಾಜ ಅಂದರೆ ಶ್ರೀ ಹರಿಯನ್ನು ಸ್ಥಾಪಿಸಿ, ಅಖಂಡ ನಾಮಜಪ ಮಾಡುತ್ತೇವೆಂದು ಶ್ರೀಗುರು ನಿವೃತ್ತಿನಾಥರು ಹೇಳುತ್ತಾರೆ.

೨) ಹರಿವೀಣ ಚಿತ್ತೀ ನ ಧರೀ ವಿಪರೀತ । ತರತಾತೀ ಪತಿತ ರಾಮನಾಮೇ ॥
ವಿಚಾರೂನಿ ಪಾಹಾ ಗ್ರಂಥ ಹೇ ಅವಘೇ । ಜೇಥೆ ತೇಥೆ ಸಾಂಗೇ ರಾಮನಾಮ ॥
ವ್ಯಾಸಾದಿಕ ಭಲೇ ರಾಮನಾಮಾಪಾಠೀ । ನಿತ್ಯತಾ ವೈಕುಂಠೀ ತಯಾ ಘರ ॥
ಶುಕಾದಿಕ ಮುನಿ ವಿರಕ್ತ ಸಂಸಾರೀ । ರಾಮನಾಮ ನಿರ್ಧಾರೀ ಉಚ್ಚಾರಿಲೇ ॥
ಚೋರಟಾ ವಾಲ್ಮೀಕಿ ರಾಮನಾಮಿ ರತ । ತೋಹೀ ಏಕ ತರತ ರಾಮನಾಮೀ ॥
ನಿವೃತ್ತಿ ಸಾಚಾರ ರಾಮನಾಮೀ ದೃಢ । ಅವಘೇಚೀ ಗೂಢ ಉಗವಿಲೇ ॥

ಶ್ರೀಹರಿಯ ವ್ಯತಿರಿಕ್ತ ಚಿತ್ತದಲ್ಲಿ ಬೇರೆ ಯಾವುದನ್ನೂ ಇಡಬೇಡ. ಯಾಕೆಂದರೆ, ರಾಮನಾಮದಿಂದ ಮಹಾಪಾಪಿಗಳೂ ಸಹ ಉದ್ಧಾರವಾಗುತ್ತಾರೆ. ಎಲ್ಲ ಧಾರ್ಮಿಕ ಗ್ರಂಥಗಳನ್ನು ಪರಿಶೀಲಿಸಿದರೆ, ಹೆಜ್ಜೆ ಹೆಜ್ಜೆಗೆ ರಾಮನಾಮ ಮಹಾತ್ಮೆಯು ಉಲ್ಲೇಖವಿದೆ.

ವ್ಯಾಸಾದಿಕರು ರಾಮನಾಮ ಪಾಠದ ಬಲದಿಂದಲೇ ನಿತ್ಯ ವೈಕುಂಠ ಸುಖ ಅನುಭವಿಸುತ್ತಿದ್ದಾರೆ. ಅತೀ ವೈರಾಗಿಯಾದ ಶುಕಮುನಿಗಳು ರಾಮನಾಮವನ್ನು ಶ್ರದ್ಧೆಯಿಂದ ಉಚ್ಚರಿಸುತ್ತಾರೆ. ಕೊಲೆಗಡುಕನಾದ ವಾಲ್ಯಾಕೋಳಿ, ರಾಮನಾಮ ಜಪದಿಂದ ವಾಲ್ಮೀಕಿ ಮಹರ್ಷಿಯೆಂದು ಪ್ರಸಿದ್ಧಿ ಹೊಂದಿದನು. ನಾನು ಶ್ರದ್ಧೆಯಿಂದ ರಾಮನಾಮದಲ್ಲಿ ದೃಢವಾಗಿ ತಲ್ಲೀನನಾದುದರಿಂದ, ಗುಹ್ಯವಾದ ಆತ್ಮಸ್ವರೂಪವು ಪ್ರಕಟವಾಯಿತೆಂದು ಶ್ರೀಗುರು ನಿವೃತ್ತಿನಾಥರು ಹೇಳುತ್ತಾರೆ.

೩) ಹರಿಮಾರ್ಗ ಸಾರ ಏಣೇಚಿ ತರಿಜೇ । ಏರವೀ ಉಭಿಜೆ ಸಂಸಾರ ರಯಾ ॥
ಜಪತಾ ಶ್ರೀಹರಿ ಮೋಕ್ಷ ನಾಂದೇ ನಿತ್ಯ । ತರೇಲ ಪೈ ಸತ್ಯ ಹರಿನಾಮೆ ॥
ಕಾಯ ಹೇ ಓಖದ ರಾಮನಾಮಾಮೃತ । ಹರಿನಾಮೇ ತೃಪ್ತ ಕರೀ ರಯಾ ॥
ನಿವೃತ್ತಿ ಸಾಚಾರ ಹರಿನಾಮ ಜಪತ । ನಿತ್ಯ ಹೃದಯಾತ ಹರೀಹರೀ ॥

ಹರಿ ಜಪ ಮಾರ್ಗದಿಂದ ಸದ್ವಸ್ತು ಪ್ರಾಪ್ತವಾಗಿ ಜೀವನ ಉದ್ಧಾರವಾಗುತ್ತದೆ; ಇಲ್ಲವಾದರೆ ಜನನ-ಮರಣವೆಂಬ ಸಂಸಾರ ಬಂಧಿಸುತ್ತದೆ. ಶ್ರೀಹರಿ ಜಪದಿಂದ ಮೋಕ್ಷ ಹೊಂದಿ ಜೀವನ್ಮುಕ್ತನಾಗುತ್ತಾನೆ. ರಾಮನಾಮಾಮೃತದಂತಹ ದಿವ್ಯ ಔಷಧ ಮತ್ತೊಂದಿಲ್ಲ. ನಿತ್ಯ ಹೃದಯಲ್ಲಿ ಹರಿಹರಿ ನಾಮಜಪದಿಂದ ತೃಪ್ತನಾಗಿದ್ದೇನೆಂದು ಶ್ರೀಗುರು ನಿವೃತ್ತಿನಾಥರು ಹೇಳುತ್ತಾರೆ.

೪) ಏಕೇವೀಣ ದುಜೇ ನಾಹೀ ಪೈ ಯೇ ಸೃಷ್ಟಿ । ಹೇ ಜ್ಞಾನ ಕಿರೀಟೀ ದಿಧಲೇ ಹರಿ ॥
ನಿತ್ಯ ಯಾ ಶ್ರೀಹರಿ ಜನೀ ಪೈ ಭರಲಾ । ದ್ವೈತಾಚಾ ಅಬೋಲಾ ತಯಾ ಘರೀ ॥
ಹರೀವೀಣೆ ದೇವ್ರೋ ನಾಹೀ ನಾಹೀ ಜನೀಂ । ಅಖಂಡ ಪರ್ವಣೀ ಹರಿ ಜಪತಾಂ ॥
ನಿವೃತ್ತಿ ಸಾಕಾರ ಹರಿನಾಮಪಾಠ । ನಿತ್ಯತಾ ವೈಕುಂಠ ಹರಿಪಾಠ ॥

ಶ್ರೀ ಹರಿಯ ಹೊರತಾಗಿ ಈ ಸೃಷ್ಟಿಯಲ್ಲಿ ಬೇರೆ ಏನೂ ಇಲ್ಲಾ, ಅಂದರೆ ಶ್ರೀಹರಿಯೇ ಭಿನ್ನ ಭಿನ್ನ ನಾಮರೂಪಗಳನ್ನು ಧರಿಸಿ ನಟಿಸುತ್ತಿದ್ದಾನೆಂಬ ಸತ್ಯವನ್ನು, ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಅರ್ಜುನನ್ನು ಕುರಿತು ಉಪದೇಶಿಸಿದ್ದಾನೆ. ಎಲ್ಲ ಜನರಲ್ಲಿ ಶ್ರೀ ಹರಿಯೇ ತುಂಬಿ ತುಳುಕುತ್ತಿದ್ದಾನೆಂಬ ಪ್ರಚೀತಿಯಾದವನಿಗೆ, ದ್ವೈತದ ಆಭಾಸವೇ ಇಲ್ಲಾ. ಹರಿನಾಮ ಉಚ್ಚಾರ ಮಾಡಿ ನಿತ್ಯ ವೈಕುಂಠ ಸುಖವನ್ನು ಅನುಭವಿಸುತ್ತಿದ್ದೇನೆಂದು ಶ್ರೀಗುರು ನಿವೃತ್ತಿನಾಥರು ಹೇಳುತ್ತಾರೆ.

೫) ಜಪತಾ ಕುಂಟಣೀ ಉತರೇ ವಿಮಾನ। ನಾಮ ನಾರಾಯಣ ಆಲೇ ಮುಖಾ ॥
ನಾರಾಯಣ ನಾಮ ತಾರಕ ತೇ ಆಮ್ಹಾ। ನೆಣೋ ಪೈ ಮಹಿಮಾ ಅನ್ಯ ತತ್ವೀ ॥
ತಾರಿಲೇ ಪತಿತ ನಾರಾಯಣ ನಾಮೇ। ಉದ್ಧರಿಲೇ ಪ್ರೇಮೆ ಹರಿಭಕ್ತ ॥
ನಿವೃತ್ತಿ ಉಚ್ಚಾರ ನಾರಾಯಣ ನಾಮ। ದಿನನಿಸೀ ಪ್ರೇಮ ಹರಿಹರಿ ॥

ಗಣಿಕಾ ಎಂಬ ಹೆಸರಿನ ವೇಶ್ಯಾಸ್ತ್ರೀಯು, ತಾನು ಸಾಕಿದ ಗಿಳಿಗೆ ರಾಮ, ನಾರಾಯಣ ಎಂದು ಸಂಬೋಧಿಸುತ್ತಿದ್ದಳು. ಆಯುಷ್ಯದ ಕೊನೆಗೆ ಅವಳು ಮರಣ ಪೂರ್ವದಲ್ಲಿ, ಹೇ ರಾಮ, ಹೇ ನಾರಾಯಣ, ''ನಾನು ಮರಣ ಹೊಂದಿದ ನಂತರ ನಿನ್ನನ್ನು ಯಾರು ಪೋಷಿಸುವರು ಎಂಬ ಚಿಂತೆ ನನ್ನನ್ನು ಕಾಡುತ್ತಿದೆ''. ಹೀಗೆ ಗಿಳಿಯನ್ನು ಉದ್ದೇಶಿಸಿ, ರಾಮ ನಾರಾಯಣ ಉಚ್ಚರಿಸಿ ಮರಣ ಹೊಂದಿದ್ದರಿಂದ, ವೈಕುಂಠದಿಂದ ವಿಮಾನ ಬಂದು (ಈ ಹಿಂದೆ ಎಷ್ಟೇ ಪಾಪ ಕರ್ಮಗಳನ್ನು ಮಾಡಿದ್ದರೂ) ಕರೆದುಕೊಂಡು ಹೋಗಿದ್ದರಿಂದ, ಅವಳಿಗೆ ವೈಕುಂಠ ಪದವಿ ದೊರಕಿತು. ಆದ್ದರಿಂದ ನಾರಾಯಣ ನಾಮ ಒಂದು ಬಿಟ್ಟು, ಬೇರೆ ಯಾವ ತತ್ವದಲ್ಲೂ ಸತ್ವವಿಲ್ಲ. ಪ್ರೇಮಳ ಹರಿ ಭಕ್ತರನ್ನು (ಹಿಂದೆ ಪಾಪಿಯಾಗಿದ್ದರೂ) ಉದ್ಧಾರ ಮಾಡುವ ಸಾಮರ್ಥ್ಯ ಇರುವುದರಿಂದ, ನಾನು ದಿವಸ ರಾತ್ರಿಯನ್ನದೇ ಪ್ರೇಮ ಪೂರ್ವಕ, ಹರಿ ನಾರಾಯಣ ನಾಮ ಜಪ ಮಾಡುತ್ತೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೬) ಏಕತತ್ವ ಹರಿ ಆಸೇ ಪೈ ಸರ್ವತ್ರ। ಐಸೇ ಸರ್ವ ಶಾಸ್ತ್ರ ಬೋಲಿಯೆಲೇ ॥
ಹರಿನಾಮೇ ಉದ್ಧರೇ ಹರಿನಾಮೆ ಉದ್ಧರೇ। ವೇಗೀ ಹರೀ ತ್ವರೇ ಉಚ್ಚಾರಿ ಜೋ ॥
ಜಪತಾ ಪೈ ನಾಮ ಯಮಕಾಳ ಕಾಂಪೇ। ಹರಿ ಹರಿ ಸೋಪೇ ಜಪಿಜೇ ಸುಖೇ ॥
ನಿವೃತ್ತಿ ಮ್ಹಣೇ ಹರಿನಾಮ ಪಾಠ ಜಪಾ। ಜನ್ಮಾಂತರ ಖೇಪಾ ಅಂತರಲೇ ॥

ಎಲ್ಲ ಶಾಸ್ತ್ರಗಳ ಸಾರವೆಂದರೆ, ಅದ್ವಿತೀಯನಾದ ಹರಿಯೇ ಸರ್ವತ್ರ ತುಂಬಿರುತ್ತಾನೆ. ಹರಿ ನಾಮದಿಂದಲೇ ಜೀವನ ಉದ್ಧಾರವಾಗುವುದರಿಂದ, ವಿಳಂಬ ಮಾಡದೇ ಹರಿ ಜಪ ಮಾಡಿರಿ. ಹರಿಜಪದಿಂದ ಕಾಳಯಮ ದೂರ ಸರಿಯುತ್ತಾನಲ್ಲದೇ, ಜನ್ಮಾಂತರಗಳು ಇಲ್ಲವಾಗುವವೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೭) ಗಗನೀಚಾ ಘನ ಜಾತೋ ಪೈ ವಾರೇನ। ಅವಚಿತಾ ಪತನ ಅಧೋಪಂಥೇ ॥
ಅಧ ಊರ್ಧ್ವ ಹರಿ ಭಾವಿಲಾ ಕುಸರೀ। ಪ್ರಪಂಚ ಬೋಹರಿ ಆಪೋ ಆಪ ॥
ನಿವೃತ್ತಿ ಮ್ಹಣೇ ಜನ ಹರೀಂಚೇ ಸ್ವರೂಪ। ಕಾಳಾಚೇ ಪೈ ಮಾಪ ಹರಿನಾಮೇ ॥

ಆಕಾಶದಲ್ಲಿ ಹುಟ್ಟಿದ ಬಹುತೇಕ ಮೇಘಗಳು, ಗಾಳಿಯಿಂದ ಚದುರಿ ಕರಗಿ ಹೋಗುತ್ತವೆ. ಕೆಲವೇ ಕೆಲವು ಮಾತ್ರ ಮೋಡಗಳು, ಮಳೆ ನೀರಾಗಿ ಕೆಳಗೆ ಬೀಳುತ್ತವೆ. ಮೇಲೆ ಆಕಾಶದಲ್ಲಿ ಕರಗಿ ಹೋದುದೂ ಮೋಡವೇ, ಕೆಳಗೆ ನೀರಾಗಿ ಬೀಳುವದೂ ಮೋಡವೇ. ಇದೆಲ್ಲವೂ ಆಕಾಶದ ಅಧಿಷ್ಠಾನ ಅಂದರೆ ಅಸ್ತಿತ್ವದಲ್ಲಿ ನಡೆಯುವ ಕ್ರಿಯೆ. ಹಾಗೆಯೇ ಮೇಲೆ ಮತ್ತು ಕೆಳಗೆ, ಎಲ್ಲ ಕಡೆಗೂ ಶ್ರೀ ಹರಿಯೇ ತುಂಬಿರುತ್ತಾನೆಂಬ ಸತ್ಯದ ಅರಿವು ಆದೊಡನೆ, ತನ್ನಿಂದ ತಾನೇ ಪ್ರಪಂಚದ ದುಃಖಗಳು ಇಲ್ಲವಾಗುವವು; ಮತ್ತು ಜಗತ್ತಿನಲ್ಲಿರುವ ಜನರೆಲ್ಲರೂ ಹರಿ ಸ್ವರೂಪವೆಂಬ ಭಾವನೆ ದೃಢವಾಗುತ್ತದೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೮) **ಸೃಷ್ಟಿಚ್ಯಾ ಸಂಮತಾ ಸುರತರೂ ತರೂ । ಬೋಲಿಲಾ ವಿಸ್ತಾರು ಧರ್ಮ ಶಾಸ್ತ್ರೀ ॥**
ನೇಘೋ ಹೇ ತರೂ ಪ್ರಪಂಚ ಪರಿವಾರೂ । ಪ್ರತ್ಯಕ್ಷ ಈಶ್ವರೂ ಪುರೇ ಆಮ್ಹಾ ॥
ನಿವೃತ್ತಿ ನಿವಾಂತ ಹರೀಚ ಸೇವಿತ । ದೋ ಅಕ್ಷರೀ ಉಚಿತ ಇಂದ್ರಿಯಾಸೀ ॥

ಧರ್ಮ ಶಾಸ್ತ್ರಗಳಲ್ಲಿ ಸೃಷ್ಟಿಯ ರಚನೆಯನ್ನು ಊರ್ಧ್ವ ಮೂಳ ಅಂದರೆ ಬೇರುಗಳು ಮೇಲೆ, ಅಧೋ ಶಾಖಾ ಅಂದರೆ ಕೊಂಬೆಗಳು ಎಲೆಗಳು ಕೆಳಕ್ಕೆ, ಹೀಗೆ ಇರುವ ಮಹಾನ್ ವೃಕ್ಷಕ್ಕೆ ಹೋಲಿಕೆ ಕೊಟ್ಟು ವಿಸ್ತಾರವಾಗಿ ವರ್ಣಿಸಿರುತ್ತಾರೆ. ನಾವು ಈ ವೃಕ್ಷದ ವಿಚಾರ ಅಥವಾ ಪ್ರಪಂಚ ಪರಿವಾರದ ವಿಚಾರ, ಇವೆಲ್ಲವುಗಳ ಕಡೆಗೆ ಗಮನ ಕೊಡದೇ, ಪ್ರತ್ಯಕ್ಷ ಈಶ್ವರನಲ್ಲಿ ಶ್ರದ್ಧೆ ಮಾತ್ರ ಸಾಕು. ಆದ್ದರಿಂದ ನಾನು, ನನ್ನನ್ನು ಹರಿ ಸೇವೆಯಲ್ಲಿ ಅಂದರೆ, ರಾಮ, ಹರಿ ಎರಡಕ್ಷರ ಜಪದಲ್ಲಿ, ನನ್ನ ಇಂದ್ರಿಯಗಳನ್ನು ತೊಡಗಿಸಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೯) **ಸರ್ವಾಭೂತೀ ದಯಾ ಶಾಂತಿ ಪೈ ನಿರ್ಧಾರ । ತೋ ಯೋಗ ಸಾಚಾರ ಜನೀ ಇಯೇ ॥**
ನಲಗೆ ಮುಂಡಣೆ ಕಾಯಾ ಹೇ ದಂಡಣೇ । ಅಖಂಡ ಕೀರ್ತನೇ ಸ್ಮರೇ ಹರಿ ॥
ಶಿವ ಜಾಣೆ ಜೀವೀ ರಕ್ಷಲಾ ಚೈತನ್ಯ । ಹೇ ಜೀವೀ ಕಾರುಣ್ಯ ಸದಾ ಭಾವೀ ॥
ಗಗನೀ ಸೂರ್ಯ ತಪೇ ಅನಂತ ತಾರಾ ಲೋಪೇ । ಏಕಚಿ ಸ್ವರೂಪೇ ಆತ್ಮಾ ತೈಸಾ ॥
ಉಗವಲಾ ಕಳೀ ಉಲ್ಹಾಸು ಕಮಳೀ । ತೈಸಾ ತೋ ಮಂಡಳೀ ಚಂದ್ರದೇಖಾ ॥
ನಿವೃತ್ತಿ ಮಂಡಳ ಅಮೃತ ಸಕಳ । ಘೇತಲೇ ರಸಾಳ ಹರಿನಾಮ ॥

ಎಲ್ಲ ಭೂತಮಾತ್ರಗಳಲ್ಲಿ ಪರಮಾತ್ಮನ ಅಸ್ತಿತ್ವವಿದೆಯೆಂಬ ವಿಶ್ವಾಸವಿದ್ದು, ಶಾಂತಿ ದಯೆಯಿಂದ ವರ್ತಿಸಬೇಕು. ಪರಮಾತ್ಮನ ಪ್ರಾಪ್ತಿಗೆ ಇದೇ ಸುಗಮ ಉಪಾಯ. ತಲೆ ಬೋಳಿಸಿಕೊಳ್ಳದೇ,

ಶರೀರ ಪೀಡಿಸದೇ, ಅಖಂಡ ಹರಿ ಸ್ಮರಣೆ ಮಾಡಿರಿ. ಎಲ್ಲ ಜೀವರಲ್ಲಿ ಶಿವ ರೂಪೀ ಚೈತನ್ಯ ಸಮನಾಗಿ ತುಂಬಿಕೊಂಡಿದೆ ಎಂದು ತಿಳಿದು, ಎಲ್ಲ ಜೀವಿಗಳೊಡನೆ ಕರುಣೆ ಹಾಗೂ ಪ್ರೇಮದಿಂದಿರಬೇಕು. ಆಕಾಶದಲ್ಲಿ ಸೂರ್ಯನು ಉದಯಿಸುತ್ತಲೇ, ಎಲ್ಲ ನಕ್ಷತ್ರಗಳ ಬೆಳಕು ಸೂರ್ಯ ಪ್ರಕಾಶದಲ್ಲಿ ಏಕ ರೂಪವಾಗುತ್ತದೆ. ಅದರಂತೆ ಜಗತ್ತಿಗೆ ಅಧಿಷ್ಠಾನವಾದ ಆತ್ಮ ಸ್ವರೂಪವು ಪ್ರಕಟವಾದ ಕೂಡಲೇ, ಜೀವನ ಮನಸ್ಸು, ಬುದ್ಧಿ, ಇಂದ್ರಿಯ, ವಿಷಯಗಳು, ಜಗತ್ತಿನ ಕಾರ್ಯ, ಇವೆಲ್ಲವೂ ಆತ್ಮ ಸ್ವರೂಪದೊಡನೆ ಕರಗಿ ಏಕರೂಪವಾಗಿ ಎಲ್ಲಿ ನೋಡಿದರೂ ಆತ್ಮ ಸ್ವರೂಪವೇ ಅನುಭವವಾಗುತ್ತದೆ. ಆಕಾಶದಲ್ಲಿ ಚಂದ್ರನು ಉದಯಿಸಿದೊಡನೆ, ಚಂದ್ರಕಮಲದ ಮೊಗ್ಗೆಗಳು ಉಲ್ಲಾಸಗೊಂಡು ಹೂವಾಗಿ ವಿಕಾಸ ಹೊಂದುತ್ತವೆ. ಇದೇ ಉಪಮೆಯಂತೆ ನನ್ನ ನಾಲಿಗೆಯಿಂದ ರಸಾಳ ಹರಿ ನಾಮ ಜಪ ಆರಂಭಿಸಿದೊಡನೆ, ನನ್ನ ಹೃದಯ ಕಮಲವೆಂಬ ಮೊಗ್ಗೆಯು ಅರಳಿ ಹೂವಾಗಿ ಸುವಾಸನೆಯನ್ನು ಹರಡುತ್ತದೆ; ಎಂದು ಶ್ರೀ ಗುರು ನಿವೃತ್ತಿನಾಥರು ತಮ್ಮ ಅನುಭವ ವಿವರಿಸಿದ್ದಾರೆ.

೧೦) ಜಯಾಚೇನಿ ಸುಖೇ ಚಳತ ಪೈ ವಿಶ್ವ। ನಾಂದೇ ಜಗದೀಶ ಸರ್ವಾಂಘಟೀ ॥
ತ್ಯಾಚೇ ನಾಮ ಹರೀ ತ್ಯಾಚೇ ನಾಮ ಹರೀ । ಪ್ರಪಂಚ ಬೋಹರಿ ಕಲ್ಪನೇಚೀ ॥
ಶಾಂತಿ ತ್ಯಾಚೀ ನಾರಿ ಪ್ರಕೃತಿ ವಿಕಾರಿ । ಉನ್ಮನೀ ಬೋವರೀ ಹೃದಯಾಂತು ॥
ನಿವೃತ್ತಿದೇವೀ ಸಾಧಿಲೀ ರಾಣೀವ । ಹರಪಲೇ ಭಾವ ಇಂದ್ರಿಯಾಂಚೇ ॥

ಯಾವನಿಂದ ಈ ಜಗತ್ತೆಂಬ ಯಂತ್ರಾಗಾರವು ನಡೆದಿದೆಯೋ, ಅವನು ಪ್ರತಿಯೊಂದು ಯಂತ್ರಗಳಲ್ಲಿಯೂ ಸುಖಸ್ವರೂಪನಾಗಿ ಅಸ್ತಿತ್ವದಲ್ಲಿದ್ದಾನೆ. ಅವನ ಹೆಸರೇ ಹರಿ, ಅವನ ಹೆಸರೇ ಹರಿ. ಅವನ ಅನುಗ್ರಹದಿಂದ ಪ್ರಪಂಚದ ಭ್ರಾಂತಿ ಇಲ್ಲದಾಗುತ್ತದೆ. ಶಾಂತಿಯು ಶ್ರೀ ಹರಿಯ ಅರ್ಧಾಂಗಿಣಿ. ಪ್ರಕೃತಿಯು ಶ್ರೀ ಹರಿಯ ವಿಕಾರೀ ಸ್ವರೂಪ ಮತ್ತು ಉನ್ಮನೀ ಅವಸ್ಥೆಯು ಪ್ರತಿಯೊಂದು ಜೀವಿಯ ಹೃದಯದಲ್ಲಿಯ ಭ್ರಾಂತಿಯನ್ನು ಹೊರದೂಡಿ, ಆತ್ಮ ಸ್ವರೂಪಿಯನ್ನಾಗಿ ಮಾಡುತ್ತದೆ. ನಾನು ಹರಿಸ್ಮರಣೆಯಿಂದ ಉನ್ಮನೀ ಅವಸ್ಥೆ ಸಾಧಿಸಿಕೊಂಡು, ಇಂದ್ರಿಯ ಭಾವವಿಲ್ಲದವನಾಗಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೧) ಹರಿವಿಣ ಭಾವೋ ವಾಯಾಂಚಿ ಸಂದೇಹೋ । ಹರಿ ದೇವಾ ದೇವೋ ಆಹೇ ಸತ್ಯ ॥
ಹರಿ ಹರಿ ವಾಚೇ ಐಸೇ ಜಪಾ ಸಾಚೇ । ನಾಹೀ ತ್ಯಾ ಯಮಾಚೇ ಮೋಹಜಾಳ ॥

ಹರಿವಿಣ ಸಾರ ನಾಹೀ ಪೈ ನಿರ್ಧಾರ। ಹರಿವಿಣ ಪಾರ ನ ಪಾವಿಜೆ ॥
ನಿವೃತ್ತಿ ಶ್ರೀಹರಿ ಚಿಂತೀ ನಿರಂತರೀ। ಹರಿ ಏಕ ಅಂತರೀ ಸರ್ವನಾಂದೇ ॥

ಶ್ರೀ ಹರಿಯನ್ನು ಬಿಟ್ಟು,ಬೇರೆ ಯಾವ ದೇವರ ಮೇಲೆ ಅಥವಾ ಜಗತ್ತಿನ ಜನರು, ವಸ್ತುಗಳ ಮೇಲೆ ಶ್ರದ್ಧೆ ಇಟ್ಟರೂ ವ್ಯರ್ಥ: ಅದು ಸಂದೇಹಕ್ಕೆ ಅನುಮೋದನೆ ಕೊಟ್ಟಂತಾಗುತ್ತದೆ. ಯಾಕೆಂದರೆ ಶ್ರೀಹರಿಯೇ ಸರ್ವ ದೇವರ ದೇವನೆಂಬುದು ಕಟು ಸತ್ಯ. ಹರಿ ಹರಿ ಹೀಗೆ ಜಪ ಮಾಡಿದ್ದಾದರೆ, ಯಮದೇವನು ನಾಮಧಾರಕನೆಡೆಗೆ ಹೊರಳಿ ಸಹ ನೋಡುವುದಿಲ್ಲ. ಈ ಜಗತ್ತಿನಲ್ಲಿ ಶ್ರೀಹರಿಯ ಹೊರತಾಗಿ ಎಲ್ಲವೂ ವ್ಯರ್ಥ; ಮತ್ತು ಶ್ರೀಹರಿಗೆ ಶರಣು ಹೋಗದೇ ಭವಸಾಗರ ದಾಟಲಿಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಎಲ್ಲ ಪ್ರಾಣಿ ಮಾತ್ರಗಳ ಹೃದಯವಾಸಿಯಾದ ಶ್ರೀ ಹರಿಯ ಚಿಂತನೆಯನ್ನು ನಿರಂತರ ಮಾಡುತ್ತಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೨) ಧ್ಯಾನ ಧರಾ ಹರೀ ವಿಶ್ರಾಂತಿ ನಾಮಾಚೀ। ವಿಠ್ಠಲೀಂಚ ಸಾಚೀ ಮನೋವೃತ್ತಿ ॥
ಧ್ಯಾನೇವಿಣ ಮನ ವಿಶ್ರಾಂತಿವಿಣ ಸ್ಥಾನ। ಸೂರ್ಯಾವಿಣ ಗಗನ ಶೂನ್ಯ ದಿಸೇ ॥
ನಲಗೇ ಸಾಕಾರ ವಿಠ್ಠಲ ಮನೋವೃತ್ತಿ। ಪ್ರಪಂಚ ಸಮಾಪ್ತಿ ತೀಂ ಅಕ್ಷರೀಂ ॥
ನಿವೃತ್ತಿ ಮಮತಾ ವಿಠ್ಠಲ ಕೀರ್ತನ। ಕರಿತಾಂ ಅನುದಿನ ಮನ ಮೇಳೀ ॥

ಮನಸ್ಸಿನ ವೃತ್ತಿಯನ್ನು ಶ್ರೀ ವಿಠ್ಠಲ ಮೂರ್ತಿಯಲ್ಲಿ ನಿಲ್ಲಿಸಿ, ಇದೇ ಧ್ಯಾನ್ಯದಿಂದ ಹರಿ ಹರಿ ನಾಮ ಜಪ ಮಾಡಿರಿ. ಧ್ಯಾನವಿಲ್ಲದ ಮನಸ್ಸು, ಏಕಾಂತವಿಲ್ಲದ ಸ್ಥಾನ, ಇವೆರಡೂ ಸೂರ್ಯನಿಲ್ಲದ ಆಕಾಶದಂತೆ ಕಳಾಹೀನವಾಗಿ ಕಾಣಿಸುತ್ತವೆ. ಸಾಕಾರ ವಿಠ್ಠಲ ಮೂರ್ತಿಯನ್ನೇ ಮನೋಮಂದಿರದಲ್ಲಿ ನಿಲ್ಲಿಸುವ ಅವಶ್ಯಕತೆ ಇಲ್ಲ; ವಿಠ್ಠಲ ಮೂರು ಅಕ್ಷರಗಳ ಜಪವೇ, ಹುಟ್ಟು-ಸಾವುಗಳು ಇಲ್ಲದಂತೆ ಮಾಡುತ್ತದೆ. ಇದನ್ನೇ ಒಂದು ಅಭಂಗದಲ್ಲಿ ಹೀಗೆ ಹೇಳಿದ್ದಾರೆ:- ''ನಿವೃತ್ತಿ ಸಾಂಗೇ ಮಾತ ವಿಠ್ಠಲ ಉಚ್ಚಾರೇ, ವೈಕುಂಠ ಉತರೇ ಏಕಾ ನಾಮೇ''. ಮಮತೆಯಿಂದ ವಿಠ್ಠಲ ನಾಮ ಜಪವನ್ನು ಪ್ರತಿನಿತ್ಯ ಮಾಡುತ್ತಿದ್ದೇನೆ. ಆದ್ದರಿಂದಲೇ ನನ್ನ ಮನಸ್ಸು ಪರಮಾತ್ಮನೊಂದಿಗೆ ಏಕರೂಪವಾಗಿದೆಯೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೩) ಪ್ರಪಂಚಾಚೀ ವಸ್ತೀ ವ್ಯರ್ಥ ಕಾಹ್ಯಾ ಕಾಜ। ಆಮ್ಹಾಂ ಬೋಲತಾ ಲಾಜ ಯೇತ ಸಯೇ ॥
ಕಾಯ ಕರೂ ಹರೀ ಕೈಸಾ ಹಾ ಗವಸೇ। ಚಂದ್ರ, ಸೂರ್ಯ ಅಂವಸೇ ಏಕಸೂತ್ರ ॥

ತೈಸೇ ಕರೂ ಮನ ನಿರಂತರ ಧ್ಯಾನ । ಉನ್ಮನೀ ಸಾಧನ ಆಮ್ಹಾಂ ಪುರೇ ॥
ನಿವೃತ್ತಿ ಹರಿಪಾಠ ನಾಮ ಹೇಚಿ ವಾಟ । ಪ್ರಪಂಚ ಫುಕಟ ದಿಸೇ ಆಮ್ಹಾ ॥

ಈ ಜಗತ್ತಿನ ಜನರು ತಮ್ಮ ಆಯುಷ್ಯ ಮತ್ತು ಶಕ್ತಿಯನ್ನು ಪ್ರಪಂಚಕ್ಕಾಗಿ ವ್ಯರ್ಥ ವ್ಯಯಿಸುವುದನ್ನು ನೋಡಿ ಆ ವಿಷಯದ ಬಗ್ಗೆ ಮಾತನಾಡಲು ನಮಗೆ ನಾಚಿಕೆಯೆನಿಸುತ್ತದೆ. ಏನು ಮಾಡಿದರೆ ಶ್ರೀ ಹರಿಯ ಪ್ರಾಪ್ತಿಯಾಗುವುದೆಂದರೆ, ಅಮವಾಸ್ಯೆಯ ದಿವಸ ಚಂದ್ರ ಸೂರ್ಯರು ಒಂದೇ ರೇಷೆಯಲ್ಲಿರುತ್ತಾರೆ. ಇದರ ಗೂಢಾರ್ಥವೆಂದರೆ ಜೀವನನ್ನು ಶಿವನೊಂದಿಗೆ ಐಕ್ಯ ಮಾಡುವದು. ಸೂರ್ಯನಿಗೆ ಶಿವನ ಹೋಲಿಕೆ, ಚಂದ್ರನಿಗೆ ಜೀವನ ಹೋಲಿಕೆ ಇದೆ. ನಿರಂತರ ಧ್ಯಾನದಿಂದ ಮನಸ್ಸು ತನ್ನಲ್ಲಿಯ ತ್ರಿಗುಣಗಳನ್ನು ಕಳೆದುಕೊಂಡು ಉನ್ಮನಿ ಅವಸ್ಥೆಯನ್ನು ಹೊಂದುತ್ತದೆ. ಇದೇ ಸಾಧನೆಯಲ್ಲಿ ನಾವು ಪ್ರಗತಿ ಸಾಧಿಸಿ, ನಿರಂತರ ಹರಿ ಪಾಠ ಮಾರ್ಗದಿಂದ ಹುಟ್ಟು-ಸಾವುಗಳು ಇಲ್ಲದಂತೆ ಮಾಡಿದೆವು ಎಂದು ಶ್ರೀ ಗುರುನಿವೃತ್ತಿನಾಥರು ಹೇಳುತ್ತಾರೆ.

೧೪) ಲಟಿಕಾ ಸಂಸಾರ ವಾಢವಿಸೀ ವ್ಯರ್ಥ । ವಿಷಯಾಚಾ ಸ್ವಾರ್ಥ ಝಣೆ ಕರೀ ॥
ನಕೋ ಶಿಣೋ ದುಃಖೇ ಕಾಂ ಭರಿಸೀ ಶೋಕೇ । ಏಕತತ್ವೇ ಏಕೇ ಮನಾ ಲಾವೀ ॥
ಲಾವೀ ಉನ್ಮನೀ ಟಾಳೀ ಟಾಳಿಸೀ ನೇಯಿ ಬಾಳೀ । ಅಖಂಡ ವನಮಾಳೀ ಹೃದಯಘಟೀ ॥
ನಿವೃತ್ತಿ ಚಪಳ ರಾಹಿಲಾ ಅಚಳ । ನಾಹೀಂ ಕಾಳವೇಳ ಭಜತಾ ಹರಿ ॥

ಅಸಾರವಾದ ಪ್ರಾಪಂಚಿಕ ವಿಷಯಗಳನ್ನು ಪೋಷಿಸಿ ಬೆಳೆಸುವ ವ್ಯರ್ಥಶ್ರಮ ಮಾಡಬೇಡ. ಜೇಡರ ಹುಳ ತನ್ನ ಸುತ್ತಲೂ ಬಲೆಯನ್ನು ತಾನೇ ಕಟ್ಟಿಕೊಂಡು ಚಡಪಡಿಸುವಂತೆ, ಪ್ರಾಪಂಚಿಕ ವಿಷಯಗಳು ಸಹ ನಿನ್ನನ್ನು ಶೋಕ ಸಾಗರದಲ್ಲಿ ಮುಳುಗಿಸುತ್ತವೆ. ಸುಖದಾಯಕವಾದ ಒಂದೇ ಒಂದು ತತ್ವವೆಂದರೆ ಶ್ರೀ ಹರಿಯ ಕಡೆಗೆ ಮನಸ್ಸು ಹೊರಳಿಸಿ, ಮನಸ್ಸಿನಲ್ಲಿ ಬರುವ ಅನೇಕ ವಿಚಾರಗಳನ್ನು ಹೊಡೆದೋಡಿಸಿ, ಅಖಂಡವಾಗಿ ಶ್ರೀ ಹರಿಯನ್ನು ಹೃದಯ ಮಂದಿರದಲ್ಲಿ ಇರಿಸಿಕೊಂಡು, ಏಕ ಚಿತ್ತದಿಂದ ಧ್ಯಾನಿಸುವದು. ಆದ್ದರಿಂದ ಎಲ್ಲ ಇಂದ್ರಿಯಗಳ ಚಂಚಲ ವೃತ್ತಿಯನ್ನು ನಿಗ್ರಹಿಸಿ, ದಿವಸ ರಾತ್ರಿ ಎನ್ನದೇ, ಹರಿ ಭಜನೆಯನ್ನೇ ಮಾಡುತ್ತಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೫) ಕಲ್ಪನಾ ಕಾಜಳೀ ಕಲ್ಪಿಲೇ ಕವಳೀ । ಕೈಸೇನಿ ಜವಳೀ ದೇವ ಹೋಯ ॥
ಟಾಕೀ ಹೇ ಕಲ್ಪನಾ ದುರಿತ ವಾಸನಾ । ಅದ್ವೈತ ನಾರಾಯಣಾ ಭಜೇ ಕಾ ರೇ ॥

ಮೋಹಾಚ್ಯಾ ಜೀವನೀ ನಕೋ ಕರೂ ಪರ್ವಣೀ । ಚಿಂತೀ ಕಾ ಆಸನೀ ನಾರಾಯಣ ॥
ನಿವೃತ್ತಿ ಅವಸರು ಕೃಷ್ಣ ನಾಮ ಪೈ ಸಾರು । ಕಲ್ಪನಾ ಸಾಚಾರು ಹರಿ ಝಾಲಾ ॥

ಈ ಮಾನವರು ತಮ್ಮ ಕ್ರಿಯಾಶಕ್ತಿ ಮತ್ತು ಬುದ್ಧಿ ಶಕ್ತಿಗಳನ್ನು, ಕಲ್ಪನೆಗಳ ಗೋಪುರ ಕಟ್ಟುವುದರಲ್ಲಿಯೇ ವ್ಯಯಿಸಿದರೆ, ಪರಮಾತ್ಮನ ಪ್ರಾಪ್ತಿ ಹೇಗೆ ಆಗುತ್ತದೆ? ಈ ದುರಿತವಾಸನೆಯನ್ನು ದೂರ ಮಾಡಿಕೊಂಡು, ಇವರು ಶ್ರೀ ಮನ್ನಾರಾಯಣನ ಭಜನೆಯನ್ನೇಕೆ ಮಾಡುವುದಿಲ್ಲ? ಮಾಯಾ ಮೋಹದ ಜೀವನದಲ್ಲಿ ನೀನು ಸುಖ ಶೋಧನೆ ಮಾಡುವುದನ್ನು ಬಿಟ್ಟು, ಕುಳಿತಲ್ಲಿ ನಿಂತಲ್ಲಿ, ನಾರಾಯಣನನ್ನೇಕೆ ಚಿಂತಿಸುವುದಿಲ್ಲ? ಕೃಷ್ಣ ನಾಮ ಜಪದಿಂದ ಕಲ್ಪನೆ, ಮಾಯಾಜಾಲ, ಇವೆಲ್ಲವೂ ಶ್ರೀ ಹರಿಯಾಗಿಯೇ ರೂಪಾಂತರಗೊಂಡಿವೆಯೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೬) ಮೋಹಾಚೇನಿ ಧೇಶೇ ಮೋಹ ಪಾಶ ಗಿಳೀ । ಕೈಸೇನಿ ಗೋಪಾಳೀ ಸರತಾ ಹೋಯ ॥
ಮೋಹಾಚೇನಿ ಮೊಹನೇ ಚಿಂತಿತಾ ಶ್ರೀ ಹರಿ । ಬಾಹಿಜು ಭೀತರಿ ಅವಘಾ ಹೋಯ ॥
ದಿನ-ನಿಶೀ ನಾಮ ಜಪತಾ ಶ್ರೀಹರೀಚೆ । ಮಗ ಯಾ ಮೋಹಾಚೇ ಮೋಹನ ನಾಹೀ ॥
ನಿವೃತ್ತಿ ಆಗಮ ಮೋಹನ ಸಾಧನ । ಸರ್ವ ನಾರಾಯಣ ಏಕಾ ತತ್ವೇ ॥

ಮಾಯಾ ಮೋಹದಿಂದ ತುಂಬಿದ ಈ ಶರೀರದಲ್ಲಿ ಮತ್ತು ಜಗತ್ತಿನಲ್ಲಿ ಮೋಹವನ್ನೇ ಬೆಳೆಸುತ್ತ ಹೋದರೆ, ಮೋಹ-ಪಾಶ ಇನ್ನೂ ಹೆಚ್ಚು ದೃಢವಾಗಿ, ಜೀವನಿಗೆ ಪರಮಾತ್ಮನಲ್ಲಿ ಸುಖವಿದೆಯೆಂಬ ವಿಶ್ವಾಸವಾದರೂ ಹೇಗಾದೀತು? ಪ್ರಪಂಚದ ಮೇಲಿನ ಅದೇ ಮೋಹವನ್ನು ಪರಮಾತ್ಮನೆಡೆಗೆ ತಿರುಗಿಸಿದ್ದಾದರೆ ಒಳಗೂ ಹೊರಗೂ ಕೂಡಿಯೇ ಪರಮಾನಂದ ಪ್ರಾಪ್ತಿಯಾಗುತ್ತದೆ. ಹಗಲು-ರಾತ್ರಿ ಶ್ರೀ ಹರಿಯ ನಾಮ ಜಪಿಸುವುದರಿಂದ, ಪ್ರಪಂಚದ ಮೋಹ ಇಲ್ಲದಾಗಿ, ಸರ್ವತ್ರ ನಾರಾಯಣನ ಹೊರತಾಗಿ ಬೇರೆ ಏನೂ ಅನುಭವಕ್ಕೆ ಬರುವುದಿಲ್ಲವೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೭ ತಿಮಿರ ಪಡಳೇ ಪ್ರಪಂಚ ಹಾ ಭಾಸೇ । ಝಾಂಕೋಳಲಾ ದಿಸೇ ಆತ್ಮನಾಥ ॥
ಹರಿವಿಣ ದುಜೇ ಚಿಂತಿತಾ ನಿಭ್ರಾಂತ । ಅವಘೇಚಿ ದಿಸತ ಮಾಯಾಭ್ರಮ ॥
ಸಾಂಡೋನಿ ತಿಮಿರ ಸರ್ವ ನಾರಾಯಣ । ಹೇಚಿ ಪಾರಾಯಣ ನಿತ್ಯ ಕರೀ ॥
ನಿವೃತ್ತಿ ಸಜ್ಜನ ಅವಘಾ ಆತ್ಮರಾಜ । ಏಕ ತತ್ವ ಬೀಜ ನಾಮ ಲಾಹೋ ॥

ಅಜ್ಞಾನವೆಂಬ ಹೊದಿಕೆಯಿಂದ ಆತ್ಮನಾಥನು ಮುಚ್ಚಿದ್ದರಿಂದ, ಜೀವನಿಗೆ ಪ್ರಪಂಚ ಸತ್ಯವೆಂಬ ಭ್ರಮೆ ಇದೆ. ಶ್ರೀ ಹರಿಯನ್ನು ಬಿಟ್ಟು ಮಾಯಾ ಪ್ರಪಂಚವನ್ನು ಚಿಂತಿಸುವುದರಿಂದ, ಜಗತ್ತಿನ ಮಾಯಾ ಭ್ರಮವೇ ಸತ್ಯವೆಂಬ ಆಧ್ಯಾಸ ಜೀವನಿಗೆ ಆಗುತ್ತದೆ. ಜೀವನ ಉದ್ಧಾರವಾಗಬೇಕಾದರೆ, ಸಾಧು-ಸಜ್ಜನರ ಸಹವಾಸದಲ್ಲಿದ್ದು, ಶ್ರೀ ಹರಿಯ ನಾಮ ಜಪದ ಮಹಾತ್ಮೆಯನ್ನು ತಿಳಿದು, ಪ್ರಪಂಚದ ಮೋಹ ಕಡಿಮೆ ಮಾಡುತ್ತ, ಇದೆಲ್ಲವೂ ನಾರಾಯಣ ಸ್ವರೂಪವೆಂಬ ಭಾವದ ಪಾರಾಯಣ, ಅಂದರೆ ಸಾಧನೆಯನ್ನು ದಿನನಿತ್ಯ ಮಾಡಿರೆಂದು ಶ್ರೀ ಗುರು ನಿವೃತ್ತಿನಾಥರು ಉಪದೇಶಿಸುತ್ತಾರೆ.

೧೮) ಪ್ರವೃತ್ತಿ ನಿವೃತ್ತಿ ಯಾ ದೋನ್ಹೀ ಸಹಜ । ಜನೀ-ವನೀ ಕಾಜ ಕರೂನಿ ಅಸತೀ ॥
ನಾರಾಯಣ ನಾಮ ಜಪತಾಂಚಿ ದೋನ್ಹೀ । ಏಕತತ್ವೀ ಕರಣೀ ಸಾಂಗಿಜೆ ಗುಜ ॥
ಆಶೇಚೇ ವಿಲಾಸ ಗುಂಫೋನಿಯಾ ಮಹಿಮಾ । ಸತ್ವೀ ತತ್ವ ಸೀಮಾ ನಿಜ ಜ್ಞಾನೆ ॥
ನಿವೃತ್ತಿ ತತ್ವತಾ ಮನಾಚೇ ಮೋಹನ । ನಿತ್ಯ ಸಮಾಧಾನ ರಾಮನಾಮೇ ॥

ಪ್ರವೃತ್ತಿಯೆಂದರೆ ಏನಾದರೂ ಕರ್ಮ ಮಾಡುತ್ತ ಇರುವದು. ನಿವೃತ್ತಿ ಅಂದರೆ ವಿಶ್ರಾಂತಿ ಜೀವನ ಸಾಗಿಸುವದು, ಪ್ರವೃತ್ತಿ-ನಿವೃತ್ತೀ ಇವೆರಡೂ ಪ್ರತಿಯೊಬ್ಬನ ಜೀವನದಲ್ಲಿ ಸಹಜ ಸ್ವಭಾವವಾಗಿವೆ. ನಾರಾಯಣ ನಾಮವನ್ನು ಜಪಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಮಾತ್ರ ಪ್ರಪಂಚದಿಂದ ನಿವೃತ್ತಿ ಸಿಗುವದೆಂಬ ಸತ್ಯವನ್ನು ಅರಿತುಕೊಳ್ಳಬೇಕು. ಮನುಷ್ಯ ದೇಹದ ಮಹಾತ್ಮೆಯನ್ನರಿತು, ವಿಲಾಸ ಜೀವನಕ್ರಮದ ಆಶೆಯನ್ನು ತ್ಯಜಿಸಿ, ಸತ್ವಗುಣದ ಸಹಾಯದಿಂದ ನಿಜ ಜ್ಞಾನಗಳಿಸಿಕೊಂಡು, ನಿತ್ಯರಾಮ ನಾಮ ಜಪ ಮಾಡುತ್ತ ಸಮಾಧಾನ ಹೊಂದಿರೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೧೯) ಕ್ಷೇತ್ರಾಚಾ ವಿಸ್ತಾರ ಕ್ಷೇತ್ರಜ್ಞ ವೃತ್ತಿ । ಅವಘೀ ಹೇ ಕ್ಷಿತೀ ಏಕ ರೂಪೇ ॥
ಶಾಂತಿ ದಯಾ ಪೈ ಕ್ಷಮಾ ಜಯಾ ರೂಪ । ಅವಘೇಚಿ ಸ್ವರೂಪ ಆತ್ಮಾರಾಮ ॥
ನಿಂದಾ ದ್ವೇಷ ಚೇಷ್ಟಾ ಅಭಿಮಾನ ಭಾಜಾ । ಸಾಂಡೂನಿಯಾ ಭಜಾ ಕೇಶವಾಸೀ ॥
ನಿವೃತ್ತಿ ತಿಷ್ಠತು ಏಕರೂಪ ಚಿತ್ತ । ಅವಘೀಂಚ ಸಮಸ್ತ ಗಿಳಿಯೇಲೀ ॥

ಈ ಜಗತ್ತಿನಲ್ಲಿ ಕ್ಷೇತ್ರ ಮತ್ತು ಕ್ಷೇತ್ರಜ್ಞ ಏಕ ರೂಪವಾಗಿ ವಿಸ್ತಾರಗೊಂಡಿವೆ. ಪಂಚ ಮಹಾಭೂತಗಳು ತ್ರಿಗುಣಗಳೊಂದಿಗೆ ಕೂಡಿ ಭಿನ್ನ ಭಿನ್ನ ಕ್ಷೇತ್ರಗಳಾಗಿದ್ದು, ಇವೆಲ್ಲಕ್ಕೂ ಜೀವ-ಕಳೆ ತುಂಬುವ ಆತ್ಮ ಸ್ವರೂಪನಾದ ಕ್ಷೇತ್ರಜ್ಞನು ಒಬ್ಬನೇ ಇರುತ್ತಾನೆ. ಶಾಂತಿ ದಯಾ

ಕ್ಷಮಾ ಈ ದೈವೀ ಗುಣಗಳನ್ನು ಅಳವಡಿಸಿಕೊಂಡವನು ಆತ್ಮ ಸ್ವರೂಪನೇ ಆಗಿರುತ್ತಾನೆ. ನಿಂದಾ, ದ್ವೇಷ, ಚೇಷ್ಟಾ (ಅನ್ಯರಿಗೆ ಅಪಮಾನ ಅಥವಾ ಹೀಯಾಳಿಸುವದು) ಅಭಿಮಾನ, ಇತ್ಯಾದಿ ಅವಗುಣಗಳನ್ನು ತ್ಯಜಿಸಿ, ಏಕ ಚಿತ್ತದಿಂದ ಕೇಶವನನ್ನು ಭಜಸಿರಿ. ಪರಮಾತ್ಮನೊಂದಿಗೆ ನನ್ನ ಚಿತ್ತವನ್ನು ಏಕೀಕರಿಸಿ, ಉಳಿದದ್ದೆಲ್ಲವನ್ನು ಅಂದರೆ ವಾಸನೆ ಮತ್ತು ವಿಕಾರಗಳನ್ನು ನುಂಗಿ ಹಾಕಿದ್ದೇನೆಂದು ಶ್ರೀಗುರು ನಿವೃತ್ತಿನಾಥರು ಹೇಳುತ್ತಾರೆ.

೨೦) ಆಮ್ಹೀ ಚಕೋರ ಹರಿ ಚಂದ್ರಮಾ । ಆಮ್ಹೀ ಕಳಾ ತೋ ಪೌರ್ಣಿಮಾ ॥
ಕೈಸಾ ಬಾಹಿಜು ಭೀತರೀ ಹರಿ । ಬಿಂಬ ಬಿಂಬಲಾ ಏಕ ಸೂತ್ರೀ ॥
ಆಮ್ಹೀ ದೇಹೀ ತೋ ಆತ್ಮಾ । ಆಮ್ಹೀ ವಿದೇಹೀ ತೋ ಪರಮಾತ್ಮಾ ॥
ಐಕ್ಯಪಣೆ ಸಕಳ ವಸೇ । ದ್ವೈತ-ಬುದ್ಧಿ ಕಾಹೀ ನ ದಿಸೇ ॥
ನಿವೃತ್ತಿ ಚಾತಕ ಇಚ್ಛಿತಾಹೇ । ಹರಿಲಾಗೀ ಬರೇ ತೇ ಪಾಹೇ ॥

ನಾವು ಚಕೋರ ಪಕ್ಷಿಗಳು, ಹರಿಯು ಚಂದ್ರನು. ಚಕೋರ ಪಕ್ಷಿಗಳು ಇತರ ಪಕ್ಷಿಗಳಂತೆ ಆಹಾರ ಸೇವಿಸುವುದಿಲ್ಲ. ಚಂದ್ರಮನ ಸೀತಳ ಕಿರಣಗಳ ಸೇವನೆಯಿಂದಲೇ, ಭೋಜನ ಮಾಡಿದ ತೃಪ್ತಿ ಅವುಗಳಿಗೆ ಇರುತ್ತದೆ. ನಾವು ಕಳಾ ಮತ್ತು ಶ್ರೀಹರಿಯು ಪೌರ್ಣಿಮ ಇದ್ದಂತೆ, ಅಮಾವಾಸ್ಯೆ ನಂತರ ಪ್ರತಿಪದೆ ತಿಥಿಯಿಂದ ಪೂರ್ಣಿಮಾ ತಿಥಿಯ ವರೆಗೆ ಚಂದ್ರನ ಆಕೃತಿ ಕ್ರಮೇಣ ವೃದ್ಧಿಯಾಗುತ್ತಾ, ಪೂರ್ಣಿಮಾ ತಿಥೀ ದಿವಸ ಪರಿಪೂರ್ಣತೆ ಹೊಂದುತ್ತದೆ. ಶ್ರೀ ಹರಿಯು ಪ್ರಾಣಿಗಳ ಮತ್ತು ಜಗತ್ತಿನ ಹೊರಗೆ ಹೇಗೆ ತುಂಬಿಕೊಂಡಿದ್ದಾನೋ, ಒಳಗೂ ಹಾಗೇ ಪರಿಪೂರ್ಣವಾಗಿ ತುಂಬಿಕೊಂಡಿದ್ದಾನೆ. ಉದಾಹರಣೆಗೆ ಸೂರ್ಯನ ಪ್ರಕಾಶ ಎಲ್ಲ ಕಡೆಗೂ ಒಂದೇ ಸಮನಾಗಿ ಪಸರಿಸಿರುತ್ತದೆ. ಎರಡನೇ ಉದಾಹರಣೆ ಅಂದರೆ ಸುಗಂಧವು ಚಂದನ ಕಟ್ಟಿಗೆಯ ಎಲ್ಲ ಭಾಗಗಳಲ್ಲಿಯೂ ಒಳಗೂ ಹೊರಗೂ ಸಮನಾಗಿ ತುಂಬಿಕೊಂಡಿರುತ್ತದೆ. ನಾವು ದೇಹ-ಧಾರಿಗಳು, ಶ್ರೀಹರಿಯುಆತ್ಮಾ. ದೇಹವು ಜೀವಂತವಾಗಿರಬೇಕಾದರೆ, ಅದರೊಳಗೆ ಆತ್ಮವಿದ್ದರೆ ಮಾತ್ರ ಸಾಧ್ಯ. ಆತ್ಮ ಇರದಿದ್ದರೆ ದೇಹಕ್ಕೆ ಶವವೆನ್ನುತ್ತಾರೆ. ನಾವು ವಿದೇಹಿಯಾದರೆ, ಶ್ರೀ ಹರಿಯು ಪರಮಾತ್ಮ. ವಿದೇಹ ಸ್ಥಿತಿ ಅಂದರೆ ಮನಸ್ಸು ಬುದ್ಧಿ, ಅಹಂಕಾರ, ಪ್ರೀತಿ, ದ್ವೇಷ, ಕಾಮ, ಕ್ರೋಧಾದಿ ಆರು ವಿಕಾರಗಳು ಇಲ್ಲದೇ ಇರುವ ಸ್ಥಿತಿ. ಸರ್ವಂ ಖಲ್ವಿದಂ ಬ್ರಹ್ಮ, ಎಲ್ಲವೂ ಶ್ರೀಹರಿಯೇ; ಪ್ರಕೃತಿಯ ಬೇರೆ ಬೇರೆ ಗುಣಗಳ ಉಪಾಧಿಗಳ ಕಾರಣದಿಂದ ಭಿನ್ನ ಭಿನ್ನ ನಾಮ ರೂಪದಲ್ಲಿ ಕಾಣಿಸಿಕೊಂಡರೂ ಆತ್ಮ ತತ್ವವು ಒಂದೇ, ಎಂಬ ಭಾವದಿಂದ ಸಾಧನೆ ಮಾಡಿದ್ದಾದರೆ ಫಲಪ್ರಾಪ್ತಿ; ಬೇರೆ ಬೇರೆ

ಕಾಣುವದೆಲ್ಲಾ ಭಿನ್ನ ಭಿನ್ನವೆಂಬ ದ್ವೈತ ಬುದ್ಧಿಯೇ ಅಜ್ಞಾನ. ಇದರಿಂದ ಫಲಪ್ರಾಪ್ತಿ ಇಲ್ಲ. ಚಾತಕ ಪಕ್ಷಿಗಳು ಭೂಮಿಯಲ್ಲಿಯ ನೀರನ್ನು ಕುಡಿಯುವುದೇ ಇಲ್ಲ. ಅದು ಮಳೆ ಬೀಳುವಾಗ ಮಾತ್ರ ಆಕಾಶದಲ್ಲಿಯ ನೀರಿನ ಹನಿಗಳನ್ನೇ ಸೇವಿಸಿ ತೃಪ್ತಿ ಹೊಂದುತ್ತದೆ. ಅದರಂತೆಯೇ ನಾನು ಪ್ರಪಂಚದಲ್ಲಿಯ ಇಂದ್ರಿಯ ಭೋಗ ಸುಖಗಳನ್ನಾಗಲಿ ಇತರೇ ಯಾವುದೇ ಸುಖಗಳನ್ನಾಗಲಿ ಸ್ವಲ್ಪವೂ ಇಚ್ಛಿಸದೇ ಶ್ರೀಹರಿ ಸುಖವನ್ನೇ ಯಾವಾಗಲೂ ಬಯಸುತ್ತೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೨೧) ಜ್ಯಾಚೇ ಮುಖೀ ನಾಮ ಅಮೃತ ಸರಿತಾ । ತೋಚಿ ಏಕ ಪುರತಾ ಘಟು ಜಾಣಾ ॥
ನಾಮಾಚೇನಿ ಬಳೇ ಕಳಿಕಾಳ ಆಪಣಾ । ಬ್ರಹ್ಮಾಂಡಾ ಯೇಸಣಾ ತೋಚಿ ಹೋಯ ॥
ನ ಪಾಹೇ ತಯಾಕಡೇ ಕಾಳ ಅವಚಿತಾ । ನಾಮಾಚೇ ಸರಿತಾ ಜಯಾ ಮುಖೀ ॥
ನಿವೃತ್ತಿ ನಾಮಾಮೃತ ಉಚ್ಚಾರೀ ರಾಮನಾಮ । ನಿತ್ಯ ಪರಬ್ರಹ್ಮ ತ್ಯಾಚೇ ಘರೀ ॥

ಹರಿನಾಮ ಜಪವೆಂಬ ಅಮೃತದ ನದಿಯನ್ನು ಸದಾ ಪ್ರವಹಿಸುವ ಭಕ್ತನು ನಿಜಕ್ಕೂ ಧನ್ಯನು; ತುಂಬಿದ ಕೊಡವಿದ್ದಂತೆ. ಅವನ ದೇಹವೇ ಪವಿತ್ರ, ಅವನ ವಾಣಿಯೇ ಪುಣ್ಯವಂತ. ನಾಮದ ಪ್ರತಾಪದಿಂದ ಅವನು ಕಳಿಕಾಲವನ್ನು ಎದುರಿಸುವದಲ್ಲದೇ, ಬ್ರಹ್ಮಾಂಡದ ವರಿಷ್ಠನೂ ಆಗಬಲ್ಲ. ಆದ್ದರಿಂದ ನಿತ್ಯ ರಾಮ ನಾಮಾಮೃತ ಸೇವನೆ ಮಾಡುತ್ತಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ; ಮತ್ತು ಇಂಥವರ ಮನೆಯಲ್ಲಿ ಪರಬ್ರಹ್ಮ ಶ್ರೀ ಹರಿಯು ಸದಾಕಾಲ ಇದ್ದೇ ಇರುತ್ತಾನೆಂದು ಹೇಳುತ್ತಾರೆ.

೨೨) ನಿತ್ಯ ನಾಮ ವಾಚೇ ತೋಚಿ ಏಕ ಧನ್ಯ । ತ್ಯಾಚೇ ಶುದ್ಧ ಪುಣ್ಯ ಇಥೇ ಜನೀ ॥
ರಾಮನಾಮಕೀರ್ತಿ ನಿತ್ಯ ಮಂತ್ರ ವಾಚೇ । ದಹನ ಪಾಪಾಚೇ ಏಕಾ ನಾಮೇ ॥
ಐಸಾ ತೋ ನಿತ್ಯತಾ ಪುಢೇ ತತ್ವ ನಾಮ । ನಾಹೀ ತಯಾ ಸಮ ದುಜೇ ಕೋಣೀ ॥
ನಿವೃತ್ತಿ ಅವ್ಯಕ್ತ ರಾಮನಾಮ ಜಪೇ । ನಿತ್ಯತಾ ಪೈ ಸೋಪೇ ರಾಮನಾಮ ॥

ನಿತ್ಯ ನೇಮದಿಂದ ಹರಿ ನಾಮಜಪ ಮಾಡುವವನೊಬ್ಬನೇ ಧನ್ಯನು. ಜನ್ಮಾಂತರಗಳಲ್ಲಿ ಉತ್ತಮ ಫಲ ಕೊಡುವ ಶುದ್ಧ ಪುಣ್ಯವು ಈ ಲೋಕದಲ್ಲಿ ಇದೇ ಜನ್ಮದಲ್ಲಿ ಸಂಚಯವಾಗುತ್ತದೆ. ಒಂದೇ ನಾಮದಲ್ಲಿ ಪಾಪಗಳನ್ನು ದಹಿಸುವ ಸಾಮರ್ಥ್ಯವಿರುವ, ರಾಮನಾಮ ಮಹಾತ್ಮೆಯನ್ನು ಗಮನದಲ್ಲಿಟ್ಟು ನಿತ್ಯ ರಾಮ ಜಪ ಮಾಡಬೇಕು. ಈ ತತ್ವವನ್ನು ನೇಮದಿಂದ ಪಾಲಿಸುವವನಿಗೆ ಸರಿಸಾಟಿಯಾದವನು ಈ ಜಗತ್ತಿನಲ್ಲಿ ಇನ್ನೊಬ್ಬನಿಲ್ಲ. ನಾಮ ಮಹಾತ್ಮೆ ನನಗೆ ತಿಳಿದಿದ್ದರಿಂದಲೇ,

ಈ ಅವ್ಯಕ್ತ ರಾಮ ನಾಮ ಜಪವನ್ನು ಸಹಜ ಮತ್ತು ಸರಳ ರೀತಿಯಲ್ಲಿ, ನಿತ್ಯ ನೇಮದಿಂದ ಜಪಿಸುತ್ತಿದ್ದೇನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೨೩) **ಅಖಂಡ ಜಪತಾ ರಾಮನಾಮ ವಾಚೀ । ತ್ಯಾಹೂನಿ ದೈವಾಚೀ ಕೋಣ ಭೂಮೀ ॥**
ಅಮೃತೀ ರಾಹಿಲೇ ತ್ಯಾಸೀ ಕೈಂಚೇ ಮರಣ । ನಿತ್ಯತಾ ಶರಣ ಹರೀ ಚರಣಾ ॥
ನಾಮ ಮಂತ್ರ ರಾಸೀ ಅನಂತ ಪುಣ್ಯ ತ್ಯಾಸೀ । ನಾಹೀ ಪೈ ಭಾಗ್ಯಾಸೀ ಪಾರ ತ್ಯಾಚಾ ॥
ನಿವೃತ್ತಿ ಮ್ಹಣೇ ಸಾರ ರಾಮನಾಮ ಮಂತ್ರ । ಕೈಂಚಾ ತ್ಯಾಸೀ ಶತ್ರು ಜಿತೇ ಜನೀ ॥

ಅಖಂಡ ರಾಮನಾಮ ಜಪ ಮಾಡುವವನೇ, ಜಗತ್ತಿನಲ್ಲಿ ಎಲ್ಲರಿಗಿಂತ ಹೆಚ್ಚಿನ ಸುದೈವಿ. ಅಮೃತ ಸಾಗರದಲ್ಲಿ ವಾಸ ಮಾಡುವ ಪ್ರಾಣಿಗೆ ಹೇಗೆ ಮರಣವೇ ಇಲ್ಲವೋ, ಹಾಗೆಯೇ ನಿತ್ಯ ನೇಮದಿಂದ ಹರಿ ಚರಣಗಳಲ್ಲಿ ಶರಣಾಗತನಾದವನಿಗೆ, ಜನನ-ಮರಣ ಬಾಧೆಯೇ ಇಲ್ಲ. ರಾಮ ನಾಮ ಜಪ ಮಾಡುವವನಿಗೆ ರಾಸಿ ರಾಸಿಯಾಗಿ ಅನಂತ ಪುಣ್ಯ ಲಭಿಸಿ, ಅವನ ಭಾಗ್ಯಕ್ಕೆ ಪಾರವೇ ಇಲ್ಲ. ಇಂಥ ಮಹಾತ್ಮೆಯುಳ್ಳ ರಾಮಜಪ ಮಾಡುವವನಿಗೆ, ಈ ಜಗತ್ತಿನಲ್ಲಿ ಯಾವ ರೀತಿಯ ಶತ್ರುಗಳೂ ಇರುವುದಿಲ್ಲವೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೨೪) **ನಾಮ ನಾಹೀ ವಾಚೀ ತೋ ನರ ನಿರ್ದೈವ । ಕೈಸೇನಿ ದೇವ ಪಾವೇಲ ತಯಾ ॥**
ಜಪೇ ನಾಮ ವಾಚೀ ರಾಮನಾಮ ಪಾಠೇ । ಜಾಶೀಲ ವೈಕುಂಠೇ ಹರಿ ಮ್ಹಣತಾ ॥
ನ ಪಾಹೇ ಪೈ ದೃಷ್ಟೀ ಕಳಿಕಾಳ ತುಜ । ರಾಮ ನಾಮ ಬೀಜ ಮಂತ್ರಸಾರ ॥
ನಿವೃತ್ತಿ ಮ್ಹಣೇ ನಾಮ ಜಪಾವೇ ನಿತ್ಯತಾ । ಆಪಣಚಿ ತತ್ವತಾ ಹೋಯಿಲ ಹರಿ ॥

ಹರಿನಾಮ ಜಪ ಮಾಡದ ನರನು ಮಹಾ ದುರ್ದೈವಿ. ಇಂಥ ಮನುಷ್ಯನಿಗೆ ದೇವನು ಹೇಗೆ ತಾನೇ ಅನುಗ್ರಹ ಮಾಡುವನು? ರಾಮನಾಮ ಪಾಠದಿಂದ ವೈಕುಂಠ ನಗರಕ್ಕೆ ಸಹಜ ಹೋಗಬಹುದು. ರಾಮನಾಮ ಬೀಜ ಮಂತ್ರ ಸಾರದಿಂದ ಕಲಿಯುಗದ ದುಷ್ಪರಿಣಾಮ ಸಲ್ಪೂ ಆಗುವುದಿಲ್ಲ. ಆದ್ದರಿಂದ ನಿತ್ಯ ನೇಮ ಹರಿಜಪ ಮಾಡಿದರೆ, ತಾನೇ ಹರಿಸ್ವರೂಪನಾಗುತ್ತಾನೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

೨೫) **ನಾಮಾಚೇನಿ ಬಳೇ ತಾರಿಜೇ ಸಂಸಾರ । ಆಣಿಕ ವಿಚಾರ ಕರೂ ನಕೋ ॥**
ನಾಮ ಜಪ ವೇಗೀ ಮ್ಹಣೇ ಹರಿಹರಿ । ಪ್ರಪಂಚ ಬೋಹರಿ ಆಪೋ ಆಪ ॥
ನಿತ್ಯತಾ ಭಜನ ದೇವದ್ವಿಜ ಕರೀ । ನಾಮ ಹೇ ಉಚ್ಚಾರೀ ರಾಮರಾಮ ॥
ನಿವೃತ್ತಿ ಜಪತು ರಾಮರಾಮ ವಾಚೇ । ದಹನ ಪಾಪಾಚೇ ಆಪೋ ಆಪ ॥

ನಾಮದ ಬಲದಿಂದಲೇ ಸಂಸಾರ ಸಾಗರ ದಾಟುವಿರಿ. ಆದ್ದರಿಂದ ಬೇರೆ ಸಾಧನೆಯ ವಿಚಾರ

ಮಾಡಬೇಡಿರಿ. ತ್ವರಿತ ಗತಿಯಿಂದ ಹರಿ ಹರಿ ಜಪ ಮಾಡಿದರೆ ಪ್ರಪಂಚದ ಬಾಧೆ ಇಲ್ಲದಂತಾಗುತ್ತದೆ. ನಿತ್ಯ ನೇಮದಿಂದ ರಾಮನಾಮ ಉಚ್ಚರಿಸುತ್ತ ಪ್ರೇಮದಿಂದ ದೇವರ ಮತ್ತು ಸಂತರ ಭಜನೆ ಮಾಡಿರಿ. ನಿತ್ಯನೇಮದಿಂದ ರಾಮರಾಮ ಜಪಿಸುವುದರಿಂದ ಎಲ್ಲ ಪಾಪ ವಾಸನೆಗಳು ಸುಟ್ಟು ಭಸ್ಮವಾಗುತ್ತವೆಂದು ಶ್ರೀ ಗುರು ನಿವೃತ್ತಿನಾಥರು ಹೇಳುತ್ತಾರೆ.

ಶ್ರೀ ಗುರು ನಿವೃತ್ತಿನಾಥರ ಆರತಿ

ಆರತಿ ನಿವೃತ್ತಿನಾಥಾ । ಪದೀ ಠೇವೂನಿಯಾ ಮಾಥಾ ।
ಭಕ್ತಿ ಭಾವೇ ಓವಾಳೀನ । ಸದಾ ತುಝೇ ಗುಣ ಗಾತಾಂ ॥ ಧೃ ॥ ಆರತಿ ॥

ಜಗೀ ಅವತಾರ ಧರೂನಿಯಾ । ಭಕ್ತ-ಜನ ತಾರಿಲೇ ।
ದಾವೂನಿಯಾ ಭಕ್ತಿ ಜ್ಞಾನ ಪಂಥಾ । ಭಕ್ತಾ ಕೃತಾರ್ಥ ಕೇಲೇ ॥ ಆರತಿ ॥

ಗುಣ ಮೀ ಕಾಯ ವರ್ಣೂ । ನ ಪುರೇ ಹೀ ವಾಣೀ ।
ಠಾವ ದ್ಯಾವಾ ಚರಣೀ । ಶ್ರೀ ರಾಮಾ ಸದ್ಗುರುಧಾಮಾ ॥ ಆರತಿ ॥



ಶ್ರೀ ಜ್ಞಾನೇಶ್ವರ ಮಹಾರಾಜರ ಹರಿಪಾಠ

೧) ದೇವಾಚಿಯೆ ದ್ವಾರಿ ಉಭಾ ಕ್ಷಣಭರಿ । ತೇಣೆ ಮುಕ್ತಿ ಚಾರೀ ಸಾಧಿಯೇಲ್ಯಾ ॥
ಹರಿ ಮುಖೆ ಮ್ಹಣಾ ಹರಿ ಮುಖೆ ಮ್ಹಣಾ । ಪುಣ್ಯಾಚೀ ಗಣನಾ ಕೋಣ ಕರೀ ॥
ಅಸೋನಿ ಸಂಸಾರಿ ಜಿವ್ಹೆ ವೇಗು ಕರೀ । ವೇದ ಶಾಸ್ತ್ರ ಉಭಾರೀ ಬಾಹ್ಯಾ ಸದಾ ॥
ಜ್ಞಾನದೇವ ಮ್ಹಣೆ ವ್ಯಾಸಾಚಿಯೆ ಖುಣೆ । ದ್ವಾರಕೆಚೆ ರಾಣೆ ಪಾಂಡವಾ ಘರೀ ॥

ಸ್ವಾಭಾವಿಕವಾಗಿ ಯಾವಾಗಲೂ ಪ್ರಪಂಚದ ಕಡೆಗೆ ಮುಖವಾಗಿರುವಂಥ ಮನಸ್ಸು ಮತ್ತು ಬುದ್ಧಿಗಳನ್ನು ಹೃದಯಸ್ಥ ಆತ್ಮನ ಕಡೆಗೆ ತಿರುಗಿಸುವುದರಲ್ಲಿ ಯಶಸ್ವಿಯಾದರೆ ಒಂದೇ ಮನುಷ್ಯ ಜನ್ಮದಲ್ಲಿ ಸಲೋಕತಾ, ಸಮೀಪತಾ, ಸರೂಪತಾ, ಸಾಯುಜ್ಯತಾ ಎಂಬ ನಾಲ್ಕೂ ಮುಕ್ತಿಗಳನ್ನು ಪಡೆಯಲು ಸಾಧ್ಯವಿದೆ. ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತ ನಾಲಿಗೆಯಿಂದ ತೀವ್ರಗತಿಯಲ್ಲಿ ಹರಿ, ಹರಿ ಅನ್ನುವದರಿಂದ ಅಪಾರ ಪುಣ್ಯ ಸಂಚಯವಾಗುತ್ತದೆಂದು ವೇದ ಶಾಸ್ತ್ರಗಳು ಜಗಜ್ಜಾಹೀರವಾಗಿ ಘೋಷಿಸುತ್ತವೆ. ಪಾಂಡವರು ಸದಾ ಹರಿಚಿಂತನೆಯಲ್ಲಿದ್ದುದರಿಂದಲೇ ದ್ವಾರಕಾಧೀಶ ಕೃಷ್ಣನು ಸದಾ ಅವರೊಂದಿಗಿರುತ್ತಿದ್ದನೆಂದು ಮಹಾಭಾರತ ಗ್ರಂಥದಲ್ಲಿ ವೇದವ್ಯಾಸರು ಹೇಳಿದ್ದನ್ನೇ ಮಾವುಲಿ ಜ್ಞಾನೇಶ್ವರರು ನಮ್ಮೆಲ್ಲರ ಗಮನಕ್ಕೆ ತಂದಿದ್ದಾರೆ.

ಟೀಪ :- ಮಾನವ ದೇಹವೇ ದೇವಾಲಯ, ದೇಹದಲ್ಲಿಯ ಆತ್ಮನೇ ದೇವರು, ಸೂಕ್ಷ್ಮ ಶರೀರದ ಅಂಗಾಂಗಗಳಾದ ಮನ, ಬುದ್ಧಿ, ಅಹಂಕಾರ, ಚಿತ್ತ ಹಾಗೂ ಜ್ಞಾನೇಂದ್ರಿಯಗಳ ವೃತ್ತಿಯೇ ದ್ವಾರ, ಮಾನವದೇಹದ ಆಯುಷ್ಯವೇ ಕ್ಷಣಭರ.

೨) ಚಹೂ ವೇದೀಜಾಣ ಸಾಹೀ ಶಾಸ್ತ್ರೇ ಕಾರಣ । ಅಠರಾಹೀ ಪುರಾಣೆ ಹರಿಸೀ ಗಾತೀ ॥
ಮಂಥುನೀ ನವನೀತಾ ತೈಸೆ ಘೇ ಅನಂತಾ । ವಾಯಾ ವ್ಯರ್ಥ ಕಥಾ ಸಾಂಡೀ ಮಾರ್ಗು ॥
ಏಕ ಹರಿ ಆತ್ಮಾ ಜೀವ ಶಿವ ಸಮ । ವಾಯಾ ತೂ ದುರ್ಗಮ ನ ಘಾಲೀ ಮನ ॥
ಜ್ಞಾನದೇವಾ ಪಾಠ ಹರಿ ಹಾ ವೈಕುಂಠ । ಭರಲಾ ಘನದಾಟ ಹರಿ ದಿಸೇ ॥

ನಾಲ್ಕು ವೇದಗಳು, ಆರು ಶಾಸ್ತ್ರಗಳು, ಹದಿನೆಂಟು ಪುರಾಣಗಳು ಹರಿಮಹಾತ್ಮೆಯನ್ನೇ ಬಣ್ಣಿಸುತ್ತವೆ. ಮೊಸರು ಕಡೆದು ಬೆಣ್ಣೆ ತಕ್ಕೊಂಡು ಮಜ್ಜಿಗೆಯನ್ನು ತ್ಯಜಿಸುವಂತೆ, ವೇದ ಶಾಸ್ತ್ರ ಪುರಾಣಗಳಲ್ಲಿಯ ಸಾರ-ಭೂತವಾದ ಹರಿ ಮತ್ತು ಹರಿ ನಾಮಸ್ಮರಣೆ ಸ್ವೀಕರಿಸಿ, ಅಸಾರವಾದ ಕಥಾ ಮತ್ತು ಯಜ್ಞಯಾಗಾದಿ ಭಾಗವನ್ನು ತ್ಯಜಿಸಬೇಕು. ಜೀವ-ಶಿವರಲ್ಲಿರುವ ಆತ್ಮಾ-ಹರಿ ಒಬ್ಬನೇ ಎಂಬ ಅದ್ವೈತ ತತ್ವವಿದ್ದು ಇತರೇ ಕಠಿಣ ಸಾಧನೆಗಳಲ್ಲಿ ಮನಸ್ಸು ಹಾಕಬೇಡ. ಹರಿ, ವೈಕುಂಠ ಎಲ್ಲವೂ ಒಬ್ಬನೇ. ಅವನನ್ನು ನಾನು ನಿರಂತರ ಪಠಿಸುವದರಿಂದ ಆವನು ಸರ್ವತ್ರ ವ್ಯಾಪಕವಾಗಿ ಮತ್ತು ದಟ್ಟವಾಗಿ ತುಂಬಿಕೊಂಡಿರುವನೆಂಬ ಅನುಭವವಾಗಿದೆಯೆಂದು ಜ್ಞಾನೇಶ್ವರರು ಹೇಳುತ್ತಾರೆ.

೩) ತ್ರಿಗುಣ ಅಸಾರ ನಿರ್ಗುಣ ಹೇ ಸಾರ । ಸಾರಾಸಾರ ವಿಚಾರ ಹರಿಪಾಠ ॥
ಸಗುಣ ನಿರ್ಗುಣ ಗುಣಾಂಚೆ ಅಗುಣ । ಹರಿವೀಣ ಮನ ವ್ಯರ್ಥ ಜಾಯ ॥
ಅವ್ಯಕ್ತ ನಿರಾಕಾರ ನಾಹೀಂ ತ್ಯಾ ಆಕಾರ । ಜೇಥೋನಿ ಚರಾಚರ ಹರಿಸೀ ಭಜೆ ॥
ಜ್ಞಾನದೇವಾ ಧ್ಯಾನೀ ರಾಮಕೃಷ್ಣ ಮನೀ । ಅನಂತ ಜನ್ಮೋನಿ ಪುಣ್ಯ ಹೋಯ ॥

ತ್ರಿಗುಣಾತ್ಮಕ ಮಾಯಾಕಾರ್ಯವಾದ ಜಗತ್ತು ನಿರಂತರ ಬದಲಾಗುತ್ತ, ಕೊನೆಗೆ ನಾಶವಂತ ಇದ್ದು, ಅಧಿಷ್ಠಾನರೂಪ ನಿರ್ಗುಣ ಪರಮಾತ್ಮಾ ಒಬ್ಬನೇ ಅವಿನಾಶ ಅಂದರೆ ಸಾರರೂಪನು. ಈ ಮಿಥ್ಯಾ ಮತ್ತು ಅಸಾರ ಜಗತ್ತಿನಲ್ಲಿ ಯಾರಿಗೂ ಕಾಣದಂತೆ ವ್ಯಾಪಿಸಿದ, ಸಾರರೂಪ ಪರಮಾತ್ಮನನ್ನು ತಿಳಿದುಕೊಳ್ಳಲು ಹರಿನಾಮಸ್ಮರಣೆ ಉತ್ತಮ ಸಾಧನೆ. ಸಗುಣ-ನಿರ್ಗುಣಾತೀತ ಅನಾದಿಸಿದ್ಧ ಶ್ರೀ ಹರಿಯನ್ನು ಬಿಟ್ಟು ತ್ರಿಗುಣಾತ್ಮ ಕಾರ್ಯದೆಡೆ ಲಕ್ಷ್ಯ ಹಾಕುವದು ವ್ಯರ್ಥ. ಈ ಚರಾಚರ ದೃಷ್ಟಿಗೋಚರ ಜಗತ್ತು ಯಾವ ಅವ್ಯಕ್ತ ಮತ್ತು ನಿರಾಕಾರ ಶ್ರೀ ಹರಿಯಿಂದ ಸೃಷ್ಟಿಸಲ್ಪಟ್ಟಿದೆಯೋ, ಅವನಲ್ಲೇ ಮನಸ್ಸಿಟ್ಟು ಭಜಿಸು. ಅನಂತ ಜನ್ಮಗಳ ಪುಣ್ಯಪ್ರಭಾವದಿಂದ ನನ್ನ ಧ್ಯಾನದಲ್ಲಿ ಮತ್ತು ಮನದಲ್ಲಿ ರಾಮಕೃಷ್ಣ ನಾಪರೂಪಗಳೇ ತುಂಬಿಕೊಂಡಿದ್ದಾವೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೪) ಭಾವೇವೀಣ ಭಕ್ತಿ ಭಕ್ತೀವೀಣ ಮುಕ್ತಿ । ಬಳೇ-ವೀಣ ಶಕ್ತಿ ಬೊಲೂ ನಯೆ ॥
ಕೈಸೇನಿ ದೈವತ ಪ್ರಸನ್ನ ತ್ವರಿತ । ಉಗಾರಾಹೇ ನಿವಾಂತ ಶಿಣಸೀ ವಾಯಾ ॥
ಸಾಯಾಸೇ ಕರಿಸೀ ಪ್ರಪಂಚ ದಿನನಿಶೀ । ಹರಿಸೀ ನ ಭಜಸೀ ಕವಣ್ಯಾ ಗುಣೇ ॥
ಜ್ಞಾನದೇವ ಮ್ಹಣೆ ಹರಿಜಪ ಕರಣೆ । ತುಟೇಲ ಧರಣೆ ಪ್ರಪಂಚಾಚೇ ॥

ಶ್ರದ್ಧೆಯಿಲ್ಲದೇ ಭಕ್ತಿ, ಭಕ್ತಿ ಇಲ್ಲದೇ ಮುಕ್ತಿ ಸಿಗುವುದಿಲ್ಲ. ಹೇಗೆಂದರೆ ಶರೀರದಲ್ಲಿ ಬಲವಿಲ್ಲದವನು ಶಕ್ತಿ ಪ್ರದರ್ಶನ ಮಾಡಲಿಕ್ಕೆ ಶಕ್ಯವೇ ಇಲ್ಲಾ. ತ್ವರಿತ ಭಗವತ್ ಪ್ರಾಪ್ತಿಯು ಯಾವ ಸಾಧನೆಯಿಂದಾಗುತ್ತದೆಂದು ಚಡಪಡಿಸಬೇಡ. ಹಣ ಗಳಿಸುವ ಸಲುವಾಗಿ ಸಾಕಷ್ಟು ಕಷ್ಟನಷ್ಟಗಳನ್ನು ಸಹಿಸಲಿಕ್ಕೆ ಸದಾ ಸಿದ್ಧನಿರುತ್ತೀ. ಆದರೆ ಭಗವದ್ಭಕ್ತಿಯ ಸಲುವಾಗಿ ಸ್ವಲ್ಪೂ ಗಮನ ಕೊಡುವದಿಲ್ಲವೇಕೆ? ಶ್ರದ್ಧೆಯಿಂದ ಹರಿಜಪ ಮಾಡಿದರೆ ನಿನ್ನ ಸರ್ವ ದುಃಖಕ್ಕೆ ಕಾರಣವಾದ ಜನನ-�ರಣ ಇಲ್ಲದಾಗುವುದೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೫) **ಯೋಗ ಯಾಗ ವಿಧೀ ಯೇಣೆ ನವ್ಹೆ ಸಿದ್ಧೀ । ವಾಯಾಚಿ ಉಪಾಧೀ ದಂಭ ಧರ್ಮ ॥**
ಭಾವೇವೀಣ ದೇವ ನ ಕಳೇ ನಿಸ್ಸಂದೇಹ । ಗುರುವೀಣ ಅನುಭವ ಕೈಸಾ ಕಳೇ ॥
ತಪೇವೀಣ ದೈವತ ದಿಧಲ್ಯಾವೀಣ ಪ್ರಾಪ್ತ । ಗುಜೇವೀಣ ಹಿತ ಕೋಣ ಸಾಂಗೇ ॥
ಜ್ಞಾನದೇವ ಸಾಂಗೇ ದೃಷ್ಟಾಂತಾಚೀ ಮಾತ । ಸಾಧೂಚಿ ಸಂಗತಿ ತರಣೋಪಾಯ ॥

ಅಷ್ಟಾಂಗಯೋಗ ಯಜ್ಞಯಾಗ ವಿಧಿವತ್ತಾಗಿ ಮಾಡಿದರೂ ಹರಿಪ್ರಾಪ್ತಿ ಯಾಗುವದಿಲ್ಲ. ಯಾಕೆಂದರೆ ಅದರಿಂದ ದಂಭ ಅಭಿಮಾನವುಂಟಾಗಿ ದೇವರು ದೂರಾಗುತ್ತಾನೆ. ದೃಢವಿಶ್ವಾಸವಿಲ್ಲದೇ ದೇವರ ಅನುಭವವಾಗುವುದಿಲ್ಲ. ಗುರುವಿನ (ಸಂತರ) ಮಾರ್ಗದರ್ಶನವಿಲ್ಲದೇ ಅಪರೋಕ್ಷಾನುಭೂತಿಯಾಗುವುದಿಲ್ಲ. ಇಂದ್ರಿಯ ನಿಯಂತ್ರಣ ಸಾಧಿಸದೇ, ಪರದ್ರವ್ಯ ಪರನಾರೀಸಂಗ ತ್ಯಜಿಸದೇ ದೇವರು ಸಿಗುವದಿಲ್ಲ. ಹಿಂದಿನ ಜನ್ಮದಲ್ಲಿ ದಾನಧರ್ಮ ಮಾಡದೇ, ಈ ಜನ್ಮದಲ್ಲಿ ಹೇಗೆ ದ್ರವ್ಯ ಪ್ರಾಪ್ತಿಯಾಗುತ್ತದೆ? ದಯಾನಿಧಿ ಸಂತರು ತೋರಿದ ಮಾರ್ಗದಲ್ಲಿ ನಡೆಯದಿದ್ದರೆ, ಅವರ ಅನುಗ್ರಹವಾಗುವದಿಲ್ಲ. ಆದ್ದರಿಂದ ಭವಸಾಗರವನ್ನು ದಾಟಲಿಕ್ಕೆ ಸಂತರ ಸಹವಾಸ ಬಿಟ್ಟು ಬೇರೆ ಯಾವುದೇ ಉಪಾಯವಿಲ್ಲೆಂದು ಸಂತ ಜ್ಞಾನೇಶ್ವರರು ತಮ್ಮ ಪ್ರತ್ಯಕ್ಷ ಅನುಭವ ಪ್ರಮಾಣದಿಂದ ಹೇಳುತ್ತಾರೆ.

ಟೀಪ :- ಸಂತರ ಗ್ರಂಥಗಳನ್ನು (ಗೂಡಾರ್ಥ ಸಹಿತ) ಆಳವಾಗಿ ಅಭ್ಯಸಿಸಿ, ಅದರಂತೆ ನಮ್ಮ ಪ್ರತ್ಯಕ್ಷ ಜೀವನದಲ್ಲಿ ಅಳವಡಿಸುವುದೆಂದರೆ ಮಾತ್ರ, ಸಂತರ ಸಂಗತಿ ಮಾಡಿದಂತೆ.

೬) **ಸಾಧು ಬೋಧ ಝಾಲಾ ತೋ ನುರೋನಿಯಾ ಠೇಲಾ । ಠಾಯೀಂಚ ಮುರಾಲಾ ಅನುಭವ ॥**
ಕಾಪುರಾಚಿ ವಾತಿ ಉಜಳಲೀ ಜ್ಯೋತಿ । ಠಾಯೀಂಚ ಸಮಾಪ್ತಿ ಝಾಲೀ ಜೈಸೀ ॥
ಮೋಕ್ಷ ರೇಖೇ ಆಲಾ ಭಾಗ್ಯೇ ವಿನಟಲಾ । ಸಾಧೂಂಚಾ ಅಂಕಿಲಾ ಹರಿಭಕ್ತ ॥
ಜ್ಞಾನದೇವಾ ಗೋಡೀ ಸಂಗತಿ ಸಜ್ಜನೀ । ಹರಿ ದಿಸೆ ಜನೀ ವನೀ ಆತ್ಮತತ್ವೀ ॥

ಸಾಧನ ಚತುಷ್ಟಯಗಳಿಂದ ಅಂದರೆ ನಿತ್ಯಾನಿತ್ಯ ವಿವೇಕ, ವೈರಾಗ್ಯ ಶಮದಮಾದಿ ಷಟ್‌ಸಂಪತ್ತಿ, ಮುಮುಕ್ಷತ್ವ ಇವುಗಳಿಂದ ಚಿತ್ತ ಶುದ್ಧಿ ಮಾಡಿಕೊಂಡ ಶಿಷ್ಯನಿಗೆ ಸಾಧುಗಳು 'ತತ್ವಮಸಿ' ಅಂದರೆ ಆತ್ಮನೇ ನೀನಾಗಿದ್ದೀ ಎಂಬ ಬೋಧ ಮಾಡಿದೊಡನೆಯೇ ಅಪರೋಕ್ಷಾನುಭೂತಿಯಾಗುತ್ತದೆ. ಹೇಗೆಂದರೆ, ಕರ್ಪೂರಕ್ಕೆ ಅಗ್ನಿ ಸ್ಪರ್ಶ ಆದಡೊನೆಯೇ ಕರ್ಪೂರವು ಅಗ್ನಿಸ್ವರೂಪವಾಗಿ, ಕೊನೆಗೆ ಕರ್ಪೂರ ಅಗ್ನಿ ಎರಡೂ ಇಲ್ಲದಂತಾಗುತ್ತವೆ. ಸದ್ಗುರು ಕೃಪೆಯಾದ ಭಾಗ್ಯವಂತ ಶಿಷ್ಯನ ಅವಸ್ಥೆಯೂ ಹೀಗೆ ಆಗುತ್ತದೆ. ಅಂದರೆ ಜ್ಞಾನಾ-ಜ್ಞಾನ ವಿರಹಿತ ವಿಮಲ ಬ್ರಹ್ಮ ಸ್ವರೂಪವಾಗುತ್ತಾನೆ. ಸಂತರ ಸಹವಾಸದ ಪ್ರಭಾವದಿಂದ, ಜನನಿಬಿಡಪ್ರದೇಶವಾಗಲಿ, ಅರಣ್ಯವಾಗಲಿ, ಶ್ರೀ ಹರಿಯೇ ದಟ್ಟವಾಗಿ ಆತ್ಮಸ್ವರೂಪನಾಗಿ ತುಂಬಿದ ಅನುಭವವಾಗಿದೆಯೆಂದು ಜ್ಞಾನೇಶ್ವರರು ಹೇಳುತ್ತಾರೆ.

೭) **ಪರ್ವತಾ ಪ್ರಮಾಣೆ ಪಾತಕ ಕರಣೆ । ವಜ್ರಲೇಪ ಹೋಣೆ ಅಭಕ್ತಾಂಸೀ ॥**
ನಾಹೀಂ ಜ್ಯಾಸೀ ಭಕ್ತಿ ತೋ ಪತಿತ ಅಭಕ್ತ। ಹರಿಸೀ ನ ಭಜತ ದೈವಹತ ॥
ಅನಂತ ವಾಚಾಳ ಬರಳತೀ ಬರಳ । ತ್ಯಾ ಕೈಸೇನಿ ಗೋಪಾಳ ಪಾವೇ ಹರಿ? ॥
ಜ್ಞಾನದೇವಾ ಪ್ರಮಾಣ ಆತ್ಮಾ ಹಾ ನಿಧಾನ । ಸರ್ವಾಂಘಟೀ ಪೂರ್ಣ ಏಕ ನಾಂದೇ ॥

ಹಿಂದೆ ಅಪರಂಪಾರ ಪಾಪ ಮಾಡಿದ್ದರೂ, ಅದು ಹರಿಭಕ್ತಿಯಿಂದ ಸುಟ್ಟು ಭಸ್ಮವಾಗುತ್ತದೆ. ಆದರೆ ಭಕ್ತಿಯನ್ನೇ ಮಾಡದವನಿಗೆ ಅದು ಪರ್ವತ ಪ್ರಾಯವಾಗಿ ಬೆಳೆಯುತ್ತ ಕೊನೆಗೆ ವಜ್ರಲೇಪವಾಗುತ್ತದೆ. ಪಾಪ ತೊಳೆಯಲಿಕ್ಕೆ ಆಗುವುದಿಲ್ಲ, ಅಂದರೆ ಪಾತ್ರೆಗೆ ಗಿಲಾಯಿ ಮಾಡಿದಂತಾಗುತ್ತದೆ. ಆದ್ದರಿಂದ ಭಕ್ತಿಯನ್ನೇ ಮಾಡದ ಅಭಕ್ತನು, ಪಾಪಿಷ್ಟನೂ ಹಾಗೂ ನತದೃಷ್ಟನೇ ಸರಿ. ಹರಿ ಭಕ್ತಿ ಮಾಡದೇ ಕೇವಲ ಪ್ರಪಂಚಕ್ಕೆ ಸಂಬಂಧಿಸಿದ ಅನಂತ ವಿಷಯಗಳನ್ನು ಉಪನ್ಯಾಸ ಮಾಡುವವನಿಗೆ ಭಗವತ್ ಪ್ರಾಪ್ತಿ ಹೇಗೆ ಸಾಧ್ಯ? ಏಕಮೇವ, ಅದ್ವಿತೀಯ, ಸರ್ವಾಂತರ್ಯಾಮಿಯಾಗಿ ಎಲ್ಲೆಲ್ಲೂ ತುಂಬಿಕೊಂಡಿರುವ ಆತ್ಮನೇ ನನ್ನ ಅಧಿಷ್ಠಾನ ಮತ್ತು ಸರ್ವಸ್ವವೆಂದು ಮಾವುಲಿ ಜ್ಞಾನೇಶ್ವರರು ಪ್ರತ್ಯಕ್ಷ ಪ್ರಮಾಣದಿಂದ ಹೇಳುತ್ತಾರೆ.

೮) **ಸಂತಾಂಚೆ ಸಂಗತಿ ಮನೋಮಾರ್ಗಗತಿ । ಆಕಳಾವಾ ಶ್ರೀಪತಿ ಏಣೆ ಪಂಥೆ ॥**
ರಾಮಕೃಷ್ಣ ವಾಚಾ ಭಾವ ಹಾ ಜೀವಾಚಾ । ಆತ್ಮಾ ಜೋ ಶಿವಾಚಾ ರಾಮ ಜಪ ॥
ಏಕ ತತ್ವ ನಾಮ ಸಾಧಿತೀ ಸಾಧನ । ದ್ವೈತಾಚೇ ಬಂಧನ ನ ಬಾಧೀಜೆ ॥

ನಾಮಾಮೃತ ಗೋಡಿ ವೈಷ್ಣವಾ ಲಾಧಲೀ । ಯೋಗಿಯಾ ಸಾಧಲೀ ಜೀವನಕಳಾ ॥
ಸತ್ವರ ಉಚ್ಚಾರ ಪ್ರಲ್ಹಾದೀ ಬಿಂಬಲಾ । ಉಧ್ಧವಾ ಲಾಧಲಾ ಕೃಷ್ಣದಾತಾ ॥
ಜ್ಞಾನದೇವ ಮ್ಹಣೆ ನಾಮ ಹೇ ಸುಲಭ । ಸರ್ವತ್ರ ದುರ್ಲಭ ವಿರಳಾ ಜಾಣೆ ॥

ಸಂತರು ಹೇಳಿದಂತೆ ಜೀವನಕ್ರಮ ತಿದ್ದಿಕೊಂಡು ಅಂದರೆ ನಿತ್ಯಾ ನಿತ್ಯ ವಿವೇಕ, ವೈರಾಗ್ಯ ಶಮದಮ ಷಟ್-ಸಂಪತ್ತಿ ಇವುಗಳನ್ನು ತೀವ್ರ ಮುಮುಕ್ಷತ್ವದಿಂದ ಸಾಧಿಸಿ ಹದಗೊಳಿಸಲ್ಪಟ್ಟ ಶುದ್ಧ ಚಿತ್ತದ ಮುಖಾಂತರವೇ ಪರಮಾತ್ಮ ಪ್ರಾಪ್ತಿ. ರಾಮಕೃಷ್ಣ ನಾಮೋಚ್ಚಾರವನ್ನೇ ನಿನ್ನ ಜೀವನದ ಪ್ರಾಣವೆಂಬಂತೆ ಸ್ವಭಾವವನ್ನಾಗಿಸು. ರಾಮಜಪವು ಶಂಭುವಿನ ಆತ್ಮದಲ್ಲಿ ಸದಾ ಜಾಗೃತವಿರುತ್ತದೆ. ರಾಮ ಅಥವಾ 'ರಾಮಕೃಷ್ಣಹರಿ' ಭಗವನ್ನಾಮಸ್ಮರಣೆಯೇ ಪರಬ್ರಹ್ಮ ಎಂಬ ವಿಶ್ವಾಸದಿಂದ, ಯಾರು ಸಾಧನೆ ಮಾಡುತ್ತಾರೋ ಅವರಿಗೆ, ದ್ವೈತ ಅಂದರೆ ಜಗ ಬೇರೆ, ತಾನು ಬೇರೆ, ಪರಮಾತ್ಮ ಬೇರೆ ಎಂಬ ಭಾವನೆ ಬರುವುದಿಲ್ಲ. ಯೋಗಿಗಳಿಗೆ ಯಮ, ನಿಯಮ, ಪ್ರಾಣಾಯಾಮ, ಆಸನ, ಮುದ್ರಾ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಇವುಗಳಿಂದ ಆತ್ಮಾನಂದವುಂಟಾಗುತ್ತದೆ. ನಾಮಧಾರಕ ವೈಷ್ಣವರಿಗೆ ನಾಮಾಮೃತದಿಂದ ಆತ್ಮಾನಂದ ಲಭಿಸುತ್ತದೆ. ನಾರದ ಮಹರ್ಷಿಗಳು ಬೋಧಿಸಿದ 'ಓಂ ನಮೋ ಭಗವತೇ ವಾಸುದೇವಾಯ' ಹನ್ನೆರಡು ಅಕ್ಷರ ಮಂತ್ರವು ಪ್ರಲ್ಹಾದನ ಹೃದಯ ಪ್ರವೇಶಿಸಿ ಶರೀರದೊಡನೆ ಏಕರೂಪವಾಯಿತು. ಉದ್ಧವನಿಗೆ ನಾಮಸ್ಮರಣೆ ಬಲದಿಂದಲೇ ಶ್ರೀ ಕೃಷ್ಣನಂಥ ಸಮರ್ಥ ಸದ್ಗುರು ಲಭಿಸಿದರು. ಇಂಥ ಈ ಭಗವನ್ನಾಮಸ್ಮರಣೆ ಅಥವಾ ನಾಮೋಚ್ಚಾರವು ಬಹಳೇ ಸುಲಭವಿದ್ದರೂ ಇದನ್ನು ಸಾಧನೆ ಮಾಡಿದವರು ಅಥವಾ ಮಾಡುತ್ತಿರುವವರು ಬಹಳ ವಿರಳ, ಅಂದರೆ ಸಿಗಬಹುದು ಅಥವಾ ಸಿಗಲಿಕ್ಕಿಲ್ಲಾ. ಯಾಕೆಂದರೆ, ಹಿಂದಿನ ಎಷ್ಟೋ ಜನ್ಮಗಳಲ್ಲಿ ಪರಿಶುದ್ಧ ಜೀವನ ಅಂದರೆ ಸಂತರು ನಿಯಮಿಸಿದ ಚೌಕಟ್ಟಿನಲ್ಲಿ ಜೀವನ ಕ್ರಮ ಸಾಧಿಸಿ ನಿಷ್ಕಾಮ ಭಕ್ತಿ ಮತ್ತು ಧರ್ಮ ಕಾರ್ಯಗಳಿಂದ ಶುದ್ಧ ಪುಣ್ಯ ಸಂಪಾದಿಸಿದವರು ಬಹಳ ವಿರಳ.

೯) ವಿಷ್ಣುವೀಣ ಜಪ ವ್ಯರ್ಥ ತ್ಯಾಚೆ ಜ್ಞಾನ । ರಾಮಕೃಷ್ಣೀ ಮನ ನಾಹೀ ಜ್ಯಾಚೆ ॥
ಉಪಜೋನಿ ಕರಂಟಾ ನೇಣೆ ಅದ್ವೈತ ವಾಟಾ । ರಾಮಕೃಷ್ಣೀ ಪೈಠಾ ಕೈಸೇನಿ ಹೋಯ? ॥
ದ್ವೈತಾಚೀ ಝಾಡಣೀ ಗುರುವೀಣ ಜ್ಞಾನ । ತಯಾ ಕೈಂಚಾ ಕೀರ್ತನ ಘಡೇಲ ನಾಮೀ ॥
ಜ್ಞಾನದೇವ ಮ್ಹಣೆ ಸಗುಣ ಹೇ ಧ್ಯಾನ । ನಾಮಪಾಠ ಮೌನ ಪ್ರಪಂಚಾಚೆ ॥

ಪರಮಾತ್ಮನ ಸ್ವರೂಪ ಲಕ್ಷಣಗಳನ್ನು ತಿಳಿದುಕೊಳ್ಳದೇ ಕೃತ್ರಿಮವಾಗಿ ಮನಸ್ಸಿಲ್ಲದೇ ಮಾಡುವ ಜಪವೂ ವ್ಯರ್ಥ. ಹಾಗೂ ಜ್ಞಾನವೂ ವ್ಯರ್ಥ, ಪರಮಾತ್ಮನು ಮೂಲತಃ ನಿರ್ವಿಕಲ್ಪ ಪೂರ್ಣ ಇದ್ದರೂ ಸಗುಣನೂ ಅವನೇ, ನಿರ್ಗುಣನೂ ಅವನೇ, ಜಗತ್ತಿಗೆ ಉಪಾದಾನ ಹಾಗೂ ನಿಮಿತ್ತ ಕಾರಣನೂ ಅವನೇ. ಎಲ್ಲ ನಾಮ ರೂಪಗಳ ದೇವರು, ದೇವತೆಗಳೂ ಅವನೇ ಎಂಬ ಅಭೇದ ಭಾವದಿಂದ ನಾಮೋಚ್ಚಾರ ಮಾಡಬೇಕು. ದುರ್ಲಭ ಮನುಷ್ಯ ದೇಹ ದೊರಕಿದರೂ, ಮೇಲೆ ಹೇಳಿದಂತೆ ಅದರ ಸದುಪಯೋಗ ಮಾಡಿಕೊಂಡು ಅದ್ವೈತ ಜ್ಞಾನ ಮಾಡಿಕೊಳ್ಳದವರು ದುರ್ದೈವಿಗಳೇ ಸೈ. ಗುರು ಕೃಪೆಯಿಲ್ಲದೇ ಅಂದರೆ ಜೀವ ಬೇರೆ ಬ್ರಹ್ಮ ಬೇರೆ ಎಂಬ ದ್ವಂದ್ವ ಹೋಗದೇ, ಅಭೇದ ಭಜನೆ ಹೇಗೆ ಸಾಧ್ಯ? ನಾಮದಲ್ಲೇ (ಕೀರ್ತನದಲ್ಲೇ) ನಾಮೀ ಅಂದರೆ ಶ್ರೀ ಹರಿ ಇದ್ದಾನೆ ಎಂಬ ಭಾವನೆ ದೃಢವಾಗಲು ಹೇಗೆ ಸಾಧ್ಯ? ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ತನ್ನ ಹೃದಯದಲ್ಲಿ ಇದ್ದಾನೆಂಬ ಅರಿವಾಗುವುದು ಹೇಗೆ ಸಾಧ್ಯ? ಮಾವುಲಿಜ್ಞಾನೇಶ್ವರರು ಹೇಳುವುದೇನೆಂದರೆ, ನಾನು ಶ್ರೀ ಹರಿಯ ಸಗುಣ ರೂಪದ ಧ್ಯಾನದಲ್ಲಿ, ಅವನ ಸಗುಣ ನಾಮದ (ವಿಠ್ಠಲ) ಉಚ್ಚಾರ ಸತತ ಮಾಡುತ್ತ ಇದ್ದೇನೆ ಮತ್ತು ಪ್ರಪಂಚದ ವಿಷಯದಲ್ಲಿ ಅನಾಸಕ್ತನಾಗಿದ್ದೇನೆ.

೧೦) ತ್ರಿವೇಣಿ ಸಂಗಮಿ ನಾನಾ ತೀರ್ಥೆ ಭ್ರಮೀ । ಚಿತ್ತ ನಾಹೀಂ ನಾಮೀ ತರೀ ತೇ ವ್ಯರ್ಥ ॥
ನಾಮಾಸೀ ವಿನ್ಮುಖ ತೋ ನರ ಪಾಪಿಯಾ । ಹರಿವೀಣ ಧಾವಯಾ ನ ಪವೇ ಕೋಣೀ ॥
ಪುರಾಣ ಪ್ರಸಿದ್ಧ ಬೋಲಿಲೆ ವಾಲ್ಮೀಕ । ನಾಮೇ ತೀನ್ಹೀಂ ಲೋಕ ಉದ್ಧರತೀ ॥
ಜ್ಞಾನದೇವ ಮ್ಹಣೆ ನಾಮ ಜಪಾ ಹರೀಚೆ । ಪರಂಪರಾ ತ್ಯಾಚೆ ಕುಳ ಶುದ್ಧ ॥

ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮಕ್ಕೆ ತ್ರಿವೇಣಿ ಸಂಗಮ ಅಥವಾ ಪವಿತ್ರ ಪ್ರಯಾಗ ಕ್ಷೇತ್ರವೆನ್ನುತ್ತಾರೆ. ಮನದಲ್ಲಿ ಶ್ರೀ ಹರಿ ಪ್ರೀತಿ ಮತ್ತು ಅವನ ನಾಮೋಚ್ಚಾರವಿಲ್ಲದೇ, ಇಂಥ ಅನೇಕ ಅತೀ ಪವಿತ್ರ ತೀರ್ಥಗಳ ಯಾತ್ರೆ ಮಾಡಿದರೂ ಅದು ವ್ಯರ್ಥ ಶ್ರಮ. ಮುಖದಿಂದ ನಾಮೋಚ್ಚಾರ ಮಾಡದಿರುವದೇ ಮಹಾಪಾಪ. ಇಂಥ ಮಹಾಪಾಪಗಳಿಂದ ಬಿಡುಗಡೆ ಹೊಂದಲು ಶ್ರೀ ಹರಿ ಬಿಟ್ಟು ಬೇರಾರೂ ಸಮರ್ಥರಿಲ್ಲ. ವಾಲ್ಮೀಕಿ ಮಹರ್ಷಿಗಳು ರಾಮಾಯಣದಂಥ ಪ್ರಸಿದ್ಧ ಗ್ರಂಥದಲ್ಲಿ, ನಾಮೋಚ್ಚಾರದಿಂದ ಮಾತ್ರ ಮೂರೂ ಲೋಕಗಳು ಉದ್ಧಾರವಾಗುತ್ತವೆಂದು ಉಲ್ಲೇಖಿಸಿದ್ದಾರೆ. ಆದ್ದರಿಂದ ನಾಮಸ್ಮರಣೆ ಮಾಡುವ ವ್ಯಕ್ತಿಯ ಕುಲ ಪರಂಪರೆ ಎಲ್ಲವೂ ಶುದ್ಧವಾಗಿಯೇ ಪರಿಗಣಿಸಲ್ಪಡುತ್ತವೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೧) ಹರಿ ಉಚ್ಚಾರಣೆ ಅನಂತ ಪಾಪರಾಸೀ । ಜಾತೀಲ ಲಯಾಸೀ ಕ್ಷಣ ಮಾತ್ರೇ ॥
ತೃಣ ಅಗ್ನಿ ಮೇಳೆ ಸಮರಸ ಝಾಲೆ । ತೈಸೇ ನಾಮೇ ಕೇಲೆ ಜಪತಾ ಹರಿ ॥
ಹರಿ ಉಚ್ಚಾರಣ ಮಂತ್ರ ಹಾ ಅಗಾಧ । ಪಳೇ ಭೂತ ಬಾಧಾ ಭೇಣೆ ತೇಥೆ ॥
ಜ್ಞಾನದೇವ ಮ್ಹಣೆ ಹರಿ ಮಾಝಾ ಸಮರ್ಥ । ನ ಕರವೇ ಅರ್ಥ ಉಪನಿಷದಾ ॥

ಶ್ರೀ ಹರಿಯ ನಾಮೋಚ್ಚಾರದಿಂದ ಹಿಂದಿನ ಅನಂತ ಜನ್ಮಗಳಲ್ಲಿ ಕೂಡಿ ಹಾಕಿದ ಪಾಪರಾಶಿಯು ಒಂದೇ ಜನ್ಮದಲ್ಲಿ ನಾಶವಾಗುವದು. ಒಣ ಹುಲ್ಲು ಅಗ್ನಿ ಸ್ಪರ್ಶದಿಂದ ಅಗ್ನಿ ರೂಪವಾಗುವಂತೆ ಹರಿನಾಮ ಜಪದಿಂದ ಮಾನವನು ಹರಿ ರೂಪವೇ ಆಗುತ್ತಾನೆ. ಹರಿನಾಮ ಉಚ್ಚಾರ ಮಂತ್ರದಲ್ಲಿ ಭೂತಬಾಧೆ ಮತ್ತು ಸಂಸಾರ ಭಯ ಇಲ್ಲದಂತೆ ಮಾಡುವ ಸಾಮರ್ಥ್ಯವಿದೆ. ವೇದಗಳ ಜ್ಞಾನದ ಭಾಗವಾದ ಉಪನಿಷತ್ತುಗಳು ಸಹ ಶ್ರೀ ಹರಿಯ ಸಾಮರ್ಥ್ಯವನ್ನು ಅರ್ಥ ಮಾಡಿಕೊಂಡಿಲ್ಲವೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೨) ತೀರ್ಥ ವ್ರತ ನೇಮ ಭಾವೇವೀಣ ಸಿದ್ಧೀ । ವಾಯಾಂಚಿ ಉಪಾಧೀ ಕರಿಸೀ ಜನಾ ॥
ಭಾವ ಬಳೇ ಆಕಳೇ ಏರ್ಹವೀ ನಾಕಳೇ । ಕರತಳೀ ಆವಳೆ ತೈಸಾ ಹರಿ ॥
ಪಾರಿಯಾಚಾ ರವಾ ಘೇತಾ ಭೂಮಿವರಿ । ಯತ್ನ ಪರೋಪರಿ ಸಾಧನ ತೈಸೆ ॥
ಜ್ಞಾನದೇವ ಮ್ಹಣೆ ನಿವೃತ್ತಿ ನಿರ್ಗುಣ । ದಿಧಲೇ ಸಂಪೂರ್ಣ ಮಾಝೇ ಹಾತೀ ॥

ತೀರ್ಥ ವ್ರತ ನಿತ್ಯನೇಮ ಇತ್ಯಾದಿಗಳ ಅನುಷ್ಠಾನಗಳು, ಶ್ರೀ ಹರಿಯಲ್ಲಿ ಶ್ರದ್ಧೆ ಮತ್ತು ದೃಢ ವಿಶ್ವಾಸವಿಟ್ಟು ಮಾಡಿದರೆ ಮಾತ್ರ ಫಲಪ್ರದವಾಗಿ ಅಂಗೈಯಲ್ಲಿಯ ನೆಲ್ಲಿಕಾಯಿಯಂತೆ ಪರಮಾತ್ಮ ಪ್ರಾಪ್ತಿಯಾಗುತ್ತದೆ. ಪಾರಜದ ಕಣಗಳು ಭೂಮಿಯ ಮೇಲೆ ಬಿದ್ದರೆ ತಿರುಗಿ ಆರಿಸುವದು ಹೇಗೆ ಕಷ್ಟವೋ, ಅದೇ ರೀತಿ ವಿಶ್ವಾಸವಿಲ್ಲದ ಮನುಷ್ಯನಿಗೆ ಭಗವತ್ ಪ್ರಾಪ್ತಿ ಬಹುದೂರ. ಶ್ರೀ ಗುರು ನಿವೃತ್ತಿನಾಥರು ಪರಮಾತ್ಮನ ನಿರ್ಗುಣ ಸ್ವರೂಪ ಜ್ಞಾನವನ್ನು ಪರಿಪೂರ್ಣವಾಗಿ ನನಗೆ ಬೋಧ ಮಾಡಿದರೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೩) ಸಮಾಧಿ ಹರೀಚಿ ಸಮಸುಖೇವೀಣ । ನ ಸಾಧೇಲ ಜಾಣ ದ್ವೈತ ಬುದ್ಧಿ ॥
ಬುದ್ಧೀಚೆ ವೈಭವ ಅನ್ಯ ನಾಹೀ ದುಜೆ । ಏಕಾ ಕೇಶಿರಾಜೆ ಸಕಳ ಸಿದ್ಧಿ ॥
ರಿದ್ಧಿ ಸಿದ್ಧಿ ನಿಧಿ ಅವಘೀಚ ಉಪಾಧಿ । ಜಂವ ತ್ಯಾ ಪರಮಾನಂದೀ ಮನ ನಾಹೀಂ ॥
ಜ್ಞಾನದೇವಿ ರಮ್ಯ ರಮಲೇ ಸಮಾಧಾನ । ಹರೀಚೆ ಚಿಂತನ ಸರ್ವಕಾಳ ॥

ಪ್ರತಿ ಜೀವನಲ್ಲಿರುವ ಆತ್ಮ ಬೇರೆ, ವಿಶ್ವದಲ್ಲಿಯ ವಿಶ್ವಾತ್ಮ ಬೇರೆ, ಹೀಗೆ ದ್ವೈತ

ಬುದ್ಧಿಯಿಂದ ಮಾಡಿದ ಭಕ್ತಿಯು, ಸ್ವಸ್ವರೂಪ ಜ್ಞಾನ ಕೊಡುವುದಿಲ್ಲ. ಪರಮಾತ್ಮನಲ್ಲಿ ಎಲ್ಲರೂ ಮತ್ತು ಎಲ್ಲರಲ್ಲೂ ಪರಮಾತ್ಮನೇ ಭಿನ್ನ ಭಿನ್ನ ನಾಮ ರೂಪಗಳಿಂದ ತುಂಬಿಕೊಂಡಿದ್ದಾನೆಂದು, ಬುದ್ಧಿಯಲ್ಲಿ ನಿಶ್ಚಿತಾರ್ಥವಾದರೆ ಎಲ್ಲವೂ ಸಿದ್ಧಿಸಿದಂತೆ. ಅಣಿಮಾದಿ ಅಷ್ಟಸಿದ್ಧಿ ಐಶ್ವರ್ಯಗಳು ಪ್ರಾಪ್ತವಾದರೂ ಪರಮಾನಂದ ರೂಪನಾದ ಶ್ರೀ ಹರಿಯಲ್ಲಿ ಶ್ರದ್ಧೆಯಿಲ್ಲದಿದ್ದರೆ ಆದೆಲ್ಲವೂ ಕೊನೆಗೆ ನಿರರ್ಥಕವೇ. ನಿರಂತರ ಹರಿಚಿಂತನೆಯಲ್ಲಿಯೇ ನನಗೆ ಸಂತೋಷ ಸಮಾಧಾನ ಲಭಿಸುತ್ತದೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೪) ನಿತ್ಯ ಸತ್ಯಮಿತ ಹರಿಪಾಠ ಜ್ಯಾಸೀ । ಕಳಿಕಾಳ ತ್ಯಾಸೀ ನ ಪಾಹೇ ದೃಷ್ಟಿ ॥
ರಾಮಕೃಷ್ಣ ಉಚ್ಚಾರ ಅನಂತರಾಶೀ ತಪ । ಪಾಪಾಚೆ ಕಳಪ ಪಳತೀ ಪುಢೇ ॥
ಹರಿ ಹರಿ ಹರಿ ಮಂತ್ರ ಹಾ ಶಿವಾಚಾ । ಮ್ಹಣತೀ ಜೇ ವಾಚಾ ತಯಾ ಮೋಕ್ಷ ॥
ಜ್ಞಾನದೇವಾ ಪಾಠ ನಾರಾಯಣ ನಾಮ । ಪಾವಿಜೆ ಉತ್ತಮ ನಿಜಸ್ಥಾನ ॥

ನಿತ್ಯ ನೇಮದಿಂದ ಮತ್ತು ಪ್ರೇಮದಿಂದ ಸ್ವಲ್ಪವಾದರೂ ನಾಮೋಚ್ಚಾರ ಮಾಡಿದ್ದಾದರೆ ಕಲಿಯಾಗಲಿ, ಯಮನಾಗಲಿ ನಾಮಧಾರಕನನ್ನು ದಂಡಿಸುವ ಧೈರ್ಯ ಮಾಡುವುದಿಲ್ಲ. ರಾಮ ಕೃಷ್ಣ ಉಚ್ಚಾರ ಮಾಡುವ ವ್ಯಕ್ತಿ ಅನಂತ ರಾಶಿ ರಾಶಿಯಾಗಿ ಪುಣ್ಯ ಸಂಪಾದನೆ ಮಾಡುವುದರಿಂದ, ಪಾಪಗಳ ದೊಡ್ಡ ದೊಡ್ಡ ಹಿಂಡುಗಳು ಅವನಿಂದ ದೂರ ಓಡಿ ಹೋಗುತ್ತವೆ. ಹರಿ ಅಂದರೆ ರಾಮನಾಮ, ಇದು ಶಂಭುವಿನ ಮಂತ್ರವಾದ್ದರಿಂದ ಮೋಕ್ಷದಾಯಕವಾಗಿರುತ್ತದೆ. ನಾರಾಯಣ ನಾಮದಿಂದ ನಾನು ಸಚ್ಚಿದಾನಂದ ಸ್ವರೂಪ ಹೊಂದಿದ್ದು, ಆದರಂತೆ ನೀವೂ ನಾಮಸ್ಮರಣೆಯಿಂದ ನಿಮ್ಮ ಉದ್ಧಾರ ಮಾಡಿಕೊಳ್ಳಿರೆಂದು ಮಾವುಲಿಯವರು ಹೇಳುತ್ತಾರೆ.

೧೫) ಏಕ ನಾಮ ಹರಿ ದ್ವೈತ ನಾಮ ದೂರೀ । ಅದ್ವೈತ ಕುಸರೀ ವಿರಳಾ ಜಾಣೆ ॥
ಸಮ ಬುದ್ಧಿ ಘೇತಾ ಸಮಾನ ಶ್ರೀ ಹರಿ । ಶಮ ದಮಾ ವರಿ ಹರಿ ಝಾಲಾ ॥
ಸರ್ವಾಂಘಟೀ ರಾಮ ದೇಹಾದೇಹಿ ಏಕ । ಸೂರ್ಯ ಪ್ರಕಾಶಕ ಸಹಸ್ರರಶ್ಮೀ ॥
ಜ್ಞಾನದೇವಾ ಚಿತ್ತೀ ಹರಿಪಾಠ ನೇಮಾ । ಮಾಗಿಲಿಯಾ ಜನ್ಮಾ ಮುಕ್ತ ಝಾಲೋ ॥

ಶ್ರೀ ಹರಿಯ ಲಕ್ಷಣಗಳಾದ ಸರ್ವ ವ್ಯಾಪಕತ್ವ ಸರ್ವಜ್ಞತ್ವ ಸರ್ವಶಕ್ತ, ಎಲ್ಲ ಸಗುಣ ರೂಪಗಳು ಇತ್ಯಾದಿ, ಅವನ ನಾಮದಲ್ಲೇ ಸಮಾವಿಷ್ಟವಾಗಿವೆ ಎಂಬ ನಿಶ್ಚಯಾತ್ಮಕ ಬುದ್ಧಿಯಿಂದ ಸಾಧನೆ ಮಾಡುವ ನಾಮಧಾರಕರು ಬಹಳ ವಿರಳ. ಯಾಕೆಂದರೆ ಭೇದ ಬುದ್ಧಿ ಇದ್ದವರೇ

ಬಹಳ ಜನ. ಇದಕ್ಕೆ ಮೂಲ ಕಾರಣ ಅನಂತ ಜನ್ಮಗಳ ಅಜ್ಞಾನ. ಇಂಥವರಿಂದ ಶ್ರೀ ಹರಿಯು ಬಹಳ ದೂರ. ಶ್ರೀ ಹರಿಯು ಎಲ್ಲ ಕಡೆಗೆ ಸಮಾನವಾಗಿ ತುಂಬಿಕೊಂಡಿದ್ದಾನೆಂಬ ದೃಢ ನಿಶ್ಚಯದಿಂದ ಇಂದ್ರಿಯ ಮತ್ತು ಮನೋನಿಗ್ರಹದೊಂದಿಗೆ ನಾಮ ಜಪ ಮಾಡಿದ್ದಾದರೆ, ಸಾಧಕನು ಹರೀ ರೂಪವೇ ಆಗುತ್ತಾನೆ. ನೀರು ತುಂಬಿದ ಸಾವಿರಾರು ಕೊಡಗಳಲ್ಲಿ, ಒಬ್ಬನೇ ಸೂರ್ಯನ ಪ್ರತಿಬಿಂಬ ಎಲ್ಲ ಕೊಡಗಳಲ್ಲಿ ಕಾಣಿಸುವಂತೆ, ಜಗತ್ತಿನ ಎಲ್ಲ ಪ್ರಾಣಿಗಳ ದೇಹದಲ್ಲಿ ಒಬ್ಬನೇ ರಾಮನು ಪ್ರತಿಬಿಂಬ ರೂಪದಲ್ಲಿ ಇದ್ದಾನೆ. ತಮ್ಮ ಚಿತ್ತದಲ್ಲಿ ಹರಿ ನಾಮೋಚ್ಚಾರದ ಸಹಜ ನಿಯಮ ಹಾಕಿಕೊಂಡಿದ್ದರಿಂದ ಜನ್ಮ ಮರಣ ಸರಪಳಿಯಿಂದ ಮುಕ್ತನಾಗಿದ್ದೇನೆಂದು ಮಾವುಲಿ ಜ್ಞಾನೇಶ್ವರರು ಹೇಳಿದ್ದಾರೆ.

ಉದಾ : ತೈಸೇ ಯೇಣೇಚಿ ಶರೀರೆ, ಶರೀರಾ ಯೇಣೇ ಸರೇ, ಕಿಂಬಹುನಾ ಯೇರಝಾರೆ ಚಿರಾ ಪಡೇ.. ಜ್ಞಾ. ಮ.

೧೬) ಹರಿ ಬುದ್ಧಿ ಜಪೆ ತೊ ನರ ದುರ್ಲಭ । ವಾಚೇಸಿ ಸುಲಭ ರಾಮಕೃಷ್ಣ ॥
ರಾಮಕೃಷ್ಣ ನಾಮೀಂ ಉನ್ಮನೀ ಸಾಧಲೀ । ತಯಾಸೀ ಲಾಧಲೀ ಸಕಳ ಸಿದ್ಧೀ ॥
ಸಿದ್ಧಿ ಬುದ್ಧಿ ಧರ್ಮ ಹರಿಪಾಠೀ ಆಲೆ । ಪ್ರಪಂಚೀ ನಿವಾಲೆ ಸಾಧು ಸಂಗೇ ॥
ಜ್ಞಾನದೇವೀ ನಾಮ ರಾಮಕೃಷ್ಣ ಠಸಾ । ಯೆಣೆ ದಶದಿಶಾ ಆತ್ಮಾರಾಮ ॥

ರಾಮಕೃಷ್ಣ ನಾಮ ಅತೀ ಸರಳ ಮತ್ತು ಸುಲಭ ಇದ್ದರೂ ದೃಢ ಮನಸ್ಸು- ಬುದ್ಧಿಯಿಂದ ಜಪ ಮಾಡುವ ನರರು ದುರ್ಲಭ. ಸತತ ರಾಮಕೃಷ್ಣ ಜಪದಿಂದ ತಮ್ಮನ್ನೇ ತಾವು ಮರೆತವರು (ದೇಹ ಭಾವದ ಮರೆವು ಇದೇ ಉನ್ಮನಿ ಅವಸ್ಥೆ) ಎಲ್ಲ ಸಿದ್ಧಿಗಳನ್ನು ಪ್ರಾಪ್ತ ಮಾಡಿಕೊಂಡಿದ್ದಾರೆ. ಪ್ರಪಂಚದಲ್ಲಿದ್ದರೂ ಸತ್ಸಂಗ ಮತ್ತು ನಾಮಜಪ ಬಲದಿಂದ ಐಶ್ವರ್ಯ, ಚಾತುರ್ಯ, ಧರ್ಮ ಇವನ್ನೆಲ್ಲ ಪಡೆಯಲು ಸಾಧ್ಯವಿದೆ. ರಾಮಕೃಷ್ಣ ನಾಮ ನನ್ನ ಹೃದಯದಲ್ಲಿ ಮುದ್ರೆಯೊತ್ತಿದಂತಿದ್ದರಿಂದ ಎಲ್ಲೆಲ್ಲಿಯೂ ಆತ್ಮಾರಾಮನೇ ತುಂಬಿಕೊಂಡಿರುವ ಅನುಭವವಾಗುತ್ತದೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೭) ಹರಿಪಾಠ ಕೀರ್ತಿ ಮುಖೇ ಜರೀ ಗಾಯ । ಪವಿತ್ರಚಿ ಹೋಯ ದೇಹ ತ್ಯಾಚಾ ॥
ತಪಾಚೆ ಸಾಮರ್ಥ್ಯೆ ತಪಿನ್ನಲಾ ಅಮುಪ । ಚಿರಂಜೀವ ಕಲ್ಪ ವೈಕುಂಠೀ ನಾಂದೇ ॥
ಮಾತೃ ಪಿತೃ ಭ್ರಾತಾ ಸಗೋತ್ರ ಅಪಾರ । ಚತುರ್ಭುಜ ನರ ಹೋವುನಿ ಠೇಲೇ ॥
ಜ್ಞಾನಗೂಢಗಮ್ಯ ಜ್ಞಾನದೇವಾ ಲಾಧಲೇ । ನಿವೃತ್ತೀನೆ ದಿಲೇ ಮಾಝೂ ಹಾತೀ ॥

ಹರಿನಾಮ ಜಪ ಮತ್ತು ಹರಿ ಕೀರ್ತಿ ಅಂದರೆ ಹರಿ ಮಹಿಮೆಗಳನ್ನು ಪ್ರೇಮ ಭಾವದಿಂದ ಹಾಡಿ ಹರಿಸಿದರೆ ಭಕ್ತನ ದೇಹ ಪವಿತ್ರವಾಗುತ್ತದೆ. ನಾಮ ಜಪವೆಂಬ ತಪಸ್ಸಾಮರ್ಥ್ಯದಿಂದ ಅನಂತ ಕಲ್ಪದ ವರೆಗೆ ವೈಕುಂಠದಲ್ಲಿರುವ ಸೌಭಾಗ್ಯವು ಲಭಿಸುತ್ತದೆ. ನಾಮಧಾರಕನ ತಾಯಿ, ತಂದೆ, ಬಂಧು-ಬಳಗದವರೆಲ್ಲರೂ ಚತುರ್ಭುಜರಾಗುತ್ತಾರೆ, ಅಂದರೆ ಭಗವತ್ ಸ್ವರೂಪವಾಗುತ್ತಾರೆ. ಈ ಪರಮ ಗುಹ್ಯ ವರ್ಮವನ್ನು ಶ್ರೀಗುರು ನಿವೃತ್ತಿನಾಥರು ನನ್ನ ಸ್ವಾಧೀನ ಮಾಡಿದ್ದಾರೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೮) **ಹರಿವಂಶ ಪುರಾಣ ಹರಿನಾಮ ಸಂಕೀರ್ತನ । ಹರಿವೀಣ ಸೌಜನ್ಯ ನೇಣೇ ಕಾಹೀ ॥**
ತಯಾ ನರಾ ಲಾಧಲೆ ವೈಕುಂಠ ಜೋಡಲೇ । ಸಕಳಹೀ ಘಡಲೇ ತೀರ್ಥಾಟಣ ॥
ಮನೋಮಾರ್ಗೇ ಗೇಲಾ ತೋ ಏಥೇ ಮುಕಲಾ । ಹರಿಪಾಠಿ ಸ್ಥಿರಾವಲಾ ತೋಚಿ ಧನ್ಯ ॥
ಜ್ಞಾನದೇವಾ ಗೋಡಿ ಹರಿನಾಮಾಚೀ ಜೋಡಿ । ರಾಮಕೃಷ್ಣ ಆವಡೀ ಸರ್ವಕಾಳ ॥

ಶ್ರೀಹರಿಯ ಚರಿತ್ರೆಗಳನ್ನು ಹಾಗೂ ಗುಣಗಳನ್ನು ಪುರಾಣಗಳಲ್ಲಿ ವೇದವ್ಯಾಸರು ವರ್ಣಿಸಿದ್ದಾರೆ. ಈ ಪುರಾಣ ಪುಣ್ಯ ಕಥೆಗಳನ್ನು ಅಭಿರುಚಿಯಿಂದ ಓದುವ ಭಕ್ತನು, ಈ ಜಗತ್ತಿನಲ್ಲಿ ಶ್ರೀಹರಿಗಿಂತ ಹೆಚ್ಚಿನದೇನೂ ಇಲ್ಲವೆಂದು ನಿಶ್ಚಯಿಸಿ ಶ್ರೀಹರಿಯನ್ನೇ ಅತಿ ಆದರ ಪ್ರೇಮಗಳಿಂದ ಹೃದಯದಲ್ಲಿರಿಸಿಕೊಳ್ಳುತ್ತಾನೆ. ಇಂಥ ಭಕ್ತನು ಯಾವುದೇ ತೀರ್ಥಾಟನ ಮಾಡುವುದಾಗಲಿ, ವೈಕುಂಠವಾಸ ಬಯಸುವ ಅವಶ್ಯಕತೆ ಇಲ್ಲ. ಯಾಕೆಂದರೆ ತಾನಿದ್ದ ಸ್ಥಾನದಲ್ಲೇ ವೈಕುಂಠ ಶ್ರೀಹರಿ ಬಂದು ವಾಸವಾಗಿರುತ್ತಾನೆ. ಸ್ವೇಚ್ಛಾಚಾರಿಗೆ ಅಂದರೆ ಮನೋನಿಗ್ರಹ ಇಲ್ಲದವನಿಗೆ ಈ ಲಾಭ ಸಿಗುವುದಿಲ್ಲ. ಹರಿಜಪದಲ್ಲಿ ಮನಸ್ಸು ಸ್ಥಿರಗೊಳಿಸಿದವನೇ ಧನ್ಯನು. ಹರಿನಾಮ ಜಪದ ರುಚಿ ನನಗೆ ಹತ್ತಿದ್ದರಿಂದ ರಾಮಕೃಷ್ಣ ನಾಮ ಯಾವಾಗಲೂ ಪ್ರೇಮದಿಂದ ಜಪಿಸುತ್ತಿದ್ದೇನೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೧೯) **ವೇದ ಶಾಸ್ತ್ರ ಪುರಾಣ ಶ್ರುತೀಚೆ ವಚನ । ಏಕ ನಾರಾಯಣ ಸಾರ ಜಪ ॥**
ಜಪ ತಪ ಕರ್ಮ ಹರಿ ವೀಣ ಧರ್ಮ । ವಾಯಾಚಿ ಶ್ರಮ ವ್ಯರ್ಥ ಜಾಯ ॥
ಹರಿಪಾಠೀ ಗೇಲೇ ತೇ ನಿವಾಂತಚೀ ಠೇಲೇ । ಭ್ರಮರ ಗುಂತಲೆ ಸುಮನ ಕಳಿಕೆ ॥
ಜ್ಞಾನದೇವಿ ಮಂತ್ರ ಹರಿನಾಮಾಚೆ ಶಸ್ತ್ರ । ಯಮೇ ಕುಳಗೋತ್ರ ವರ್ಜಿಯೇಲೇ ॥

ಶ್ರೀಹರಿ ನಾಮಜಪವೇ ಸಾರವೆಂದು ವೇದ ಶಾಸ್ತ್ರ ಪುರಾಣಗಳಲ್ಲಿ ನಿರ್ದೇಶಿಸಲ್ಪಟ್ಟಿದೆ.

ಹರಿಪ್ರಾಪ್ತಿ ಉದ್ದೇಶದ ಹೊರತಾಗಿ ಮಾಡುವ ಜಪ, ತಪ, ಕರ್ಮ ಅಂದರೆ ಸ್ವಧರ್ಮಾಚರಣೆ ಇವೆಲ್ಲ ವ್ಯರ್ಥ ಶ್ರಮ. ಸುಮನದ ಮಕರಂದ ಸೇವನೆಯ ಆನಂದದಲ್ಲಿ ಭ್ರಮರವು ತನ್ನನ್ನು ತಾನು ಮರೆಯುವಂತೆ ಶ್ರೀಹರಿಜಪದಲ್ಲೇ ತಲ್ಲೀನನಾದ ಭಕ್ತನು ಜಗತ್ತನ್ನೇ ಮರೆಯುತ್ತಾನೆ. ಹರಿನಾಮ ಮಂತ್ರವೆಂಬ ಶಸ್ತ್ರವಿದ್ದ ನಾಮಧಾರಕನಿಗೆ ಮತ್ತು ಆವನ ಕುಲಗೋತ್ರಜರಿಗೆ ಯಮನ ಭಯವಿಲ್ಲವೆಂದು ಮಾವುಲಿಯವರು ಹೇಳುತ್ತಾರೆ.

೨೦) ನಾಮಸಂಕೀರ್ತನ ವೈಷ್ಣವಾಂಚೀ ಜೋಡಿ । ಪಾಪೇ ಅನಂತ ಕೋಡಿ ಗೇಲೀ ತ್ಯಾಂಚೀ ॥
ಅನಂತ ಜನ್ಮಾಂಚೆ ತಪ ಏಕ ನಾಮ । ಸರ್ವ ಮಾರ್ಗ ಸುಗಮ ಹರಿಪಾಠ ॥
ಯೋಗಯಾಗಕ್ರಿಯಾ ಧರ್ಮಾಧರ್ಮ ಮಾಯಾ । ಗೇಲೇ ತೇ ವಿಲಿಯಾ ಹರಿಪಾಠೀ ॥
ಜ್ಞಾನದೇವಿ ಯಜ್ಞ ಯಾಗ ಕ್ರಿಯಾಧರ್ಮ । ಹರಿವಿಣ ನೇಮ ನಾಹೀ ದುಜಾ ॥

ಭಕ್ತರು ನಾಮ ಸಂಕೀರ್ತನವನ್ನೇ ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಸ್ವೀಕರಿಸಿದ್ದರಿಂದ ಅವರ ಅನಂತ ಕೋಟಿ ಪಾಪಗಳು ಇಲ್ಲವಾಗುತ್ತವೆ. ಅನಂತ ಜನ್ಮಗಳಲ್ಲಿ ದೇಹದಂಡನೆ ಮಾಡಿದ ಸಾಧನಾ ಫಲವು ಕೇವಲ ಒಂದು ನಾಮ ಜಪದಲ್ಲಿ ಸಾಧಿಸಲ್ಪಡುತ್ತದೆ. ನಾಮಜಪ ಮಾರ್ಗ ಸರಳ ಮತ್ತು ಸುಲಭವಾದದ್ದು. ಯೋಗ, ಯಾಗ, ಕರ್ಮಾಚರಣೆ, ಧರ್ಮಾಧರ್ಮ ಇವುಗಳಿಂದ ಕೇವಲ ನಾಶವಂತ ಫಲಗಳು ಲಭಿಸುವವು. ಹರಿಪಾಠದಿಂದ ಅವಿನಾಶ ಅಂದರೆ ಪರಮಾತ್ಮ ಲಭಿಸುತ್ತಾನೆ. ಆದ್ದರಿಂದ ನಾಮಸ್ಮರಣೆ ಹೊರತಾಗಿ ಯಜ್ಞ ಯಾಗಕ್ರಿಯಾ ಧರ್ಮ ಇವ್ಯಾವೂ ನನ್ನ ಆಚರಣೆಯಲ್ಲಿ ಅಂದರೆ ಸಾಧನೆಯಲ್ಲಿ ಇಲ್ಲವೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೨೧) ಕಾಳ ವೇಳ ನಾಮ ಉಚ್ಚಾರಿತಾ ನಾಹೀಂ । ದೋನ್ಹೀ ಪಕ್ಷ ಪಾಹೀ ಉದ್ಧರತೀ ॥
ರಾಮಕೃಷ್ಣ ನಾಮ ಸರ್ವ ದೋಷಾಹರಣ । ಜಡಜೀವಾ ತಾರಣ ಹರಿ ಏಕ ॥
ಹರಿ ನಾಮ ಸಾರ ಜಿವ್ಹಾ ಯಾ ನಾಮಚೀ । ಉಪಮಾ ತ್ಯಾ ದೈವಾಚೀ ಕೋಣ ವಾನೀ ॥
ಜ್ಞಾನದೇವಾ ಸಾಂಗ ಝಾಲಾ ಹರಿಪಾಠ । ಪೂರ್ವಜಾ ವೈಕುಂಠ ಮಾರ್ಗ ಸೋಪಾ ॥

ನಾಮಜಪಕ್ಕೆ ನಿಶ್ಚಿತ ಕಾಲ-ವೇಳೆ ಏನೂ ನಿಗದಿ ಪಡಿಸಿಲ್ಲ. ಸರ್ವಕಾಲದಲ್ಲೂ ಮಾಡಬಹುದು. ಇದರಿಂದ ನಾಮಧಾರಕನ ತಾಯಿ ಮತ್ತು ತಂದೆ ಎರಡೂ ಬಳಗದವರು ಉದ್ಧಾರವಾಗುತ್ತಾರೆ. ರಾಮಕೃಷ್ಣ ನಾಮ ಜಪವು ಎಲ್ಲ ದೋಷಗಳ ಹರಣ ಮಾಡುತ್ತದೆ. ನಾಮಜಪ ಮಾಡುವ ಅಜ್ಞ ಜೀವಿಗಳ ಉದ್ಧಾರವನ್ನು ಸ್ವತಃ ಶ್ರೀ ಹರಿಯೇ ಮಾಡುತ್ತಾನೆ. ನಾಮ ಜಪವು ಸರ್ವ

ಸಾಧನೆಗಳ ಸಾರವಿದ್ದು, ಯಾರ ನಾಲಿಗೆಯಲ್ಲಿ ಅದು ಸದಾ ಕುಣಿಯುತ್ತಿದೆಯೋ ಆ ವ್ಯಕ್ತಿಯ ಭಾಗ್ಯಕ್ಕೆ ಪಾರವೇ ಇಲ್ಲ. ನಾಮಜಪ ನನ್ನಿಂದ ವಿಧಿವತ್ತಾಗಿ ನಡೆದಿದ್ದರಿಂದ ನನ್ನ ಎಲ್ಲ ಪೂರ್ವಜರಿಗೆ ಮೋಕ್ಷ ಮಾರ್ಗವು ಸಹಜ ಲಭಿಸಿದೆಯೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೨೨) ನಿತ್ಯ ನೇಮ ನಾಮೀ ತೇ ಪ್ರಾಣಿ ದುರ್ಲಭ । ಲಕ್ಷ್ಮೀವಲ್ಲಭ ತಯಾ ಜವಳೀ ॥
ನಾರಾಯಣ ಹರಿ ನಾರಾಯಣ ಹರಿ । ಭುಕ್ತಿ ಮುಕ್ತಿ ಚಾರೀ ಘರೀ ತ್ಯಾಂಚ್ಯಾ ॥
ಹರಿವೀಣ ಜನ್ಮ ತೋ ನರ್ಕಚಿ ಪೈಜಾಣಾ । ಯಮಾಚಾ ಪಾಹುಣಾ ಪ್ರಾಣಿ ಹೋಯ ॥
ಜ್ಞಾನದೇವ ಪುಸೇ ನಿವೃತ್ತಿಸೀ ಚಾಡ । ಗಗನಾಹೂನಿ ವಾಡ ನಾಮ ಆಹೇ ॥

ನಿತ್ಯ ನಿಯಮಿತವಾಗಿ ನಾಮ ಜಪ ಮಾಡುವವರು ದುರ್ಲಭವಿದ್ದು, ಇಂಥವರಲ್ಲಿ ಪರಮಾತ್ಮನ ವಾಸವಿರುತ್ತದೆ. ನಾರಾಯಣ ಹರಿ ನಮೋಚ್ಚಾರ ಸತತ ನೇಮದಿಂದ ಮಾಡುವವರ ಮನೆಯಲ್ಲಿ ಐಶ್ವರ್ಯ ಹಾಗೂ ಮುಕ್ತಿಗಳು ಇರುತ್ತವೆ. ಮನುಷ್ಯ ದೇಹದಲ್ಲಿದ್ದುಕೊಂಡು ನಾಮಜಪ ಮಾಡದ ಜೀವಿ ನರಕ ಸದೃಶ ಹಾಗೂ ಯಮಪುರಿಯ ಅತಿಥಿ ಇದ್ದಂತೆ. ಶ್ರೀ ಗುರು ನಿವೃತ್ತಿನಾಥರನ್ನು ನಾಮದ ಮಹಾತ್ಮೆ ಬಗ್ಗೆ ಕೇಳಿದೊಡನೆ, ಅದು ಆಕಾಶಕ್ಕಿಂತಲೂ ಹೆಚ್ಚು ವ್ಯಾಪಕವಾದದ್ದೆಂದು ತಿಳಿಸಿದರೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೨೩) ಸಾತ ಪಾಂಚ ತೀನ ದಶಕಾಂಚಾ ಮೇಳಾ । ಏಕ ತತ್ವೀ ಕಳಾ ದಾವೀ ಹರೀ ॥
ತೈಸೆ ನವ್ಹೇ ನಾಮ ಸರ್ವತ್ರ ವರಿಷ್ಠ । ತೇಥೆ ಕಾಹೀಂ ಕಷ್ಟ ನ ಲಗತೀ ॥
ಅಜಪಾ ಜಪಣೆ ಉಲಟ ಪ್ರಾಣಾಚಾ । ತೇಥೇಹಿ ಮಾನಾಚಾ ನಿರ್ಧಾರು ಅಸೇ ॥
ಜ್ಞಾನದೇವಾ ಜಿಣೇ ನಾಮೇವೀಣ ವ್ಯರ್ಥ । ರಾಮಕೃಷ್ಣೀ ಪಂಥ ಕ್ರಮಿಯೇಲಾ ॥

ಈ ಜಗತ್ತು ೭, ೫, ೩, ೧೦ ಹೀಗೆ ಭಿನ್ನ ಭಿನ್ನ ತತ್ವಗಳಿಂದ ಕೂಡಿದೆಯೆಂದು ಭಿನ್ನ ಭಿನ್ನ ಶಾಸ್ತ್ರಕಾರರು ಹೇಳುತ್ತಾರೆ. ಇವೆಲ್ಲ ಒಟ್ಟುಗೂಡಿ ೨೫ ತತ್ವಗಳೆಂದು ಕೆಲವರು ಹೇಳುತ್ತಾರೆ. ಆದರೆ ಇವೆಲ್ಲ ತತ್ವಗಳು ಒಬ್ಬನೇ ಒಬ್ಬ ಅದಿಷ್ಠಾನ ಸ್ವರೂಪದ ಕ್ಷೇತ್ರಜ್ಞ ಅಥವಾ ಪುರುಷನ ಸತ್ಯತ್ವದ ಮೇಲೆ ಅಸ್ತಿತ್ವದಲ್ಲಿದ್ದಂತೆ ತೋರಿ ಬದಲಾಗುತ್ತ ಕೊನೆಗೆ ಇಲ್ಲದಾಗುವುದರಿಂದ, ಕೇವಲ ಮೃಗ ಜಳವಿದ್ದಂತೆ. ಹೀಗೆ ಜಗತ್ತು ಮತ್ತು ಅದರ ತತ್ವಗಳ ಬಗ್ಗೆ ನಿರ್ಧಿಷ್ಟವಾಗಿ ಯಾರಿಗೂ ತಿಳಿದಿರುವುದಿಲ್ಲ. ಬಸವಣ್ಣನವರು ತಮ್ಮ ವಚನದಲ್ಲಿ 'ಜಗಕೆ ಬಲ್ಲಿದ ನೀನು

ನಿನಗೆ ಬಲ್ಲಿದ ನಾನು' ಎಂದು ಹೇಳಿದ್ದಾರೆ. ಆದರೆ ನಾಮ ಜಪ ಮಾಡುವದು ಕಷ್ಟಕರವೂ ಅಲ್ಲ ಮತ್ತು ಎಲ್ಲ ಸಾಧನಗಳ ರಾಜ. ಅಜಪಾಜಪ ಅಂದರೆ ಸೋಹಂ ಶ್ವಾಸೋಚ್ಛ್ವಾಸ; ಹಗಲೂ ರಾತ್ರಿ ೨೧,೬೦೦ ಸಲ ಜಪವಾಗುತ್ತವೆ. ಇದೇ ಸೋಹಂ ರಾಮ ಜಪವನ್ನು ನಾಲಿಗೆಯಿಂದ ಉಚ್ಚಾರವಿಲ್ಲದೇ ನಾನೇ ಮಾಡುತ್ತಿದ್ದೇನೆಂಬ ಮನಸ್ಸಿನ ನಿರ್ಧಾರ ಮಾಡುವ ಸಾಧಕನು ಭಾಗ್ಯವಂತನು. ಮಾವುಲಿ ಜ್ಞಾನೇಶ್ವರರು ತಮ್ಮ ಅನುಭವ ಹೇಳುತ್ತಾರೆ. ''ನಾಮ ಜಪದ ವ್ಯತಿರಿಕ್ತ ಜೀವಿಸುವುದು ವ್ಯರ್ಥವಾದ್ದರಿಂದ ರಾಮಕೃಷ್ಣ ನಾಮದ ಜಪವನ್ನೇ ನಾನು ಜೀವನದ ಮುಖ್ಯ ಧ್ಯೇಯವಾಗಿ ಅಂಗೀಕರಿಸಿದ್ದೇನೆ''.

೨೪) ಜಪ ತಪ ಕರ್ಮ ಕ್ರಿಯಾ ನೇಮ ಧರ್ಮ । ಸರ್ವಾಂಘಟೀ ರಾಮ ಭಾವ ಶುದ್ಧ ॥
ನ ಸೋಡಿರೆ ಭಾವೋ ಟಾಕೀರೆ ಸಂದೇಹೋ । ರಾಮಕೃಷ್ಣ ಟಾಹೋ ನಿತ್ಯ ಫೋಡೀ ॥
ಜಾತ ವಿತ್ತ ಗೋತ ಕುಳ ಶೀಳ ಮಾತ । ಭಜೀ ಕಾ ತ್ವರಿತ ಭಾವನಾಯುಕ್ತ ॥
ಜ್ಞಾನದೇವಾ ಧ್ಯಾನೀ ರಾಮಕೃಷ್ಣ ಮನೀ । ತೇಣೇ ವೈಕುಂಠಭುವನೀ ಘರ ಕೇಲೇ ॥

ಜಪ ತಪ ವೇದೋಕ್ತ ಕ್ರಿಯಾ ಕರ್ಮ, ನೇಮ, ಧರ್ಮ ಇವನ್ನು ಆಚರಿಸುವಾಗ ಎಲ್ಲದರಲ್ಲೂ ವ್ಯಾಪಕವಾಗಿ ಅಧಿಷ್ಠಾನ ರೂಪದಿಂದಿದ್ದ ಆತ್ಮಾರಾಮನಲ್ಲಿ ಶುದ್ಧ ಭಾವವನ್ನಿಡಬೇಕು; ಅಂದರೆ ಆಚರಣೆಯ ಫಲ ಸಿಗುತ್ತದೆ. ಸಂಶಯ ಕಿತ್ತೊಗೆದು ಶುದ್ಧ ಭಾವದಿಂದ ರಾಮಕೃಷ್ಣ ನಾಮ ಜಪ ಬೇಸರವಿಲ್ಲದೇ ಮಾಡಿರಿ; ಮತ್ತು ಮೇಲು ಜಾತಿಯವ, ಶೀಲವಂತ ಅಥವಾ ಧನಿಕ ಎಂಬ ಮಾತೆತ್ತದೇ ಭಾವನಾಯುಕ್ತನಾಗಿ ಕಳಕಳಿಯಿಂದ ಭಜಿಸಬೇಕು. ಧ್ಯಾನದಲ್ಲಿ ಮತ್ತು ಮನದಲ್ಲಿ ರಾಮಕೃಷ್ಣ ನಾಮವೇ ತುಂಬಿರುವುದರಿಂದ ನನ್ನ ಶರೀರ ಮತ್ತು ನಾನಿದ್ದ ಪ್ರದೇಶವೆಲ್ಲಾ ವೈಕುಂಠವಾಗಿದೆಯೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೨೫) ಜಾಣೀವ ನೇಣೀವ ಭಗವಂತೀ ನಾಹೀಂ । ಹರಿ ಉಚ್ಚಾರಣೀ ಪಾಹೆ ಮೋಕ್ಷ ಸದಾ ॥
ನಾರಾಯಣ ಹರಿ ಉಚ್ಚಾರ ನಾಮಾಚಾ । ತೇಥೇ ಕಳಿಕಾಳಾಚಾ ರಿಘ ನಾಹೀಂ ॥
ತೇಥೀಲ ಪ್ರಮಾಣ ನೇಣವೆ ವೇದಾಸಿ । ತೆ ಜೀವ ಜಂತೂಂಸೀ ಕೇವೀಂ ಕಳೇ ॥
ಜ್ಞಾನದೇವಾ ಫಳ ನಾರಾಯಣ ಪಾಠ । ಸರ್ವತ್ರ ವೈಕುಂಠ ಕೇಲೇ ಅಸೇ ॥

ಜ್ಞಾನ ಮತ್ತು ಅಜ್ಞಾನ ಇವೆರಡೂ ಭಗವಂತನಲ್ಲಿಲ್ಲ. ಪ್ರೇಮ ಭಾವದಿಂದ ನಾಮ ಜಪ ಮಾಡಿದರೆ ಮಾತ್ರ ಮೋಕ್ಷ. 'ಭಾವಾಸಾಠೀ ಹಾತೀ ಸಾಪಡಸೀ ಮತ್ತು ಭಾವಬಾಭುಕಾಳುದೇವ'. ಅಂದರೆ ಭಾವವಿಲ್ಲದೇ ದೇವ ಕೃಪೆಯಿಲ್ಲ, ಇದೇ ಸಿದ್ಧಾಂತ.

ನಾರಾಯಣ ಹರಿ ನಾಮೋಚ್ಚಾರ ಮಾಡುವ ನಾಮಧಾರಕನಲ್ಲಿ ಕಳಿಕಾಳ ಅಂದರೆ ಅನಿಷ್ಟ ಹಾಗೂ ದುಷ್ಟ ಗುಣಗಳು ಪ್ರವೇಶ ಮಾಡುವುದಿಲ್ಲ. ಶ್ರೀ ಹರಿಯ ಯಥಾರ್ಥ ಸ್ವರೂಪ ಜ್ಞಾನವು ವೇದಗಳಿಗೆ ತಿಳಿದಿಲ್ಲವೆಂದ ಮೇಲೆ ಮಂದಮತಿ ಜೀವಗಳಿಗೆ ಹೇಗೆ ತಿಳಿದೀತು? ನಾರಾಯಣ ನಾಮ ಪಾಠ ಫಲದಿಂದ ಎಲ್ಲ ಕಡೆ ಪರಮಾತ್ಮನೇ ಕಾಣಿಸುತ್ತಾನೆಂದು ಮಾವುಲಿ ಜ್ಞಾನೇಶ್ವರರು ತಮ್ಮ ಅನುಭವ ಹೇಳುತ್ತಾರೆ.

೨೬) ಏಕ ತತ್ವ ನಾಮ ದೃಢ ಧರೀ ಮನಾ। ಹರೀಸೀ ಕರುಣಾ ಏಯೀಲ ತುಝೀ ॥
ತೇ ನಾಮ ಸೋಪಾರೆ ರಾಮಕೃಷ್ಣ ಗೋವಿಂದ। ವಾಚೇಸೀ ಸದ್ಗದಾ ಜಪೇ ಆದೀ ॥
ನಾಮಾ ಪರತೆ ತತ್ವ ನಾಹೀರೆ ಅನ್ಯಥಾ। ವಾಯಾ ಆಣಿಕ ಪಂಥಾ ಜಾಸೀಲ ಝಣೀ ॥
ಜ್ಞಾನದೇವಾ ಮೌನ ಜಪಮಾಳ ಅಂತರೀ। ಧರೋನೀ ಶ್ರೀ ಹರಿ ಜಪೇ ಸದಾ ॥

ಶ್ರೀಹರಿ ನಾಮ ಜಪವೇ ಸರ್ವ ಶ್ರೇಷ್ಠ ಸಾಧನವೆಂಬ ಒಂದೇ ತತ್ವವನ್ನು ಮನಸ್ಸಿನಲ್ಲಿ ನಿಶ್ಚಯ ಮಾಡಿದ್ದಾದರೆ ಹರಿಕೃಪೆಗೆ ಪಾತ್ರನಾಗುತ್ತೀ. ರಾಮಕೃಷ್ಣ ಗೋವಿಂದ ನಾರಾಯಣ ಜಪ ಸುಲಭವಿದ್ದು, ಗದ್ಗದಿತ ಕಂಠದಿಂದ ಉಚ್ಚರಿಸು. ನಾಮ ಜಪ ಸಾಧನೆ ಹೊರತಾಗಿ ಬೇರೆ ಸಾಧನೆ ಇಲ್ಲ. ಆದ್ದರಿಂದ ಇತರ ಸಾಧನೆಗಳ ಕಡೆಗೆ ಲಕ್ಷ್ಯ ಹಾಕಿ ಆಯುಷ್ಯ ವ್ಯರ್ಥವಾಗಿಸಬೇಡ. ಪ್ರಪಂಚ ವಿಷಯದಲ್ಲಿ ಮೌನವಿದ್ದು, ಶ್ರೀ ಹರಿ ವಿಷಯದಲ್ಲಿ ಮಾತ್ರ ಜಾಗೃತನಾಗಿ, ಕೈಯಲ್ಲಿ ಜಪ ಮಾಲೆ ಹಿಡಿದು ಮುಖದಿಂದ ನಾಮಸ್ಮರಣೆ ಮಾಡುತ್ತೇನೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

೨೭) ಸರ್ವಸುಖ ಗೋಡಿ ಸಾಹೀ ಶಾಸ್ತ್ರೆ ನಿವಡಿ। ರಿಕಾಮಾ ಅರ್ಧ ಘಡೀ ರಾಹೋ ನಕೋ ॥
ಲಟಿಕಾ ವ್ಯವಹಾರ ಸರ್ವ ಹಾ ಸಂಸಾರ। ವಾಯಾ ಏರಝಾರ ಹರೀವೀಣ ॥
ನಾಮ ಮಂತ್ರ ಜಪ ಕೋಟಿ ಜಾಯೀಲ ಪಾಪ। ರಾಮಕೃಷ್ಣ ಸಂಕಲ್ಪ ಧರೂನಿ ರಾಹೇ ॥
ನಿಜವೃತ್ತಿ ಕಾಢೀ ಸರ್ವ ಮಾಯಾ ತೋಡಿ। ಇಂದ್ರಿಯಾ ಸವಡೀ ಲಪೋ ನಕೋ ॥
ತೀರ್ಥೀ ವ್ರತೀ ಭಾವ ಧರೀರೆ ಕರುಣಾ। ಶಾಂತಿ ದಯಾ ಪಾಹುಣಾ ಹರಿ ಕರೀ ॥
ಜ್ಞಾನದೇವಾ ಪ್ರಮಾಣ ನಿವೃತ್ತಿದೇವೀ ಜ್ಞಾನ। ಸಮಾಧಿ ಸಂಜೀವನ ಹರಿಪಾಠ ॥

ವೇದ ಶಾಸ್ತ್ರ ಪುರಾಣಗಳ ಮಥಿತಾರ್ಥವೆಂದರೆ; ಸರ್ವ ದುಃಖ ನಿವೃತ್ತಿಯಾಗಿ ಸರ್ವ ಸುಖಾನುಭವ ಹೊಂದಬೇಕೆನ್ನುವ ಮುಮುಕ್ಷುಗಳು, ಮೊದಲು ಆಲಸ್ಯತನವನ್ನು ಹೊಡೆದೋಡಿಸಿ ಸದಾ ಭಗವತ್ ಚಿಂತನೆಯಲ್ಲಿರಬೇಕು. ಈ ಸಂಸಾರದಲ್ಲಿ ಹಗಲಿರುಳೂ

ಮನಸ್ಸು, ಬುದ್ಧಿ, ದೇಹ ಎಷ್ಟು ಸವೆಸಿ ಕಷ್ಟ ಪಟ್ಟರೂ ಹರಿ ಕೃಪೆಯೊಂದಿಲ್ಲದಿದ್ದರೆ ಹುಟ್ಟು ಸಾವು ಅಂದರೆ 'ಪುನರಪಿ ಜನನಂ, ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಂ' ಈ ಚಕ್ರ ತಪ್ಪುವುದಿಲ್ಲ. ಶ್ರೀಹರಿ ನಾಮದಲ್ಲಿ ಅನಂತ ಜನ್ಮಗಳ ಪಾಪ ರಾಶಿಯನ್ನು ಸುಟ್ಟು ಭಸ್ಮ ಮಾಡುವ ಸಾಮರ್ಥ್ಯವಿದ್ದುದರಿಂದ, ಸದಾ ರಾಮಕೃಷ್ಣ ನಾಮ ಜಪಿಸುವ ಸಂಕಲ್ಪ ಮಾಡಿರಿ. ಹಿಂದೆ ಕರ್ಮಾನುಸಾರ ೮೪ ಲಕ್ಷ ಯೋನಿಯಲ್ಲಿ ಜನಿಸಿ ಕರ್ಮ ಸವೆಸಿದ ನಂತರ, ಈ ಮನುಷ್ಯ ಯೋನಿಯ ಲಾಭ ನಿನಗೆ ನಿನ್ನ ಉದ್ಧಾರ ಮಾಡಿಕೊಳ್ಳುವ ಸಲುವಾಗಿ ಸಿಕ್ಕಿದೆ. ಈ ದೇಹದ ಹಾಗೂ ಇಂದ್ರಿಯಗಳ ಆಶೆ ಆಕಾಂಕ್ಷೆಗಳನ್ನು ಪೂರೈಸುವುದರಲ್ಲಿಯೇ ವ್ಯರ್ಥ ಶ್ರಮ ಪಡಬೇಡ. ನೀನು ಸ್ಥೂಲ, ಸೂಕ್ಷ್ಮ, ಕಾರಣ ಇವ್ಯಾವು ದೇಹವೂ ಆಗಿರದೆ, ಇವೆಲ್ಲವುಗಳನ್ನೂ ಇಂದ್ರಿಯಗಳನ್ನೂ ಪ್ರಕಾಶಿಸುವ ಸಾಕ್ಷೀ ಚೈತನ್ಯನೆಂಬ ಸ್ವಸ್ವರೂಪ ಸತ್ಯವನ್ನು ಅರಿಯುವ ಸಾಧನೆ ಮಾಡುವದರಿಂದ ಮಾತ್ರ, ನಿನ್ನ ಸ್ವಸ್ವರೂಪದ ಮೇಲೆ ಗಟ್ಟಿಯಾಗಿ ಲೇಪನಗೊಂಡ ಮಾಯಾ ಪಡದೆ ಕಳಚಿ ಬೀಳುತ್ತದೆ. ಹಿಂದಿನ ಜನ್ಮಗಳಲ್ಲಿ ನಿನ್ನ ಸ್ವರೂಪ ನೀನೇ ತಪ್ಪಾಗಿ ಗ್ರಹಿಸಿ, ತಾನು ಇಲ್ಲದ್ದನ್ನು ತಾನೇ ಎಂದು (ಮಾ- ಅಂದರೆ ಇಲ್ಲದ್ದು ಯಾ ಅಂದರೆ ಇದೆಯಂದು) ದೃಢ ನಂಬಿಕೆಯಿಂದ ಮಾಯೆಯನ್ನು ಸ್ವೀಕರಿಸಿ, ಪ್ರೀತಿಸಿ ಅದರೊಂದಿಗೆ ಸಮರಸವಾಗಿ ಕೊನೆಗೆ ಅದೇ ಮಾಯೆ ತಾನೆಂದು ಅದರ ಕೂಡ ಅಭಿನ್ನವಾಗುವದು. ಇದೇ ಸ್ವಸ್ವರೂಪದ ಮೇಲಿನ ಮಿಥ್ಯಾ ಆವರಣ. (ಅಜ್ಞಾನ). ಸ್ವಪ್ರಯತ್ನದಿಂದ ಮತ್ತು ನಾಮ ಜಪದಿಂದ ಕ್ರಮೇಣ ಸ್ವಸ್ವರೂಪ ಸಾಧಿಸು. ಪುಣ್ಯ ಕ್ಷೇತ್ರ ದರ್ಶನ, ಏಕಾದಶಿ ಇತ್ಯಾದಿ ವ್ರತಗಳನ್ನು ಶ್ರದ್ಧೆಯಿಂದ ಆಚರಿಸು. ದೈವೀ ಸಂಪತ್ತಿಗಳಾದ ಶಾಂತಿ, ದಯಾ, ಕ್ಷಮಾ ಇವುಗಳನ್ನು ನಿನ್ನಲ್ಲಿ ಅಳವಡಿಸಿಕೊಂಡರೆ ಶ್ರೀಹರಿ ವಾಸ್ತವ್ಯವು ಸದಾ ಇರುತ್ತದೆ. ಮಾವುಲಿ ಶ್ರೀ ಜ್ಞಾನೇಶ್ವರರು ಹೇಳುತ್ತಾರೆ :- ಶ್ರೀ ಗುರು ನಿವೃತ್ತಿನಾಥರ ಜ್ಞಾನೋಪದೇಶವೇ ನಮಗೆ ಪ್ರತ್ಯಕ್ಷ ಪ್ರಮಾಣವಾಗಿದೆ. ಮನುಷ್ಯ ಜನ್ಮದ ಅಂತಿಮ ಧ್ಯೇಯವಾದ ಜೀವ ಬ್ರಹ್ಮೈಕ್ಯ, ಅಂದರೆ ಸಹಜ ಸ್ವಸ್ವರೂಪ ಸ್ಥಿತಿ (ಸಮಾಧಿಸ್ಥಿತಿ) ಅನುಭವಿಸಲು ಹರಿಪಾಠವೇ ದಿವ್ಯ ಔಷಧಿ (ಸಂಜೀವಿನಿ). ಸಂಜೀವಿನಿ ಔಷಧವು ಮೃತ ಶರೀರಗಳನ್ನು ಜೀವಂತ ಮಾಡುವಂತೆ ಹರಿನಾಮ ಜಪವು ಅಜ್ಞಾನಿ ಜೀವರನ್ನು ಜ್ಞಾನಿಗಳನ್ನಾಗಿ ಮಾಡುತ್ತದೆ.

೨೮) ಅಭಂಗ ಹರಿಪಾಠ ಅಸತೀ ಅಠ್ಠಾವೀಸ । ರಚಿಲೇ ವಿಶ್ವಾಸೇ ಜ್ಞಾನದೇವೇ ॥
ನಿತ್ಯ ಪಾಠ ಕರೀ ಇಂದ್ರಾಯಣೀ ತೀರೀ । ಹೋಯ ಅಧಿಕಾರೀ ಸರ್ವಥಾ ತೋ ॥

ಅಸಾವೇ ಏಕಾಗ್ರೀ ಸ್ವಸ್ಥ ಚಿತ್ತ ಮನ । ಉಲ್ಹಾಸೇ ಕರೂನ ಸ್ಮರಣ ಜೀವೀ ॥
ಅಂತಕಾಳೀ ತೈಸಾ ಸಂಕಟಾಚೇ ವೇಳೀ । ಹರಿ ತಯಾ ಸಾಂಭಾಳೀ ಅಂತರ್ಬಾಹ್ಯ ॥
ಸಂತ ಸಜ್ಜನೀ ಘೇತಲೀ ಪ್ರಚೀತಿ । ಆಳಸೀ ಮಂದಮತೀ ಕೇವೀಂ ತರೆ ॥
ಶ್ರೀ ಗುರು ನಿವೃತ್ತಿ ವಚನ ಪ್ರೇಮಳ । ತೋಷಲಾ ತಾತ್ಕಾಳ ಜ್ಞಾನದೇವ ॥

ಶ್ರೀ ಸಂತ ಜ್ಞಾನೇಶ್ವರರು, ಸ್ವಾನುಭವವನ್ನೇ ಈ ಹರಿಪಾಠದಲ್ಲಿಯ ಅಭಂಗಗಳ ಮುಖಾಂತರ, ವಿಶ್ವಾಸದಿಂದ ನಮ್ಮೆಲ್ಲರ ಹಿತದ ಸಲುವಾಗಿ ಪ್ರಕಟಗೊಳಿಸಿದ್ದಾರೆ. ಶ್ರೀ ಮಾವುಲಿಯವರ ಸಂಜೀವಿನಿ ಸಮಾಧಿ ಸ್ಥಳವಾದ ಇಂದ್ರಾಯಣಿ ನದಿ ತೀರದಲ್ಲಿಯೇ ನಾವು ಕೂತಿದ್ದೇವೆಂದು ಭಾವಿಸಿ, ನಿತ್ಯ ನೇಮದಿಂದ ಪಾಠ ಮಾಡಿದರೆ, ಪರಮಾರ್ಥ ಸಾಧನೆಯಲ್ಲಿ ಪ್ರಗತಿಯಾಗುತ್ತದೆ. ಆನಂದದಿಂದ ಮತ್ತು ಏಕಚಿತ್ತದಿಂದ ಹರಿಪಾಠದಲ್ಲಿಯ ಅಭಂಗಗಳ ಚಿಂತನೆ ಮಾಡಬೇಕು. ಹೀಗೆ ಸಾಧನೆ ಮಾಡಿದರೆ ಸಂಕಟ ಸಮಯಗಳಲ್ಲಿ ಮತ್ತು ದೇಹಾವಸಾನವಾಗುವಾಗ, ಶ್ರೀಹರಿಯು ಅಂಥವರನ್ನು ಅಂತರ್ಬಾಹ್ಯ ಅಂದರೆ ಎಲ್ಲ ರೀತಿಯಿಂದಲೂ ರಕ್ಷಿಸುತ್ತಾನೆ. ಹಿಂದಿನ ಸಂತಸಜ್ಜನರು ಇಂಥ ಘಟನೆಗಳನ್ನು ಸ್ವತಃ ಅನುಭವಿಸಿದ್ದಾರೆ. ಆದರೆ ಆಲಸಿಗಳಾದ ಮಂದಮತಿಗಳು ಎಂದೂ ಆ ಸುಖ ಅನುಭವಿಸಲಾರರು. ಶ್ರೀಗುರು ನಿವೃತ್ತಿನಾಥರ ಈ ಅಮೃತತುಲ್ಯ ಪ್ರೇಮಳ ವಚನಗಳಿಂದ ಶ್ರೀ ಸಂತ ಜ್ಞಾನೇಶ್ವರರು ತಕ್ಷಣ ಹರ್ಷಚಿತ್ತರಾದರು.

೨೯) **ಕೋಣಾಚೇ ಹೇಂ ಘರ ಹಾ ದೇಹ ಕೋಣಾಚಾ । ಆತ್ಮಾರಾಮ ತ್ಯಾಚಾ ತೋಚಿ ಜಾಣೆ ॥**
ಮೀ ತೂ ಹಾ ವಿಚಾರ ವಿವೇಕೆ ಶೋಧಾವಾ । ಗೋವಿಂದ-ಮಾಧವ ಯಾಚ ದೇಹೀ ॥
ಧ್ಯೇಯ, ಧ್ಯಾತಾ, ಧ್ಯಾನ ತ್ರಿಪುಟೀ ವೇಗಳಾ । ಸಹಸ್ರ ದಳೀ ಉಗವಲಾ ಸೂರ್ಯ ಜೈಸಾ ॥
ಜ್ಞಾನದೇವ ಮ್ಹಣೆ ನಯನಾಚೀ ಜ್ಯೋತಿ । ಯಾ ನಾವೇಂ ರೂಪೇಂ ತೇ ತುಮ್ಹಿ ಜಾಣಾ ॥

ಈ ಮನೆ ಯಾರದು? ಈ ದೇಹ ಯಾರದು? ಇದೆಲ್ಲ ಆತ್ಮಾರಾಮನಿಗೆ (ಪರಮಾತ್ಮನಿಗೆ) ಮಾತ್ರ ಗೊತ್ತು. ನಾನು ಯಾರು? ನೀನು ಯಾರು? ಬೇರೊಬ್ಬರು ಯಾರು? ಇದೆಲ್ಲ ವಿಚಾರವನ್ನು ಈ ನರದೇಹದಲ್ಲಿಯೇ ನಿತ್ಯಾನಿತ್ಯ ವಿವೇಕದಿಂದ ಜ್ಞಾನ ಮಾಡಿಕೊಳ್ಳಬೇಕು. ಧ್ಯಾನ ಮಾಡುವವ, ಯಾರನ್ನು ಕುರಿತು ಧ್ಯಾನ ಮಾಡುವದು ಮತ್ತು ಧ್ಯಾನ ಮಾಡುವ ಕ್ರಿಯೆ ಈ ಮೂರು ತ್ರಿಪುಟಿಗಳಿಗೆ ಇವೆಲ್ಲವುಗಳಿಗಿಂತಲೂ ಭಿನ್ನವಾಗಿರುವ ಮತ್ತು ಇವೆಲ್ಲಕ್ಕೂ ಅಧಿಷ್ಠಾನವಾಗಿರುವ ಪರಮಾತ್ಮನೇ ಕಾರಣ. ಇದಕ್ಕೇ ಸೂರ್ಯನ ಉದಾಹರಣೆ ಕೊಟ್ಟಿದ್ದಾರೆ.

ಸೂರ್ಯನ ಅಧಿಷ್ಠಾನದಲ್ಲಿ ಜಗತ್ತಿನ ಕಾರ್ಯಗಳೆಲ್ಲಾ ನಡೆಯುತ್ತವೆ. ಸ್ಥೂಲ ನೇತ್ರಗಳಿಗೆ ನೋಡುವ ಶಕ್ತಿಯನ್ನು ಕೊಡುವ ಆತ್ಮವೇ ನೀವೆಂದು ತಿಳಿಯಿರಿ; ಮತ್ತು ಎರಡೂ ಹುಬ್ಬುಗಳ ನಡುವೆ ಭ್ರೂ ಮಧ್ಯದಲ್ಲಿ ಯೋಗಿಗಳಿಗೆ ಕಾಣುವ ಜ್ಯೋತಿಯೇ ನೀವೆಂದು ತಿಳಿಯಿರೆಂದು ಮಾವುಲಿ ಜ್ಞಾನೇಶ್ವರರು ಹೇಳುತ್ತಾರೆ.

ಶ್ರೀ ಸಂತ ಜ್ಞಾನೇಶ್ವರ ಮಹಾರಾಜರ ಆರತಿ

ಆರತೀ ಜ್ಞಾನರಾಜಾ, ಮಹಾ ಕೈವಲ್ಯ ತೇಜಾ ।
ಸೇವಿತೀ ಸಾಧುಸಂತ, ಮನು ವೇಧಲಾ ಮಾಝಾ ॥ ೧ ॥ ಆರತಿ ॥

ಲೋಪಲೇ ಜ್ಞಾನ ಜಗೀ, ಹಿತ ನೇಣತೀ ಕೋಣೀ ।
ಅವತಾರ ಪಾಂಡುರಂಗ, ನಾವ ಠೇವಿಲೇ ಜ್ಞಾನಿ ॥ ೨ ॥ ಆರತಿ ॥

ಪ್ರಗಟ ಗುಹ್ಯ ಬೋಲೇ, ವಿಶ್ವ ಬ್ರಹ್ಮಚಿ ಕೇಲೇ ।
ರಾಮಾ ಜನಾರ್ಧನಿ, ಪಾಯೀ ಟಕಚಿ ಠೇಲೇ ॥ ೩ ॥ ಆರತಿ ॥



ಶ್ರೀ ಏಕನಾಥ ಮಹಾರಾಜರ ಹರಿಪಾಠ

೧) ಹರೀಚಿಯಾ ದಾಸಾ ಹರಿ ದಾಹೀ ದಿಶಾ । ಭಾವೇ ಜೈಸಾ ತೈಸಾ ಹರಿ ತಯಾ ॥
ಹರಿ ಮುಖೀ ಗಾತಾ ಹರಪಲೀ ಚಿಂತಾ । ತ್ಯಾ ನಾಹೀಂ ಮಾಗುತಾ ಜನ್ಮ ಘೇಣೆ ॥
ಜನ್ಮ ಘೇಣೆ ಲಾಗೆ ವಾಸನೇಚ್ಯಾ ಸಂಗೆ । ತೇಚಿ ಝಾಲೀ ಅಂಗೇ ಹರಿರೂಪ ॥
ಹರಿರೂಪ ಝಾಲೇ ಜಾಣಣೇ ಹರಪಲೇ । ನೇಣಣೇ ತೇ ಗೇಲೇ ಹರೀಚೆ ಠಾಯೀ ॥
ಹರಿರೂಪ ಧ್ಯಾನೀ ಹರಿರೂಪ ಮನೀ । ಏಕಾ ಜನಾರ್ದನಿ ಹರಿ ಬೋಲಾ ॥

ಹರಿದಾಸರು ಅಂದರೆ ಹರಿಸೇವಾ ಮಾಡುವವರು, ಹರಿ ಸೇವಾ ಅಂದರೆ ಪ್ರೇಮದಿಂದ ಹರಿಯ ಗುಣಗಾನ ಮತ್ತು ನಾಮೋಚ್ಚಾರ. ಸೇವಾ ತೆ ಆವಡೀ ಉಚ್ಚಾರವೇನಾಮ ಹರಿಚಿಂತನೆಯೂ ಸೇವೆಯೇ, 'ತುಕಾಮ್ಹಣೆ ದೇವಾ, ಚಿಂತನ ಹೇ ತುಝೀ ಸೇವಾ' ಇಂಥ ಹರಿದಾಸರಿಗೆ ಎಲ್ಲ ದಿಕ್ಕುಗಳಲ್ಲಿ ಅಂದರೆ ಸರ್ವತ್ರ ಪರಮಾತ್ಮನ ಅಸ್ತಿತ್ವದ ಅನುಭವವಾಗುತ್ತದೆ. ಯಾರ ಭಾವವು ಎಷ್ಟು ಮತ್ತು ಹೇಗೆ ಇರುತ್ತದೋ ಆ ಪ್ರಮಾಣದಲ್ಲಿ ಶ್ರೀ ಹರಿಯು ಅನುಗ್ರಹ ಮಾಡುತ್ತಾನೆ. 'ಯೇ ಯಥಾ ಮಾಂ ಪ್ರಪದ್ಯಂತೆ, ತಾನ್ ತಥೈವ ಭಜಾಮ್ಯಹಮ್' ಮುಖದಿಂದ ಶ್ರೀ ಹರಿನಾಮಜಪ ಮಾಡುವವನಿಗೆ ಚಿಂತೆಯೂ ಇಲ್ಲವಾಗುವುದರಿಂದ ಪುನರ್ಜನ್ಮವಿಲ್ಲ. ಜೀವನು ಪುನರ್ಜನ್ಮ ಪಡೆಯುವುದಕ್ಕೆ ಜಗತ್ತಿನ ವಸ್ತುಗಳ ವಾಸನೆಯೇ ಕಾರಣ. ಅವನ ವಾಸನೆ ಸರ್ವ ರೀತಿಯಿಂದ ಭಗವತ್ ಚಿಂತನೆ, ಭಗವದ್ಭಕ್ತಿ, ಅಂದರೆ ಹರಿರೂಪವಾದುದರಿಂದ ಅವನಿಗೆ ಪುನರ್ಜನ್ಮವಿಲ್ಲ. ಹರಿರೂಪ ಅಂದರೆ ಜ್ಞಾನ ಸ್ವರೂಪ ವಾದವನಿಗೆ ಜ್ಞಾನ-ಅಜ್ಞಾನ ಶಬ್ಧಗಳೇ ಅವನಲ್ಲಿಲ್ಲ. ಉದಾ: ಸೂರ್ಯನಿಗೆ ಪ್ರಕಾಶವನ್ನು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ; ಮತ್ತು ಅವನಲ್ಲಿ ಕತ್ತಲಂತೂ ಯಾವಾಗಲೂ ಇರುವುದೇ ಇಲ್ಲ. ಬೆಳಕು ಕತ್ತಲೆ ಎರಡೂ ಶಬ್ದಗಳು ಸೂರ್ಯನಿಗೆ ಗೊತ್ತಿಲ್ಲ. ಹರಿ ರೂಪವನ್ನು ಧ್ಯಾನಿಸಿ ಮನಸ್ಸಿನಿಂದ ಹರಿನಾಮ ಜಪ ಮಾಡಿರೆಂದು ಏಕನಾಥ ಮಹಾರಾಜರು ಹೇಳುತ್ತಾರೆ.

೨) ಹರಿ ಬೋಲಾ, ಹರಿ ಬೋಲಾ, ನಾಹೀಂ ತರೀ ಅಬೋಲಾ। ವ್ಯರ್ಥ ಗಲಬಲಾ ಕರೂ ನಕಾ ॥
ನಕೋ ನಕೋ ಮಾನ, ನಕೋ ಅಭಿಮಾನ । ಸೋಡಿ ಮೀ ತೂಪಣ ತೋಚಿ ಸುಖೀ ॥
ಸುಖೀ ಜೇಣೆ ಹ್ವಾವೇ ಜಗ ನಿವವಾವೆ । ಅಜ್ಞಾನೀ ಲಾವಾವೇ ಸನ್ಮಾರ್ಗಾಸೀ ॥
ಮಾರ್ಗ ಜಯಾ ಕಳೇ ಭಾವ ಭಕ್ತಿಬಳೇ । ಜಗಾಚಿಯಾ ಮೇಳೇ ನ ದಿಸತೀ ॥
ದಿಸತೀ ಜನೀ ವನೀ ಪ್ರತ್ಯಕ್ಷ ಲೋಚನೀ । ಏಕಾ ಜನಾರ್ದನಿ ಓಳಖಿಲೇ ॥

ಶ್ರೀ. ಹರಿ ಗುಣಗಾನ ಮತ್ತು ನಾಮ ಇವನ್ನೇ ಹೇಳಿರಿ. ಇಲ್ಲವಾದರೆ ಮೌನದಿಂದಿರಿ. ಪ್ರಾಪಂಚಿಕ ವಿಷಯದ ಬಗ್ಗೆ ವ್ಯರ್ಥ ಬಡಬಡಿಸಬೇಡಿರಿ. ಮಾನಾಭಿಮಾನ ಅಂದರೆ ದೊಡ್ಡವ ಶ್ರೀಮಂತ, ಬಡವ ಚಿಕ್ಕವ ಈ ಭೇದ ಭಾವ ತೊರೆದವನೇ ಸುಖೀ. ಪರಮಾತ್ಮ ಸುಖವನ್ನು ಅನುಭವಿಸುತ್ತಿರುವವರು ಅಂದರೆ ಸಂತರು ಮತ್ತು ಜ್ಞಾನಿಗಳು ಜಗದ ಅಜ್ಞ ಜನರನ್ನು ಸನ್ಮಾರ್ಗಕ್ಕೆ ಹಚ್ಚಬೇಕು. ಉದಾ : (ಜಗಾಚಾ ಕಲ್ಯಾಣಾ ಸಂತಾಂಚಾ ವಿಭೂತಿ ಅಥವಾ ತುಕಾಮ್ಹಣೆ ಸುಖ ಪರಾವಿಯಾ ಸುಖೆ) ವಿವೇಕ ವೈರಾಗ್ಯವಿಲ್ಲದ ಮೂಢ ಅಜ್ಞಾನೀ ಜನರನ್ನು ಭಕ್ತಿ ಮಾರ್ಗಕ್ಕೆ ಹಚ್ಚಿ ಶಾಶ್ವತ ಸುಖಿಗಳಾಗುವಂತೆ ಮಾಡಬೇಕು. ಶುದ್ಧ ಭಕ್ತಿ ಭಾವದ ಬಲದಿಂದ ಭಗವತ್ ಪ್ರಾಪ್ತಿ ವರ್ಮ ತಿಳಿದವರಿಗೆ ಜಗತ್ತಿನ ಜಾತ್ರೆ ಕಾಣಿಸುವುದಿಲ್ಲ. ಅಂದರೆ ಪ್ರಾಪಂಚಿಕ ವಸ್ತುಗಳು, ಮಾನ, ಸನ್ಮಾನ, ಬಡತನ ಶ್ರೀಮಂತಿಕೆ ಮುಂತಾದವುಗಳಲ್ಲಿ ನಿರಾಸಕ್ತರಾಗಿರುತ್ತಾರೆ. ಉದಾ :– 'ವಿಷಯ ತೋ ತ್ಯಾಂಚಾ ಝಾಲಾ ನಾರಾಯಣ ನಾವಡೆ ಜನ, ಧನ, ಮಾತಾ, ಪಿತಾ' ಭಗವತ್ ಪ್ರಾಪ್ತಿ ವರ್ಮ ತಿಳಿದವರು ಎಲ್ಲಿ ನೋಡಿದಲ್ಲಿ ಅಂದರೆ ನಿರ್ಜನ ಪ್ರದೇಶವಿರಲಿ ಜನರಿದ್ದ ಪಟ್ಟಣಗಳಲ್ಲಿಯಾಗಲಿ ಪರಮಾತ್ಮನೇ ತುಂಬಿದ್ದನ್ನು ಅನುಭವಿಸುತ್ತಾರೆಂದು ಶ್ರೀ ಸಂತ ಏಕನಾಥ ಮಹಾರಾಜರು ತಮ್ಮ ಅನುಭವವನ್ನು ಹೇಳುತ್ತಾರೆ.

೩) ಓಳಖಿಲಾ ಹರಿ ಧನ್ಯ ತೋ ಸಂಸಾರೀ । ಮೋಕ್ಷ ತ್ಯಾಚೆ ಘರಿ ಸಿದ್ಧೀ ಸಹಿತ ॥
ಸಿದ್ಧಿ ಲಾವೀ ಪಿಸೆ ಕೋಣ ತಯಾ ಪುಸೆ । ನೇಣೇ ರಾಜಹಂಸೇ ಪಾಣೀ ಕಾಯೀ ॥
ಕಾಯ ಕರಾವೆ ತೇ ಸಂದೇಹೀ ನಿರ್ಗುಣ । ಜ್ಞಾನಾನೇ ಸಗುಣ ಓಸ ಕೇಲೇ ॥
ಕೇಲೇ ಕರ್ಮ ಝಾಲೇ ತೇಚಿ ಭೋಗಾ ಆಲೇ । ಉಪಜಲೇ ಮೇಲೇ ಐಸೇ ಕೀತೀ ॥
ಏಕಾ ಜನಾರ್ದನೀ ನಾಹೀಂ ಯಾತಾಯಾತೀ । ಸುಖಾಚೀ ವಿಶ್ರಾಂತಿ ಹರೀ ಸಂಗೇ ॥

ಗೃಹಸ್ಥಾಶ್ರಮದಲ್ಲಿದ್ದೂ ಶ್ರೀಹರಿಯ ಅಪರೋಕ್ಷಾನುಭೂತಿ ಮಾಡಿಕೊಂಡ ಭಕ್ತನು ಧನ್ಯನು. ಮೋಕ್ಷವು ಅವನ ಮನೆಯಲ್ಲಿ ಸಿದ್ಧೀ ಸಹಿತ ವಾಸ ಮಾಡುತ್ತದೆ. ಸಾಮಾನ್ಯ ಸಾಧಕರಿಗೆ

ಹುಚ್ಚು ಹಿಡಿಸುವ ಸಿದ್ಧಿಗಳನ್ನು ನಿಜವಾದ ಸಾಧಕನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಹೇಗೆಂದರೆ ಹಾಲು ನೀರು ಕೂಡಿಸಿಟ್ಟರೆ, ರಾಜಹಂಸ ಪಕ್ಷಿಯು ಕೇವಲ ಹಾಲನ್ನು ಕುಡಿದು, ಹಾಲಿನಲ್ಲಿ ಕೂಡಿಸಿದ ನೀರನ್ನು ಬಿಡುತ್ತದೆ. ರಾಜಹಂಸದ ಮುಂದೆ ನೀರಿಟ್ಟರೆ ಕುಡಿಯುವುದಿಲ್ಲ. ಅದರಂತೆ ನಿಜವಾದ ಭಕ್ತನು ಸಿದ್ಧಿ ಪ್ರಾಪ್ತವಾದರೂ ಅದನ್ನು ಉಪಯೋಗಿಸುವುದಿಲ್ಲ. ಶ್ರೀ ಹರಿಯ ನಿರ್ಗುಣ ರೂಪದಲ್ಲಿ ಸಂದೇಹ ಪಡುವ ದ್ವೈತವಾದಿಗಳು ಹಾಗೂ ಸಗುಣವು ಉಪಾಧಿಯುಕ್ತವಾಗಿರುವುದರಿಂದ ವಿಮಲ ಬ್ರಹ್ಮ ಹೇಗೆ ಆಗುತ್ತದೆಂದು ಹಠ ಹಿಡಿದು ವಾದ-ವಿವಾದ ಮಾಡುವ ಅದ್ವೈತ ಜ್ಞಾನಿಗಳ ಮತ ತೆಗೆದುಕೊಂಡು ಏನು ಮಾಡುವದು? ಹಿಂದೆ ಅನೇಕ ಜನ್ಮಗಳಲ್ಲಿ ಯಾವ ಯಾವ ಕರ್ಮಗಳೆಂಬ ಬೀಜವನ್ನು ಬಿತ್ತಿರುತ್ತಾರೋ ಅವುಗಳದೇ ಕರ್ಮಫಲಗಳೆಂಬ ಬೆಳೆಯನ್ನು ಭೋಗಿಸಲು ಎಷ್ಟೋ ಜನರು ಈ ಭೂಮಿಯ ಮೇಲೆ ಹುಟ್ಟಿ ಬರುತ್ತಾರೆ. ಆಯುಷ್ಯ ಮುಗಿದ ನಂತರ ಸಾಯುತ್ತಾರೆ. ಇದು ಘಟಿಕಾಯಂತ್ರದಂತೆ ನಡದೇ ಇರುತ್ತದೆ. ಶ್ರೀಹರಿಯು ಸಗುಣನೂ ಹೌದು, ನಿರ್ಗುಣನೂ ಹೌದು. ನಿಜವಾಗಿ ಇವೆರಡಕ್ಕೂ ಅತೀತ ಬ್ರಹ್ಮ ಸನಾತನನಾದ ಶ್ರೀಹರಿಯನ್ನು ಯಥಾರ್ಥ ತಿಳಿದುಕೊಂಡವನು ಜನ್ಮ ಮರಣವಿಲ್ಲದವನಾಗಿ ಶ್ರೀಹರಿ ಸಂಗದಲ್ಲಿ ಸುಖ-ಶಾಂತಿ ಪಡೆಯುತ್ತಾನೆಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

೪) ಜೇ ಜೇ ದೃಷ್ಟಿ ದಿಸೇ ತೇ ತೇ ಹರಿ ರೂಪ । ಪೂಜಾ ಧ್ಯಾನ ಜಪ ತ್ಯಾಸೀ ನಾಹೀಂ ॥
ವೈಕುಂಠ ಕೈಲಾಸೀ ತೀರ್ಥ ಕ್ಷೇತ್ರೀ ದೇವ । ತಯಾವೀಣ ಠಾವ ರಿತಾ ಕೋಠೇ ॥
ವೈಷ್ಣವಾಂಚೆ ಗುಹ್ಯ ಮೋಕ್ಷಾಚಾ ಏಕಾಂತ । ಅನಂತಾಸೀ ಅಂತ ಪಾಹಾತಾ ನಾಹೀಂ ॥
ಆದಿ ಮಧ್ಯ ಅಂತೀ ಅವಘಾ ಹರಿ ಏಕ । ಏಕಚಿ ಅನೇಕ ಏಕ ಹರಿ ॥
ಏಕಾಕಾರ ಝಾಲೇ ಜೀವ ಶಿವ ದೋನ್ಹೀ । ಏಕಾ ಜನಾರ್ದನಿ ಐಸೇ ಕೇಲೇ ॥

ಅಪರೋಕ್ಷಾನುಭೂತ ಜ್ಞಾನಿಯು ಎಲ್ಲ ಚರಾಚರದಲ್ಲೂ ಶ್ರೀ ಹರಿಯನ್ನೇ ಅನುಭವಿಸುವುದರಿಂದ ಸಾಮಾನ್ಯ ಭಕ್ತರು ಆಚರಿಸುವ ಪೂಜೆ, ಧ್ಯಾನ, ಜಪ ಇವ್ಯಾವು ಸಾಧನೆಗಳೂ ಅವನಿಗೆ ಅವಶ್ಯಕತೆ ಇರುವುದಿಲ್ಲ. ಅಜ್ಞರು ವೈಕುಂಠ ಕೈಲಾಸದಲ್ಲಿ ಮಾತ್ರ ದೇವರಿದ್ದಾನೆಂದು ಭಾವಿಸಿದರೆ, ಜ್ಞಾನಿಯು ದೇವರಿಲ್ಲದ ಜಾಗವೇ ಇಲ್ಲವೆಂದು ದೃಢ ನಿಶ್ಚಯದಿಂದ ಹೇಳುತ್ತಾನೆ. ವೈಷ್ಣವರು ಅಂದರೆ ಜ್ಞಾನಿ ಭಕ್ತರು, ಅವರ ರಹಸ್ಯವೇನೆಂದರೆ, ರಾಗ, ದ್ವೇಷ, ಕಾಮಕ್ರೋಧಾದಿ ವಿಕಾರಗಳಿಂದ ಮುಕ್ತರಾಗಿ, ಸ್ವಸ್ವರೂಪಾನಂದವನ್ನು

ಅಥವಾ ಬ್ರಹ್ಮಾನಂದವನ್ನು ಏಕಾಂತದಲ್ಲಿ ಅನುಭವಿಸುವದು ಹಾಗೂ ಪರಮಾತ್ಮನು ವಸ್ತು, ಕಾಲ, ದೇಶ ಇವುಗಳ ಪರಿಮಿತಿಯಲ್ಲಿರುವದಿಲ್ಲವೆಂಬ ದೃಢ ನಿಶ್ಚಯ. ಹೀಗೆ ಜಗತ್ತಿನ ಆದಿ ಮಧ್ಯ ಮತ್ತು ಅಂತ್ಯದಲ್ಲಿ ಎಲ್ಲವೂ ಶ್ರೀ ಹರಿಯೇ ಇರುತ್ತಾನೆ. ಅಂದರೆ ವೇದಾಂತ ಶಾಸ್ತ್ರದ ಪ್ರಕಾರ ಪರಮಾತ್ಮನೇ ಈ ಜಗತ್ತಿನ ಉಪಾದಾನ ಕಾರಣ, ನಿಮಿತ್ತ ಕಾರಣ, ಉಪಕರಣನೂ ಎಲ್ಲವೂ ಆಗಿರುತ್ತಾನೆ. ಉದಾ:– ಮಣ್ಣಿನ ಗಡಿಗೆ ತಯಾರಾಗುವುದಕ್ಕೆ ಉಪಾದಾನ ಕಾರಣ ಮಣ್ಣು, ನಿಮಿತ್ತ ಕಾರಣ ಕುಂಬಾರ, ಕೆಲ ಉಪಕರಣಗಳು ಬೇಕಾಗುತ್ತವೆ. ಜಗತ್ತಿನ ನಿರ್ಮಾಣಕ್ಕಾಗಿ ಇವೆಲ್ಲವೂ ಪರಮಾತ್ಮನೇ ಆಗಿದ್ದಾನೆ. ಆದ್ದರಿಂದ ಅವಘಾ ಹರಿ ಏಕ. ನಮಗೆ ಜಗತ್ತಿನಲ್ಲಿ ಅನೇಕ ವಸ್ತುಗಳು ಗೋಚರಿಸಿದರೂ ಅವೆಲ್ಲಕ್ಕೂ ಪರಮಾತ್ಮನೇ ಮೂಲಾಧಾರ. ಉದಾ: ಬಂಗಾರದ ಅನೇಕ ಆಭರಣಗಳು ಕಂಡರೂ ಅದರಲ್ಲಿ ಬಂಗಾರ ಇರಲಿಕ್ಕೇಬೇಕು. ಸಾಮಾನ್ಯರು ಆಭರಣ ಮತ್ತು ಅವುಗಳ ವಿನ್ಯಾಸ ಹಾಗೂ ಕಲಾ ಕೌಶಲ್ಯದೆಡೆ ಗಮನ ಹರಿಸಿ ಮೂಲ ಬಂಗಾರವನ್ನೇ ಮರೆಯುತ್ತಾರೆ. ಇದೇ ನಿಜವಾದ ಸ್ವಸ್ವರೂಪದ ಮರೆವು. ಜ್ಞಾನಿಗಳು ಆಭರಣ ಕಡೆಗೆ ಲಕ್ಷ್ಯ ಕೊಡದೇ ಅದರಲ್ಲಿರುವ ಬಂಗಾರದತ್ತ ಗಮನಿಸುತ್ತಾರೆ. ಇದೇ ಸ್ವಸ್ವರೂಪದ ಅರಿವು. ಇವರೇ ರಾಜಹಂಹರು, ಅಥವಾ ರತ್ನ ಪರೀಕ್ಷಕರು. ಕಲ್ಪನಾ ಅವಿದ್ಯೋಪಾಧಿ ಜೀವ, ಮಾಯೋಪಾಧಿ ಶಿವ ಇವು ಉಪಾಧೀಭೇದದಿಂಥ ಭಿನ್ನ ಭಿನ್ನ ಅನಿಸಿದರೂ ಉಪಾಧಿ-ವಿರಹಿತ ಜ್ಞಾನ ದೃಷ್ಟಿಯಿಂದ ಒಂದೇ ಇರುತ್ತವೆ. ೮೪ ಲಕ್ಷ ಯೋನಿ ಪ್ರಾಣಿಗಳ ಸೂಕ್ಷ್ಮ ಶರೀರದಲ್ಲಿ ಪ್ರತಿಬಿಂಬಿಸುವ ಒಂದೇ ಆತ್ಮವು ವ್ಯಷ್ಟಿ ದೃಷ್ಟಿಯಿಂದ (ಅಂದರೆ ಒಂದೊಂದು ಶರೀರ ದೃಷ್ಟಿಯಿಂದ) ಜೀವ ಅನ್ನಿಸಿಕೊಳ್ಳುತ್ತದೆ. ಇದೇ ಒಂದೇ ಆತ್ಮಾ ಜಗತ್ತಿನ ದೃಷ್ಟಿಯಿಂದ (ಸಮಷ್ಟಿ) ಶಿವ ಅನಿಸಿಕೊಳ್ಳುತ್ತದೆ. ಶ್ರೀ ಗುರು ಜನಾರ್ದನ ಸ್ವಾಮಿಗಳು ಉಪಾಧಿಯುಕ್ತ ಜೀವ ಶಿವ ಹೋಗಲಾಡಿಸಿ, ಆ ಮೇಲೆ ಉಳಿಯುವ ಸಚ್ಚಿದಾನಂದ ಬ್ರಹ್ಮನೇ ನಾನಾಗಿದ್ದೇನೆಂಬ ಪ್ರತೀತ ತಂದು ಕೊಟ್ಟರೆಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

೫) **ನಾಮಾವೀಣ ಮುಖ ಸರ್ಪಾಚೇ ತೇ ಬೀಳ । ಜಿವ್ಹಾ ನವ್ಹೆ ಕಾಳ ಸರ್ಪ ಆಹೇ ॥**
ವಾಚಾ ನವ್ಹೆ ಲಾಂಬ ಜಳೋ ತ್ಯಾಚೇ ಜಿಣೇ । ಯಾತನಾ ಭೋಗಣೇ ಯಮಪುರೀ ॥
ಅಂತಕಾಳೀ ಕೋಣೀ ನಾಹೀಂ ಸೋಡವಿತಾ । ಪುತ್ರ, ಬಂಧು ಕಾಂತಾ ಸಂಪತ್ತೀಚೆ ॥
ಅಂತಕಾಳೀ ಕೋಣೀ ನಾಹೀಂ ಬಾ ಸಾಂಗಾತೀ । ಸಾಧೂಚಿ ಸಂಗತಿ ಹರಿ ಜೋಡೆ ॥

ಕೋಟಿ ಕುಳೇ ತಾರೀ ಹರಿ ಅಕ್ಷರೇ ದೋನ್ಹಿ । ಏಕಾ ಜನಾರ್ದನೀ ಪಾಠ ಕೇಲೀ ॥

ಶ್ರೀಹರಿ ನಾಮೋಚ್ಚಾರ ಮಾಡದವರ ನಾಲಿಗೆಯು ಕಾಳಸರ್ಪವಿದ್ದಂತೆ; ಮತ್ತು ಅವರ ಬಾಯಿಯೆಂದರೆ ಹಾವಿನ ಪೊದರು (ಗುದ್ದು) ಇದ್ದಂತೆ. ಮನುಷ್ಯ ದೇಹ ದೊರೆತೂ ಹರಿಜಪ ಮಾಡದಿದ್ದರೆ ಅವನೊಬ್ಬ ಪಿಶಾಚಿ ಜಾತಿಗೆ ಸೇರಿದವನು. ಪಿಶಾಚಿಯು ದುಃಖವನ್ನೇ ಕೊಡುವಂತೆ, ಈ ಅಭಕ್ತನಿಂದ ಎಲ್ಲರಿಗೂ ಅಪಾಯವೇ. 'ಯಮಾಚಾ ಪಾಹುಣಾ ಪ್ರಾಣೀ ಹೋಯೇ' ಜ್ಞಾ.ಮ. ಮರಣ ಸಮಯದಲ್ಲಿ ನಿನ್ನನ್ನು ಯಾರೂ ಯಮ ಯಾತನೆಯಿಂದ ಬಿಡಿಸುವುದಿಲ್ಲ. ಪುತ್ರ, ಕಾಂತಾ, ಬಂಧು ಬಳಗದವರೆಲ್ಲರೂ ಶ್ರಮದಿಂದಾಗಲಿ, ನಾನಾ ಪಾಪ ಕರ್ಮಾಚರಣೆಯಿಂದಾಗಲಿ ಗಳಿಸಿಟ್ಟ ಸಂಪತ್ತಿಯ ಮೇಲೆ ಅತಿಯಾಸೆಯಿಟ್ಟು, ನೀನು ಮರಣ ಶಯ್ಯೆಯಲ್ಲಿ ಒದ್ದಾಡಿ ಜೀವ ಬಿಡುತ್ತಿರುವಾಗ ಇವರೆಲ್ಲರೂ ತಮ್ಮ ತಮ್ಮ ಹಕ್ಕು ಸಾಧನೆಗಾಗಿ ನಾನಾ ಯುಕ್ತಿಗಳಲ್ಲಿ ತೊಡಗಿರುತ್ತಾರೆ. ಅಂತ್ಯ ಕಾಲದಲ್ಲಿ ಎಲ್ಲರೂ ಪರದೇಶಿ; ಅಂದರೆ ಸಾಯುವಾಗ ಅವನ ಜೊತೆ ಯಾರೂ ಹೋಗುವುದಿಲ್ಲ. 'ಜನ ಹೇ ಸುಖಾಚೇ ದಿಲ್ಯಾ ಘೇತಲ್ಯಾಚೇ, ಅಂತಕಾಳೀಚೇ ನಾಹೀ ಕೋಣೀ, ಝ್ಯಾಲ್ಯಾ ಹೀನ ಶಕ್ತಿ ನಾಕ ಡೋಳೆ ಗಳತೀ, ಸಾಂಡೋನಿ ಪಳತೀ ರಾಂಡಾ ಪೋರೆ' ತು.ಮ. ಆದ್ದರಿಂದ ದೇಹದಲ್ಲಿ ಶಕ್ತಿ ಇರುವಾಗಲೇ ಸಾಧೂ ಸಂತರ ಸಹವಾಸದಲ್ಲಿದ್ದುಕೊಂಡು ಸಾಧನೆ ಮಾಡಿದರೆ, ಶ್ರೀ ಹರಿಯು ಸಹಾಯ ಮಾಡುವನು. 'ಸಂತ ಸಂಗೇ ದೇವ ಜೋಡೆ, ಸಾಯುಜ್ಯ ಮುಕ್ತಿ ಪಾಯಾ ಪಡೇ' ಏ.ಮ. ಹರಿ ರಾಮ ಈ ಎರಡಕ್ಷರಗಳಲ್ಲಿ ಕೋಟಿ ಕೋಟಿ ವಂಶಜರನ್ನು ಉದ್ಧರಿಸುವ ಸಾಮರ್ಥ್ಯವಿರುವುದರಿಂದ ಹರಿಪಾಠವನ್ನೇ ದೃಢ ವಿಶ್ವಾಸದಿಂದ ಮಾಡಿದೆನೆಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

೬) **ಧನ್ಯ ಮಾಯ ವ್ಯಾಲೀ ಸುಕೃತಾಚೇ ಫಳ । ಫಳ ತೇ ನಿರ್ಫಳ ಹರಿವೀಣ ॥**
ವೇದಾಚೇ ಹೀ ಬೀಜ ಹರಿಹರಿ ಅಕ್ಷರೇ । ಪವಿತ್ರ ಸೋಪಾರೆ ಹೇಚಿ ಏಕ ॥
ಯೋಗ ಯಾಗ ವ್ರತ ನೇಮ ಧರ್ಮ ದಾನ । ನ ಲಗೆ ಸಾಧನ ಜಪತಾ ಹರಿ ॥
ಸಾಧನಾಚೆ ಸಾರ ನಾಮ ಮುಖೀ ಗಾತಾ । ಹರಿ ಹರಿ ಮ್ಹಣತಾ ಕಾರ್ಯಸಿದ್ಧಿ ॥
ನಿತ್ಯ ಮುಕ್ತ ತೋಚಿ ಏಕ ಬ್ರಹ್ಮಜ್ಞಾನಿ । ಏಕಾ ಜನಾರ್ದನೀ ಹರಿ ಬೋಲಾ ॥

'ಸುಕೃತಾಚೇ ಫಳ' ಅಂದರೆ ಮನುಷ್ಯ ದೇಹ, 'ಏಕ ಏಕ ಯೋನಿ ಕೋಟಿ ಕೋಟಿ ಫೇರಾ, ನರದೇಹ ಥಾರಾ ಅವಚಟಾ' ಜೀವನು ಒಂದೊಂದು ಯೋನಿಯಲ್ಲಿ ಕೋಟಿ ಕೋಟಿ ಸಲ,

ಇದರಂತೆ ೮೦ ಲಕ್ಷ ಯೋನಿಗಳಲ್ಲಿ ಜನ್ಮಧಾರಣೆ ಮಾಡಿದ ನಂತರ ಕೊನೆಗೆ ನರದೇಹ ಪ್ರಾಪ್ತವಾಗುತ್ತದೆ. ಇಂಥ ಪುಣ್ಯದ ಫಲವಾದ ನರದೇಹವನ್ನು ಪ್ರಸೂತಿಸಿದ ತಾಯಿ ನಿಜವಾಗಿ ಧನ್ಯಳು. ಆದರೆ ಅದೇ ಮನುಷ್ಯ ಪ್ರಾಣಿ (ಸ್ತ್ರೀ ಅಥವಾ ಪುರುಷ) ಭಕ್ತಿ ಮಾರ್ಗ ಹಿಡಿಯದೇ ಪಶುಗಳಂತೆ ಕೇವಲ ಆಹಾರ, ನಿದ್ರಾ, ಭಯ, ಮೈಥುನ, ಅಂದರೆ ವಿಷಯ ಸೇವನೆಯಲ್ಲಿಯೇ ಆಯುಷ್ಯ ಸವೆಸಿದರೆ, ಆ ಪುಣ್ಯ ಫಲರೂಪೀ ಮನುಷ್ಯ ದೇಹ ನಿಷ್ಫಳವಾಗುತ್ತದೆ. ಜಗತ್ತು ಆರಂಭವಾಗುವದಕ್ಕಿಂತ ಮೊದಲೇ ವೇದಗಳು ಪರಮಾತ್ಮನಿಂದ ಪ್ರಕಟವಾದವು. ಅವುಗಳಲ್ಲಿ ಪ್ರವೃತ್ತಿ, ನಿವೃತ್ತಿ, ಕರ್ಮ, ಉಪಾಸನಾ ಮತ್ತು ಜ್ಞಾನಕಾಂಡ ಇವೆಲ್ಲವುಗಳ ವಿವರಣೆ ಇದೆ. ಈ ವೇದಗಳ ಮೂಲ ಬೀಜವೇ ಹರಿಹರಿ ಅಕ್ಷರಗಳು. ಬೀಜ ಅಂದರೆ ಅವಿನಾಶವಿದ್ದು, ವಿಸ್ತಾರದೊಂದಿಗೆ ಏಕರೂಪವಾಗಿರುತ್ತದೆ. ವಿಸ್ತಾರ ನಾಶವಾದರೂ ಬೀಜ ನಾಶವಾಗದೇ ಅದೃಶ್ಯ ರೂಪದಲ್ಲಿರುತ್ತದೆ. ಹರಿಹರಿ ಅಕ್ಷರ ಪವಿತ್ರ ಮತ್ತು ಸುಲಭ. ಓಂಕಾರದಿಂದ ಮೂರು ವೇದಗಳು ಜನಿಸಿದವು. ಆದರೆ ವೇದಗಳ ಪಠನ ಆರಂಭ ಮಾಡುವಾಗ 'ಹರಿ ಓಂ'ದಿಂದ ಪ್ರಾರಂಭವಾಗುತ್ತದೆ. ಹರಿ, ರಾಮ, ವಿಠ್ಠಲ, ರಾಮಕೃಷ್ಣ ಹರಿ ಈ ನಾಮಾಕ್ಷರಗಳಲ್ಲಿ ಪರಮಾತ್ಮನ ವಾಸ್ತವ್ಯ ಮತ್ತು ಶಕ್ತಿ ಹುದುಗಿರುತ್ತದೆ. 'ನಾಮಾ ಮ್ಹಣೇ ನಾಮ ಓಂಕಾರಾಚೇ ಮೂಳ, ಪರಬ್ರಹ್ಮ ಕೇವಳ ರಾಮನಾಮ' 'ಸಕಳ ಮಂಗಳ ನಿಧಿ ಶ್ರೀ ವಿಠ್ಠಲಾಚೆ ನಾಮ ಆದಿ' ಜ್ಞಾ.ಮ. ನಾಮ ನಾಮೀ ಅಭೇದವೆಂದು ಭಕ್ತಿ ಶಾಸ್ತ್ರದಲ್ಲಿ ವಿವರಿಸಿದೆ. 'ನಾಮ ಪರಬ್ರಹ್ಮ ವೇದಾರ್ಥ'. ಹೀಗೆ ನಾಮವು ಸ್ವತಃ ಪವಿತ್ರವಿದ್ದು, ಜಪ ಮಾಡುವವನನ್ನೂ ಪವಿತ್ರ ಮಾಡುತ್ತದೆ. 'ಪವಿತ್ರ ತೋ ದೇಹ ವಾಣೀ ಪುಣ್ಯವಂತ ಜೋ ವದೇ ಅಚ್ಯುತ ಸರ್ವ ಕಾಳ' 'ಪಾವನ ಹೇ ಕುಳ ಕೃಷ್ಣ ನಾಮೇ' ನಿ.ನಾ.ಮ. 'ಉಚ್ಚಾರಿತಾ ಕೃಷ್ಣ ನಾಮ ಭೇಣೆ ಪಳಿಜೆ ಕಳಿಕಾಳ' ಜ್ಞಾ.ಮ. ಯೋಗ, ಯಾಗ, ವ್ರತ, ನೇಮ, ಧರ್ಮ, ದಾನ ಇವುಗಳು ಪವಿತ್ರವೆಂದು ಪರಿಗಣಿಸಲ್ಪಟ್ಟರೂ, ಉಚಿತ ವಿಧಿ ವಿಧಾನದಿಂದ ಈ ಕಲಿಯುಗದಲ್ಲಿ ಅಚರಿಸುವದು ಕಷ್ಟದಾಯಕವಾದ್ದರಿಂದ ನಿಶ್ಚಿತ ಫಲಪ್ರಾಪ್ತಿಯಾಗುವುದಿಲ್ಲ. ಆದ್ದರಿಂದ ಹರಿನಾಮ ಜಪವೇ ಹರಿಪ್ರಾಪ್ತಿಯ ಏಕಮೇವ ಸಾಧನೆಯಾದ್ದರಿಂದ ಉಳಿದ ಸಾಧನೆಗಳ ಅವಶ್ಯಕತೆ ಇಲ್ಲವೇ ಇಲ್ಲ. ಹರಿ ಹರಿ ಅನ್ನುವುದೇ ಎಲ್ಲ ಸಾಧನೆಗಳ ಸಾರವಿದ್ದು, ಇದರಿಂದ ಕಾರ್ಯಸಿದ್ಧಿ (ಹರಿಪ್ರಾಪ್ತಿ) ಆಗುತ್ತದೆ. ಯಾರಿಗೆ ಹರಿನಾಮ ಸ್ಮರಣೆಯಲ್ಲಿ ದೃಢ ವಿಶ್ವಾಸವಿದೆಯೋ, ಯಾರು ಸದಾಕಾಲ ನಾಮ ಜಪ ಮಾಡುತ್ತಿರುತ್ತಾರೋ, ಅವರಿಗೆ ಹರಿಕೃಪೆಯಿಂದ ಅಪರೋಕ್ಷಾನುಭೂತಿಯಾಗಿ ಮುಕ್ತರಾಗುತ್ತಾರೆ. ಆದ್ದರಿಂದ ಎಲ್ಲರೂ

'ಹರಿಬೋಲಾ' ಎಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

೭) ಬಹುತಾ ಸುಕೃತೀ ನರದೇಹ ಲಾಭಲಾ । ಭಕ್ತಿವೀಣ ಗೇಲಾ ಅಧೋಗತಿ ॥
ಬಾಪ ಭಾಗ್ಯ ಕೈಸೇ ನ ಸರೇಚಿ ಕರ್ಮ । ನ ಕಳೇಚಿ ವರ್ಮ ಅರೇ ಮೂಢಾ ॥
ಅನೇಕ ಜನ್ಮಾಚೆ ಸುಕೃತ ಪದರೀ । ತ್ಯಾಚೆ ಮುಖೀ ಹರಿ ಪೈಠಾ ಹೋಯ ॥
ರಾವ ರಂಕ ಹೋ ಕಾ ಊಂಚ ನೀಚ ಯಾತೀ । ಭಕ್ತಿವೀಣ ಮಾತೀ ಮುಖೀ ತ್ಯಾಚ್ಯಾ ॥
ಏಕಾ ಜನಾರ್ದನೀ ಹರಿ ಹರಿ ಮ್ಹಣತಾ । ಮುಕ್ತಿ ಸಾಯುಜ್ಯತಾ ಪಾಠೀ ಲಾಗೇ ॥

'ಕೋಟಿ ಜನ್ಮಾಚೆ ಶುದ್ಧ ಸುಕೃತ, ತೇಣೆ ಕರ್ಮಭೂಮಿ ನರದೇಹ ಪ್ರಾಪ್ತ. ಭರತಖಂಡಿ ನರದೇಹ ಪ್ರಾಪ್ತ, ಹೇ ಪರಮ ಭಾಗ್ಯಾಚೀ ಸಂಪತ್ತಿ. ತೇಥೇಹಿ ವಿವೇಕು ಪರಮಾರ್ಥಿ ತ್ಯಾಚ್ಯಾ ವಶವರ್ತೀ ಮೀ ಪರಮಾತ್ಮಾ' ಹೀಗೆ ನಾಥ ಭಾಗವತ ಅಧ್ಯಾಯ ೨೦, ೨೩ರಲ್ಲಿ ಉಲ್ಲೇಖಿಸಲಾಗಿದೆ. ದುರ್ಲಭ ನರದೇಹ 'ಏಕ ಏಕ ಯೋನಿ ಕೋಟಿ ಕೋಟಿ ಫೇರಾ' ಹೀಗೆ ಎಷ್ಟೋ ಯೋನಿಗಳನ್ನು ತಿರುಗಿದ ಮೇಲೆ ನರದೇಹವು ಪರಮಾತ್ಮನ ಅನುಗ್ರಹದಿಂದ ಮಾತ್ರ ಸಿಕ್ಕಿರುತ್ತದೆ. ಆದರೆ ಭಕ್ತಿಯನ್ನೇ ಮಾಡದಿದ್ದರೆ ಮತ್ತೆ ತಿರುಗಿ ಪ್ರಾಣಿ, ಪಕ್ಷಿ, ಕ್ರಿಮಿ-ಕೀಟಗಳ ಶರೀರವೇ ಗತಿ. ಅಂದರೆ ಅಧೋಗತಿ. ನಾಥ ಭಾಗವತದಲ್ಲಿ ಹೇಳಿದ ಪ್ರಕಾರ 'ನಿಜಾತ್ಮ ಪ್ರಾಪ್ತಿ ಲಾಗೋನಿ, ದೇವೇ ಕೇಲೆ ಮನುಷ್ಯ ಯೋನಿ, ತ್ಯಾ ದೇವಾಚಾ ವಿಶ್ವಾಸ ಬುಡವೂನಿ, ವಿಷಯ ಸೇವನೀ ನಿಜ ಪತನ' ಇತರೇ ಎಲ್ಲ ಯೋನಿಗಳಲ್ಲಿ ಆಹಾರ, ದ್ರಾ, ಭಯ, ಮೈಥುನ ಸರ್ವ ಸಮಾನವಾಗಿ ಇದ್ದೇ ಇರುತ್ತವೆ. ಆದರೆ ಮನುಷ್ಯ ಯೋನಿಯಲ್ಲಿ ಇವುಗಳ ಮೇಲೆ ನಿಯಂತ್ರಣವಿಟ್ಟು ಹರಿಮಹಾತ್ಮೆ ಹರಿಭಕ್ತಿ, ಹರಿನಾಮ ಜಪ ಮಾಡುವದು ಮುಖ್ಯ. ಪರಮಾತ್ಮನ ಭಕ್ತಿ ಮಾಡಿ ಪರಮಾತ್ಮನ ಅನುಗ್ರಹ ಮಾಡಿಕೊಳ್ಳುವ ಸಲುವಾಗಿಯೇ ದೇವನು ಮನುಷ್ಯ ದೇಹವನ್ನು ರಚಿಸಿದ್ದಾನೆ. ಆದರೆ ಆ ದೇವರ ವಿಶ್ವಾಸಘಾತ ಮಾಡಿ ಇಂದ್ರಿಯ ವಿಷಯಗಳಲ್ಲಿಯೇ ಇಡೀ ಆಯುಷ್ಯ ಕಳೆಯುವುದೆಂದರೆ ಅಧೋಗತಿಗಿಳಿದಂತೆ ಸರಿ. ಇಂಥ ನರದೇಹ ಲಭಿಸಿದ ಅಭಕ್ತ ಜೀವರುಗಳು ಎಂಥ ದುರ್ಭಾಗ್ಯರು? ಈ ಮೂಢರಿಗೆ ನರದೇಹದ ಮಹಾತ್ಮೆ ಅಂದರೆ ನರತ್ವದಿಂದ ನಾರಾಯಣತ್ವಕ್ಕೆ ಹೋಗುವ ವರ್ಮವೇ ತಿಳಿಯದ್ದರಿಂದ ಇವರ ಕರ್ಮವೂ ಸವೆಯುವುದಿಲ್ಲ. ಆದ್ದರಿಂದ ಜನನ-ಮರಣಗಳೂ ತಪ್ಪುವುದಿಲ್ಲ. ಮುಖ್ಯ ವರ್ಮವೆಂದರೆ ವಿವೇಕ, ವೈರಾಗ್ಯ, ತೀವ್ರ ಮುಮುಕ್ಷುತ್ವ, ಶಮ, ದಮ ಷಟ್ ಸಂಪತ್ತಿ ಇವೆಲ್ಲ ಸಾಧನೆ ಮಾಡದೇ ಹರಿ

ಪ್ರಾಪ್ತಿಯಾಗುವುದಿಲ್ಲ. ಎಲ್ಲ ಪ್ರಾಣಿಗಳ ಸ್ವಾಭಾವಿಕ ಕ್ರಿಯೆಗಳಾದ ಆಹಾರ, ನಿದ್ರಾ, ಭಯ, ಮೈಥುನ ಹಾಗೂ ರಾಗ, ದ್ವೇಷ, ಕಾಮ, ಕ್ರೋಧ, ಮತ್ಸರ ಇವುಗಳಲ್ಲೇ ಆಯುಷ್ಯ ಕಳೆಯುತ್ತಿದ್ದೀರಿ. ಇದಕ್ಕೆ ಕಾರಣವೆಂದರೆ- ಅನೇಕ ಜನ್ಮಗಳಲ್ಲಿ ಶುದ್ಧ ಪುಣ್ಯ ಗಳಿಸಿಟ್ಟುಕೊಂಡರೆ ಮಾತ್ರ, ಅವನ ವೃತ್ತಿ ಭಗವದ್ಭಕ್ತಿ ಕಡೆ ವಾಲುತ್ತದೆ; ಮತ್ತು ಮುಖದಲ್ಲಿ ನಾಮಜಪ ಸ್ಥಿರವಾಗಿ ಉಳಿಯುತ್ತದೆ. 'ತುಕಾ ಮ್ಹಣೆ ಹೋತಾ ಠೇವಾ, ತೋಯಾ ಭಾವಾ ಸಾಪಡಲಾ' ಧನವಂತನೇ ಇರಲಿ ಬಡವನೇ ಇರಲಿ, ಮೇಲಿನ ಜಾತಿ ಇರಲಿ ಅಥವಾ ಕೆಳಗಿನ ಜಾತಿಯಿರಲಿ, ಭಗವದ್ಭಕ್ತಿ ಇರದಿದ್ದರೆ ತನ್ನ ಬಾಯಲ್ಲಿ ತಾನೇ ಮಣ್ಣು ಹಾಕಿಕೊಂಡಂತೆ, ಅಂದರೆ ನರಕವಾಸವನ್ನೇ ಬಯಸಿ ಹೋದಂತೆ. ಇದನ್ನೇ ನಾಥ ಭಾಗವತದಲ್ಲಿ ಕೃಷ್ಣ ಪರಮಾತ್ಮನು ಉದ್ಧವನಿಗೆ ಹೇಳಿದ್ದಾನೆ. 'ಸಕಳಯೋನಿ ವಿಷಯಾಸಕ್ತಿ ಸರ್ವಾಸಿ ಆಹೇ ನಿಶ್ಚಿತೀ ; ನರದೇಹೀ ತೈಸೀಚ ವಿಷಯ ಸ್ಥಿತಿ, ತೇ ತೋಂಡಿ ಮಾತೀ ಪಡಲೀಕಿ. ಲಾಹೋನಿ ಉತ್ತಮ ಶರೀರ, ವ್ಯರ್ಥ ವಿಷಯಾಸಕ್ತೀ ನರ, ನರಕೀ ಬುಡಾಲೆ ಆಪಣ, ಹೇ ಶಾರಂಗಧರ ಬೋಲಿಲಾ'.

ಹರಿ ಹರಿ ನಾಮ ಜಪ ನಿರಂತರ ಮಾಡುವದರಿಂದ ಸಾಯುಜ್ಯ ಮುಕ್ತಿಯು ತಾನೇ ಬೆಂಬತ್ತಿ ಬರುತ್ತದೆಂದು ನಾಥ ಮಹಾರಾಜರು ಹೇಳುತ್ತಾರೆ. ಜ್ಞಾನೇಶ್ವರ ಮಾವುಲಿಯವರೂ ಹೇಳಿದ್ದಾರೆ. 'ಹರಿ ಹರಿ ಹರಿ ಮಂತ್ರ ಹಾ ಶಿವಾಚಾ, ಮ್ಹಣತೀ ಜೇ ವಾಚಾ ತಯಾ ಮೋಕ್ಷ.

೮) **ಹರಿ ನಾಮಾಮೃತ ಸೇವೀ ಸಾವಕಾಶ। ಮೋಕ್ಷ ತ್ಯಾಚೆ ಭೂಸ ದೃಷ್ಟಿ ಪುಢೇ ॥**
ನಿತ್ಯ ನಾಮ ಘೋಷ ಜಯಾಚೆ ಮಂದಿರೀ। ತೇಚಿ ಕಾಶೀ ಪುರೀ ತೀರ್ಥಕ್ಷೇತ್ರ ॥
ವಾರಾಣಸೀ ತೀರ್ಥ ಕ್ಷೇತ್ರಾ ನಾಶ ಆಹೇ। ಅವಿನಾಶಾಸೀ ಪಾಹೇ ನಾಶ ಕೈಂಚಾ ॥
ಏಕಾ ತಾಸಾಮಾಜಿ ಕೋಟಿ ವೇಳಾ ಸೃಷ್ಟಿ। ಹೋತೀ ಜಾತೀ ದೃಷ್ಟೀ ಪಾಹೇ ತೋಚಿ ॥
ಏಕಾ ಜನಾರ್ದನೀ ಐಸೇ ಕಿತೀ ಝಾಲೇ। ಹರಿನಾಮ ಸೇವಿಲೇ ತೋಚಿ ಧನ್ಯ ॥

'ಹರಿನಾಮಾಮೃತ' ಅಂದರೆ ಪ್ರೇಮದಿಂದ ಹರಿ ಗುಣಗಾನ, ನಾಮ ಜಪ ಮಾಡುವದು. ಇದರಿಂದ ಮೋಕ್ಷ ಸಿಕ್ಕರೂ ಅದು ನಿಷ್ಠಾವಂತ ಭಕ್ತನಿಗೆ ಒಂದು ಹುಲ್ಲು ಕಡ್ಡಿ ಸಮಾನ. ಯಾಕೆಂದರೆ, 'ಬೀಜ ಆಣೆ ಫಳ ಹರೀಚೆ ನಾಮ' ಹರಿನಾಮ ಬೀಜದಲ್ಲೂ ಪರಮಾತ್ಮ ಮತ್ತು ಫಳದಲ್ಲೂ ಪರಮಾತ್ಮಾ ಇದ್ದಾನೆ. ಈ ಜಗತ್ತಿನಲ್ಲಿ ಪರಮಾತ್ಮನಿಗಿಂತ ಸುಖಕಾರಕ ವಸ್ತು ಮತ್ತೊಂದಿಲ್ಲ., ಸರ್ವ ಸುಖಾಚೇ ಆಗರ ಬಾಪರಖುಮಾದೇವೀವರ ಮತ್ತು 'ಭಯ ನಾಹೀಂ ಜನ್ಮ ಘೇತಾ, ಮೋಕ್ಷ ಪದಾ ಹಾಣೋ ಲಾಥಾ', 'ವಿಸರಲೇ ಮುಕ್ತಿ ಭಕ್ತಿಚಿಯಾ ಅಭಿಲಾಷೆ'

ಆದ್ದರಿಂದ ನಿತ್ಯ ನಾಮ ಘೋಷ ಮಾಡುವವರ ಮನೆಯೇ ಕಾಶೀ ಪಟ್ಟಣ, ತೀರ್ಥ ಮತ್ತು ಕ್ಷೇತ್ರವಿದ್ದಂತೆ ; ಕಾಲಾಂತರದಲ್ಲಿ ವಾರಣಾಸೀ ತೀರ್ಥ ಕ್ಷೇತ್ರಗಳ ಪುಣ್ಯವು ಕ್ರಮೇಣ ನಶಿಸಬಹುದು; ಆದರೆ ಅವಿನಾಶ ಹರಿನಾಮದ ಪುಣ್ಯ ನಾಶ ಹೇಗಾಗಲು ಶಕ್ಯವಿದೆ? ಯಾಕೆಂದರೆ ನಾಮದಲ್ಲಿಯೇ ಹರಿಯ ವಾಸ್ತವ್ಯವಿದೆ. ಈ ಹರಿನಾಮ ಗರ್ಜನೆಯಿಂದಲೇ ತೀರ್ಥಗಳಿಗೆ ಪಾವಿತ್ರ್ಯತೆ ಪ್ರಾಪ್ತವಾಗಿದೆ. ಕಾಶಿಯಲ್ಲಿ ಜೀವಿಗೆ ಮರಣ ಸಮಯದಲ್ಲಿ ಮಹಾದೇವರು ಕಿವಿಯಲ್ಲಿ ರಾಮನಾಮ ಹೇಳುತ್ತಾರೆ. ಆದೇ ರಾಮ ನಾಮದಿಂದ ಕಾಶಿಗೂ ಪಾವಿತ್ರ್ಯತೆ ಬಂದಿದೆ. ಹೀಗೆ ನಿಷ್ಠಾವಂತ ಭಾವವುಳ್ಳ ನಾಮಧಾರಕ ಭಕ್ತನು, ಸಂಸಾರದ ಮತ್ತು ಈ ಸೃಷ್ಟಿಯ ಅನಿತ್ಯತ್ವ, ಕ್ಷಣ ಬಂಗುರತ್ವ ತಿಳಿದಿರುತ್ತಾನೆ. ಉದಾ: ಭಕ್ತ ಮಾರ್ಕಂಡೇಯ ಭುಸಂಡಿ ಇವರು ಈ ಸೃಷ್ಟಿಯ ಘಡಾವೋಡಿ ಅಂದರೆ ಪ್ರಳಯ ಹಾಗೂ ಪುನರ್ನಿರ್ಮಾಣವನ್ನು ಪ್ರತಿ ಕಲ್ಪಾಂತ್ಯದಲ್ಲಿ ನೋಡಿದ್ದಾರೆ. ಹೀಗೆ ಸೃಷ್ಟಿಯ ಅನಿತ್ಯತ್ವವು ಬುದ್ಧಿಯಲ್ಲಿ ನಿಶ್ಚಯವಾಗದೇ, ಪರಮಾತ್ಮ ಮತ್ತು ಅವನ ನಾಮದ ಮಹತ್ವ ತಿಳಿಯುವುದಿಲ್ಲ. ಶ್ರೀ ಮಾವುಲಿ ಜ್ಞಾನೇಶ್ವರರು ನಮನದಲ್ಲಿ ಹೇಳಿದ್ದಂತೆ 'ಹೇ ಭೂತ ಭೌತಿಕ ಪ್ರಚಂಡ, ಜನ್ಮ ಉತ್ಪತ್ತೀಚೆ ಅಂಡ, ಜನ್ಮ ಜುಗಾದಿ ಬ್ರಹ್ಮಾಂಡ, ಖಂಡ ವಿಖಂಡ ತೂ ಜಾಣತಾ; ಈ ಅಪರಂಪಾರ, ಅಸಂಖ್ಯ ಸ್ಥಾವರ ಜಂಗಮ ಸ್ವರೂಪವುಳ್ಳ ಜೀವಗಳಿಗೆ, ನೀನೇ ಬೀಜ ಮತ್ತು ಗರ್ಭವಿದ್ದು, ಯಾವ ಬ್ರಹ್ಮಾಂಡಗಳ ಉತ್ಪತ್ತಿ ಯಾವಾಗ ಆಯಿತು, ಯಾವ ಯಾವ ಬ್ರಹ್ಮಾಂಡಗಳು ಎಷ್ಟು ಕಾಲದವರೆಗೆ ಇದ್ದು ಮುಂದೆ ಯಾವಾಗ ನಾಶವಾದವು, ಇದೆಲ್ಲವನ್ನೂ ನೀನೇ ತಿಳಿದಿರುತ್ತಿ. ಹೀಗೆ ಎಲ್ಲ ಬ್ರಹ್ಮಾಂಡಗಳ ಆಗು ಹೋಗುಗಳನ್ನು ಪರಮಾತ್ಮ ಮತ್ತು ಪರಮಾತ್ಮನೊಡನೆ ಏಕ ರೂಪವಾದಂಥ ಸದಾಶಿವನಂಥ ಭಕ್ತರು ಮಾತ್ರ ತಿಳಿದಿರುತ್ತಾರೆ. ಬಸವಣ್ಣನವರು ಹೇಳಿದಂತೆ 'ಜಗಕೆ ಬಲ್ಲಿದ ನೀನು, ನಿನಗೆ ಬಲ್ಲಿದ ನಾನು'; ಹೀಗೆ ಜಗತ್ತಿನ ಆಗು-ಹೋಗುಗಳ ವಿಚಾರ ಮಾಡದೇ, ಹರಿ ಭಕ್ತಿ ಮತ್ತು ನಾಮ ಜಪದಲ್ಲಿ ತನ್ನನ್ನು ತಾನೇ ಮರೆತವನು ಧನ್ಯನು ಎಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ. 'ಧನ್ಯ ಜಗೀ ತೋಚಿ ಏಕ ಹರೀ ರಂಗೀ ನಾಚೇ', ರಾಮಕೃಷ್ಣ ವಾಸುದೇವ ಸದಾ ಸ್ಮರೇ ವಾಚೇ'.

೯) ಭಕ್ತಿವೀಣ ಪಶು ಕಶಾಸೀ ವಾಢಲಾ । ಸಟವೀನೆ ನೇಲಾ ಕೈಸಾ ನಾಹೀಂ ॥
ಕಾಯ ಮಾಯ ಗೇಲೀ ಹೋತೀ ಭೂತಾಪಾಸಿ । ಹರಿ ನಯೇ ಮುಖಾಸೀ ಅರೇ ಮೂಢಾ ॥
ಪಾತಕೆ ಕರಿತಾ ಪುಢೇ ಆಹೇ ಪುಸತಾ । ಕಾಯ ಉತ್ತರ ದೇತಾ ಹೊಸೀಲ ತೂ ॥

ಅನೇಕ ಯಾತನಾ ಯಮ ಕರವೀಲ। ಕೋಣ ಸೋಡವೀಲ ತೇಥೆ ತುಜಲಾ ॥
ಏಕಾ ಜನಾರ್ದನೀ ಸಾಂಗತಾಹೇ ತೋಂಡೆ। ಆಹಾ ವಾಚಾ ರಡೆ ಬೋಲತಾಚಿ ॥

ಭಕ್ತಿಯಿಂದಲೇ ಜೀವನು ಶಿವನಾಗುತ್ತಾನೆ. ಆಹಾರ, ನಿದ್ರಾ, ಭಯ, ಮೈಥುನ ವೃತ್ತಿ ಎಲ್ಲ ಪ್ರಾಣಿಗಳಿಗೆ ಸಮಸಮಾನವಿದೆ. ಮಾನವನಿಗೆ ಮಾತ್ರ ಇವುಗಳನ್ನು ನಿಯಂತ್ರಿಸಿ ಭಕ್ತಿಯ ಶಕ್ತಿಯ ಪ್ರಭಾವದಿಂದ ನರತ್ವದಿಂದ ನಾರಾಯಣತ್ವಕ್ಕೆ ಮುಟ್ಟುವ ವಿಶೇಷ ಜ್ಞಾನ, ಸಾಧನ ಶಕ್ತಿ ಇದೆ. ಭಕ್ತಿವೀಣ ಅಂದರೆ ಭಕ್ತಿಯಿಲ್ಲದ ಮಾನವ ಪಶು ಇದ್ದಂತೆ, ಇಂಥವನು ೧೦೦ ವರ್ಷ ಬದುಕಿದರೂ ಪಶು ಬದುಕಿದ್ದಂತೆ ಅಷ್ಟೇ. 'ಸಟವಿನೆ ನೇಲಾ ಕೈಸಾ ನಾಹೀಂ' ಅಂದರೆ ಮಗು ಹುಟ್ಟಿದ ಐದನೇ ದಿವಸ ಷಷ್ಠಿದೇವಿಗೆ (ಶಟಗೆವ್ವನಿಗೆ) ನೈವೇದ್ಯ ಪೂಜಾ ಮಾಡುವ ವಿಧಾನವಿದೆ. ಇದಕ್ಕೆ ಐದೇಶೀ ಅನ್ನುತ್ತಾರೆ . ಈ ವ್ರತ ಮಾಡದಿದ್ದರೆ ಶೆಟಿಗೆವ್ವನು ಆರನೇ ದಿನ ಮಗುವಿಗೆ ಅಪಾಯ ಮಾಡಬಹುದೆಂಬ ಭೀತಿ ಇರುತ್ತದೆ. ಇಂಥ ಭಕ್ತಿಯಿಲ್ಲದ ಮಾನವರನ್ನು ಹುಟ್ಟಿದ ಆರನೇ ದಿನಕ್ಕೆ ಸೆಟಿಗೆವ್ವನು ಯಾಕೆ ಯಮಪುರಿಗೆ ಒಯ್ಯಲಿಲ್ಲಾ ಎಂದು ಸಂತರು ಉದ್ಗಾರ ತೆಗೆಯುತ್ತಾರೆ. ಪಶು ಹೇಗೆ ಭಕ್ತಿ ಸಂಸ್ಕಾರವಿಲ್ಲದೇ ಬೆಳೆದು ದೊಡ್ಡದಾಗುತ್ತಿದೆಯೋ ಹಾಗೆ ಈ ಎರಡು ಕಾಲುಗಳ ಪಶುವೂ ದೊಡ್ಡದಾಗುತ್ತದೆ ಎಂದು ಏಕನಾಥ ಮಹಾರಾಜರು ಉದ್ಗಾರ ತೆಗೆಯುತ್ತಿದ್ದಾರೆ; ಅಥವಾ ಇಂಥ ಅಭಕ್ತ ಮೂಢ ಮಗುವಿಗೆ ಜನ್ಮ ಕೊಡುವ ತಾಯಿಯು ಭೂತ ಬಾಧೆಗೊಳಗಾಗಿದ್ದಳೋ ಹೇಗೆ ಎಂದು ಉದ್ಗಾರ ತೆಗೆಯುತ್ತಿದ್ದಾರೆ. ಪಾಪಾಚರಣೆಯಿದ್ದವನಿಗೆ ಯಮಧರ್ಮನು ಪ್ರಶ್ನೆ ಕೇಳಿ ದಂಡ ವಿಧಿಸುವಾಗ, ಇಂಥ ಅಭಕ್ತರು ಏನು ಉತ್ತರ ಕೊಡುತ್ತಿರಬಹುದು? 'ನಿಳಾ ಮ್ಹಣೆ ಪಾಪ ಮುಖ್ಯ ತೇಚಿ ಸಾಚೇ, ನಾವಡೆ ದೇವಾಚೆ ನಾಮ ಮುಖೀ' ಈ ಪ್ರಕಾರ ಅಭಕ್ತ ಹಾಗೂ ನಾಮ ಜಪಿಸದೇ ಇದ್ದ ಮಾನವರೆಲ್ಲ ಪಾಪಿಗಳೆಂದೇ ಪರಿಗಣಿಸಲ್ಪಡುತ್ತಾರೆ. ಯಮಧರ್ಮನು ಇಂಥವರಿಗೆಲ್ಲ ಅನೇಕ ನರಕಯಾತನೆ, ಪೀಡೆಗಳನ್ನು ಕೊಡುವಾಗ ಯಾರೂ ಬಿಡಿಸಲು ಬರುವುದಿಲ್ಲ. ಶ್ರೀ ಸಂತ ಏಕನಾಥ ಮಹಾರಾಜರು ಅಭಕ್ತರಾದ ಮಾನವರಿಗೆಲ್ಲ ಎಚ್ಚರಿಕೆಯುಕ್ತ ಕಠೋರ ವಚನಗಳನ್ನಾಡುವಾಗ ತಮ್ಮ ಧ್ವನಿ ಗದ್ಗದಿತವಾಗುತ್ತದೆಂದು ಹೇಳುತ್ತಾರೆ.

೧೦) ಸ್ವಹಿತಾ ಕಾರಣೆ ಸಂಗತೀ ಸಾಧೂಚೀ। ಭಾವೇ ಭಕ್ತಿ ಹರೀಚೀ ಭೇಟೀ ತೇಣೆ ॥
ಹರಿ ತೇಥೆ ಸಂತ, ಸಂತ ತೇಥೇ ಹರಿ। ಐಸೇ ವೇದ ಚಾರೀ ಬೋಲತಾತೀ ॥
ಬ್ರಹ್ಮಾ ಡೋಳಸಾ ತೇ ವೇದಾರ್ಥ ನಾಕಳೇ। ತೇಥೇ ಹೇ ಆಂಧಳೇ ವ್ಯರ್ಥ ಹೋತೀ ॥

ವೇದಾರ್ಥಾಚಾ ಗೋವಾ ಕನ್ಯಾ ಅಭಿಲಾಷೆ । ವೇದೇ ನಾಹೀಂ ಐಸೇ ಸಾಂಗಿತಲೇ ॥
ವೇದಾಚೇಹೀ ಬೀಜಾಕ್ಷರೇ ಹರೀ ದೋನೀ । ಏಕಾ ಜನಾರ್ದನಿ ಹರೀ ಬೋಲಾ ॥

ಸ್ವಹಿತ ಅಂದರೆ ಜೀವನ ಶಾಶ್ವತ ಹಿತ. ಅದಕ್ಕಾಗಿ ಸಾಧುಗಳ ಸಂಗತಿ ಮಾಡಬೇಕಾಗುತ್ತದೆ. ಸಾಧೂ ಅಂದರೆ ಯಾರು? ಜೇ ಕಾ ರಂಜಲೇ ಗಾಂಜಲೇ ತ್ಯಾಸೀ ಮ್ಹಣೆ ಜೋ ಆಪುಲೆ, ತೋಚಿ ಸಾಧೂ ಓಳಖಾವಾ'. ಅಂದರೆ ದುಃಖ-ದಾರಿದ್ರ್ಯಗಳಿಂದ ಕಂಗಾಲಾಗಿ, ಸಮಾಜದಿಂದ ತುಳಿಯಲ್ಪಟ್ಟ ನಿರಾಧಾರ ಜೀವಿಗಳನ್ನು ತನ್ನವರೆಂದು, ಅಪ್ಪಿಕೊಂಡು ತನ್ನ ಕೈಲಾದಷ್ಟು ಕಾಯಾ, ವಾಚಾ, ಮನಾ, ಸಹಾಯ ಮಾಡುವವನೇ ಸಾಧೂ. ಹೀಗೆ ಎಲ್ಲ ಪ್ರಾಣಿ ಮಾತ್ರಗಳಲ್ಲಿ ದಯಾ, ಕ್ಷಮಾ, ಶಾಂತಿ ಇದ್ದವನೇ ಸಾಧೂ. 'ಬುಡತೇ ಹೇ ಜನ ನ ದೇಖವೀ ಡೋಳಾ, ಏತೋ ಕಳವಳಾ ಮ್ಹಣೂನಿಯಾ', ಸಂಸಾರ ಸಾಗರದಲ್ಲಿ ಮುಳುಗಿ ಹೋಗುತ್ತಿರುವ ಅಜ್ಞ ಜನರನ್ನು ನೋಡಿ ಕಳವಳಪಟ್ಟು ಅವರ ಉದ್ಧಾರದ ಇಚ್ಛೆ ಇದ್ದವರೇ ಸಾಧೂ ಸಂತರು; ಇವರು ಭಕ್ತಿಹೀನ ಅಜ್ಞ ಜನರಲ್ಲಿ ಭಾವ ಭಕ್ತಿಯ ಝರಿಯನ್ನು ಹುಟ್ಟಿಸುವರು. 'ಭಾವಾಚೆ ಮುಖ್ಯಸ್ಥಾನ, ಭಕ್ತೀಚೆ ಮಾಹೇರ ಘರ' ಹೀಗೆ ಸಾಧೂ ಸಂತರ ಸಂಗತಿಯಲ್ಲಿದ್ದರೆ ಭಾವ ಭಕ್ತಿ ಹುಟ್ಟಿ ಮುಂದೆ ಶ್ರೀ ಹರಿ ಪ್ರಾಪ್ತಿಯಾಗುತ್ತದೆ. ಹರಿ ಮತ್ತು ಸಂತರು ಏಕರೂಪವಾಗಿರುತ್ತಾರೆ. 'ಹರಿ ಇದ್ದಲ್ಲಿ ಸಂತರು, ಸಂತರಿದ್ದಲ್ಲಿ ಹರಿ' ಹೀಗೆ ನಾಲ್ಕೂ ವೇದಗಳು ಘೋಷಿಸುತ್ತವೆ. 'ದೇವ ತೆ ಸಂತ, ದೇವ ತೇ ಸಂತ ನಿಮಿತ್ತ ತ್ಯಾ ಪ್ರತಿಮಾ' ತು.ಮ. ಹೀಗೆ ಆತ್ಮದೃಷ್ಟಿಯಿಂದ ಇಬ್ಬರೂ ಆತ್ಮ ಸ್ವರೂಪರೇ. ಸ್ಥೂಲ ದೃಷ್ಟಿಯಿಂದ ಅವರ ಆಕಾರ ಮತ್ತು ಕಾರ್ಯ ಆಯಾ ದೇಶ, ಕಾಲ, ಸಂದರ್ಭಕ್ಕನುಸರಿಸಿ ನಿಮಿತ್ತ ಮಾತ್ರವಾಗಿ ಭಿನ್ನ ಭಿನ್ನವಾಗಿರುತ್ತವೆ. 'ಆತ್ಮಜ್ಞಾನೇ ಚೋಖಡೀ, ಸಂತ ಜೇ ಮಾಝೀ ರೂಪಡೀ'. ಬ್ರಹ್ಮಾ ಡೋಳಸಾತೆ ಅಂದರೆ ಬ್ರಹ್ಮದೇವರು ಜ್ಞಾನದೃಷ್ಟಿ ಇದ್ದವ; ಮತ್ತು ಜಗತ್ತನ್ನು ನಿರ್ಮಾಣ ಮಾಡುವ ಚಾತುರ್ಯ ಸಾಮರ್ಥ್ಯವಿದ್ದವನಿಗೇ ವೇದಗಳ ಗುಹ್ಯಾರ್ಥ ಮತ್ತು ಹರಿ ಜಪ ಮಹಾತ್ಮೆ ತಿಳಿಯುವುದಿಲ್ಲವೆಂದ ಮೇಲೆ ಕರ್ಮಠರಾದ, ತಾವೇ ಪಂಡಿತರೆಂದು ಸ್ವಘೋಷಿತ ಪ್ರಾಕೃತ ಹೇಂದರೆಗಳಿಗೆ ಅಂದರೆ ಮೂಢರಿಗೆ ತಿಳಿಯಲಿಕ್ಕೆ ಸಾಧ್ಯವೇ ಇಲ್ಲ. ವೇದಗಳ ನಿಜಾರ್ಥ ಹರಿರೂಪ ಅಂದರೆ ಗುಣಾತೀತನಾಗುವದು. ಬ್ರಹ್ಮ ದೇವರು ರಜೋ ಗುಣ ಪ್ರಾಧಾನ್ಯವಾದ್ದರಿಂದ ವಿಷಯಾಸಕ್ತನಾಗಿ ತನ್ನ ಪುತ್ರಿಯನ್ನೇ ಮೋಹಿಸಿದನು. ಕಾಮಾಸಕ್ತನಾಗುವದಾಗಲಿ, ವಿಷಯಾಸಕ್ತನಾಗುವದಾಗಲಿ ವೇದಾರ್ಥ ಅಲ್ಲವೇ ಅಲ್ಲ. ಗುಣಾತೀತ, ವಿಷಯಾತೀತನಾಗುವುದೇ ವೇದಾರ್ಥ. ತುಕಾರಾಮ ಮಹಾರಾಜರು ಹೇಳಿದಂತೆ

'ವೇದ ಅನಂತ ಬೋಲಿಲಾ, ಅರ್ಥ ಇತುಕಾಚಿ ಸಾಧಿಲಾ, ವಿಠೋಬಾಸೀ ಶರಣ ಜಾವೇ ನಿಜನಿಷ್ಠೇ ನಾಮ ಗಾವೆ'. ಕೊನೆಯ ಪದದಲ್ಲಿ ನಾಥ ಮಹಾರಾಜರು ಹೇಳುತ್ತಾರೆ. ವೇದಗಳ ಬೀಜಾಕ್ಷರ 'ಹರಿ' ಎಂಬ ಎರಡಕ್ಷರ ಮಾತ್ರವಾದ್ದರಿಂದ ಯಾವಾಗಲೂ ಹರಿಜಪ ಮಾಡುವದರಿಂದಲೇ ಜೀವನ ಉದ್ಧಾರ.

೧೧) ಸತ್ಪದ ತೇ ಬ್ರಹ್ಮ, ಚಿತ್ಪದ ತೇ ಮಾಯಾ । ಆನಂದ ಪದೀ ಜಯಾ ಮ್ಹಣತೀ ಹರಿ ॥
ಸತ್ಪದ ನಿರ್ಗುಣ, ಚಿತ್ಪದ ಸಗುಣ । ಸಗುಣ-ನಿರ್ಗುಣ ಹರೀ ಪಾಯೀ ॥
ತತ್ಸದಿತಿ ಐಸೇ ಪೈಲ ವಸ್ತುವರೀ । ಗೀತೇಮಾಜೀ ಹರಿ ಬೋಲಿಯೇಲೇ ॥
ಹರಿ ಪದ ಪ್ರಾಪ್ತಿ ಭೋಳ್ಯಾ ಭಾವಿಕಾಸಿ । ಅಭಿಮಾನಿಯಾಸೀ ಗರ್ಭವಾಸ ॥
ಅಸ್ತಿ ಭಾತಿ ಪ್ರಿಯ ಐಸೀ ಪದೇ ತೀನೀ । ಏಕಾ ಜನಾರ್ದನಿ ತೇಚಿ ಝಾಲೇ ॥

ಪರಮಾತ್ಮನ ಸ್ವರೂಪ ಸಚ್ಚಿದಾನಂದ ಅಂದರೆ ಸತ್+ಚಿತ್+ ಆನಂದ= ಸಚ್ಚಿದಾನಂದ. ಸತ್ ಅಂದರೆ ಯಾವಾಗಲೂ ಇರುವಂತಹದು, ಬದಲಾಗದಂಥಹದು, ನಾಶವಂತೂ ಆಗುವುದೇ ಇಲ್ಲ. ಇದೇ ಬ್ರಹ್ಮ ವಸ್ತುವು. ಚಿತ್ ಪದವು ಮಾಯೆಯನ್ನು ಪ್ರತಿನಿಧಿಸುತ್ತದೆ. ಹೇಗೆ ಸೂರ್ಯನಿಲ್ಲದೇ ಪ್ರಕಾಶವಿಲ್ಲವೋ ಹಾಗೆಯೇ ಬ್ರಹ್ಮ ಶಕ್ತಿ, ಬ್ರಹ್ಮಜ್ಞಾನ, ಮಾಯೆಯ ಸ್ವರೂಪ. ಸತ್-ಅಸತ್-ವಿಲಕ್ಷಣ ಸ್ವರೂಪದ್ದು. ಸತ್ ಅನ್ನಬೇಕೆಂದರೆ ಸ್ವತಂತ್ರ ಅಸ್ತಿತ್ವವಿಲ್ಲದ್ದು. ಅಸತ್ ಅನ್ನಬೇಕೆಂದರೆ, ಜಗತ್ತಿನ ವ್ಯವಹಾರ ಇದ್ದೇ ಇರುತ್ತದೆ. ಹೀಗೆ ವಿಲಕ್ಷಣ ಸ್ವರೂಪದ್ದು. ಬ್ರಹ್ಮನಿಂದ ಚೇತನ ಪಡೆದು, ಬ್ರಹ್ಮನ ಇಚ್ಛೆಯಂತೆ, ಆಜ್ಞೆಯಂತೆ ಹೇಗೆ ಇರಬೇಕೋ ಹಾಗೆ, ಎಷ್ಟು ಕಾಲದ ವರೆಗೆ ಇರಬೇಕೋ ಅಷ್ಟು ಕಾಲದವರೆಗೆ ಇರುವಂಥದ್ದು. ಆನಂದ ಪದವೇ ಹರಿಯನ್ನು ನಿರ್ದೇಶಿಸುತ್ತದೆ. ಜ್ಞಾನೇಶ್ವರ ಮಾವುಲಿಯವರ ಅಭಂಗ ಆನಂದುರೆ ಆಜಿ ಆನಂದುರೇಸಬಾಹ್ಯಾಭ್ಯಂತರು ಅವಘಾ ಪರಮಾನಂದೂರೆ, ಸಾತವಾ ಅವತಾರ ಆಠವಾ ವೇಳೋ ವೇಳಾ, ಬಾಪರಖುಮಾದೇವಿವರೂ ವಿಠ್ಠಲು ಸೋಹಳಾ' ರಾಮ, ಹರಿ, ವಿಠ್ಠಲ ಈ ಬೀಜಾಕ್ಷರ ಮಂತ್ರಗಳೆಲ್ಲ ಒಂದೇ. ತುಕಾರಾಮ ಮಹಾರಾಜರ ಅಭಂಗದಲ್ಲಿ 'ಆನಂದೂರೆ ಏಕೀ ಪರಮಾನಂದುರೆ, ಜಯಾ ಶೃತಿ ನೇತಿ ನೇತಿ ಮ್ಹಣತೀ ಗೋವಿಂದುರೆ, ವಿಠೋಬಾಚಿ ವೇಢಿ ಆಮ್ಹಾ ಆನಂದು ಸದಾ' ಸತ್ ಪದ ಅಂದರೆ ಬ್ರಹ್ಮನ ಮೂಲ ಸ್ವರೂಪ ನಿರ್ಗುಣ ನಿರ್ವಿಕಾರ, ಚಿತ್ ಪದ ಸೂಚಿಸುವ ಮಾಯೆ ಸಗುಣ. ಅಂದರೆ ಸತ್ವ, ರಜ, ತಮ ತ್ರಿಗುಣಾತ್ಮಕ ಸಾಕಾರ; ಆದರೆ ಹರಿಯು ಸಗುಣನೂ ಹೌದು; ನಿರ್ಗುಣನೂ ಹೌದು.

'ಬಾಪರಖುಮಾದೇವಿವರು ಸಗುಣ-ನಿರ್ಗುಣ, ರೂಪ ವಿಟೇವರೀ ದಾವಿಲೀ ಖೂಣ. 'ಸಗುಣ ನಿರ್ಗುಣ ಏಕು ಗೋವಿಂದುರೆ' ಗೀತೆಯ ೧೭ನೇ ಅಧ್ಯಾಯದಲ್ಲಿ, 'ಹರಿ ಓಂ ತತ್‌ಸತ್' ಅಂದರೆ ಎಲ್ಲ ಲೋಕಗಳಲ್ಲಿ ಶ್ರೀ ಹರಿಯೇ ತುಂಬಿಕೊಂಡಿದ್ದಾನೆ; ಹರಿಯೇ ಎಲ್ಲ ಲೋಕಗಳಿಗೆ ಉಪಾದಾನ ಮತ್ತು ನಿಮಿತ್ತ ಕಾರಣನು. ಸತ್ವದ ಬ್ರಹ್ಮ ಅಂದರೆ ನಿರ್ಗುಣ ಬ್ರಹ್ಮಪ್ರಾಪ್ತಿ ಜ್ಞಾನಮಾರ್ಗದಿಂದ; ಜ್ಞಾನಪ್ರಾಪ್ತಿ ಸಲುವಾಗಿ ವಿವೇಕ, ವೈರಾಗ್ಯ, ಶಮದಮ ಷಟ್ ಸಂಪತ್ತಿ ಅಷ್ಟಾಂಗ ಯೋಗ ಇವುಗಳ ಸಾಧನೆ ಮಾಡಲೇಬೇಕಾಗುತ್ತದೆ. ಸಗುಣ ಸಾಕಾರ ಹರಿಪ್ರಾಪ್ತಿ ಸಾಧನೆಗೆ ಕೇವಲ ನಿಷ್ಠಾವಂತ ಭಾವಿಕ ಭಕ್ತಿ ಬೇಕು. ಭೋಳ್ಯಾ ಭಾವಿಕರೆಂದರೆ ನಿಷ್ಕಾಮ, ಪ್ರೇಮಳ, ನಿರಭಿಮಾನ ಭಕ್ತರು. 'ತರಲೇ ತರತೀ ಹಾ ಭರವಸಾ, ನಾಮಧಾರಕಾಚಾ ಠಸಾ' ಹೀಗೆ ಶ್ರೀ ವಿಠ್ಠಲ ಭಕ್ತಿಯ ಮೇಲೆ ವಿಶ್ವಾಸವಿಟ್ಟು ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡು, ದೇಹ ಸವೆಸುವವರು ಭೋಳ್ಯಾ ಭಾವಿಕರು. ಇಂಥವರು ಮಾತ್ರ ಉದ್ಧಾರವಾಗುತ್ತಾರೆ. ಆದರೆ ದೇಹಾಭಿಮಾನಿಗಳಿಗೆ ಗರ್ಭ ವಾಸ ತಪ್ಪಿದ್ದಲ್ಲ. ಯಾಕೆಂದರೆ ಶ್ರೀ ಹರಿಯ ಸ್ವಭಾವವೇ ಹೀಗೆ ಇದೆ. 'ಪಾಹಾ ಹೇ ದೈವತ ಕೈಸೆ, ಭಕ್ತಿ ಪಿಸೆ ಭಾವಿಕ. ತು.ಮ. 'ಭಾವಿಕಗೆ ಮಾಯೇ, ಭೋಳೆ ಗುಣಾಚೆ; ಆವಡೆ ತಯಾಸೀ ನಾಮ ಘೇತಾ ತಯಾಚೆ' ಜ್ಞಾ.ಮ. ಆದ್ದರಿಂದ ಭೋಳೆ ಭಾವಿಕರಿಗೆ ಹರಿಪ್ರಾಪ್ತಿ. 'ತಿಳಭರೀ ಜರೀ ಹೋಯ ಅಭಿಮಾನ, ಮೇರೂ ತೋ ಸಮಾನ ಭಾರ ದೇವಾ'. ಆದ್ದರಿಂದ ಅಭಿಮಾನಿಗಳಿಗೆ ಗರ್ಭವಾಸ. ಅಸ್ತಿ, ಭಾತಿ, ಪ್ರಿಯ ಇವೆಲ್ಲವು ಸೇರಿ ಸಚ್ಚಿದಾನಂದ ಸ್ವರೂಪ ಪರಮಾತ್ಮಾ. ಆದೇ ನಾನು ಅಂದರೆ 'ಜೀವ ಬ್ರಹ್ಮ ಏವ ನಾ ಪರ' ಎಂಬುದು ಶ್ರೀ ಗುರು ಜನಾರ್ದನ ಸ್ವಾಮಿಗಳವರ ಕೃಪೆಯಿಂದ ಅನುಭವವಾಯಿತೆಂದು ಶ್ರೀ ನಾಥ ಮಹಾರಾಜರು ಹೇಳುತ್ತಾರೆ.

೧೨) **ನಾಕಳೇ ತೇ ಕಳೇ, ಕಳೇ ತೇ ನಾಕಳೇ। ವಳೇ ತೇ ನಾವಳೆ ಗುರುವೀಣೆ ॥**
ನಿರ್ಗುಣೀ ಪಾವಲೇ ಸಗುಣೆ ಭಜತಾ। ವಿಕಲ್ಪ ಧರಿತಾ ಜಿವ್ಹಾ ಝಡೆ ॥
ಬಹುರೂಪೀ ಧರೀ ಸಂನ್ಯಾಶಾಚಾ ವೇಷ। ಪಾಹೋನ ತಯಾಸ ಧನ ದೇತೀ ॥
ಸಂನ್ಯಾಶಾಲಾ ದಿಲೇ ನಾಹೀ ಬಹುರೂಪ್ಯಾಲಾ। ಸಗುಣೀ ಭಜಲಾ ತೇಥೇ ಪಾವೇ ॥
ಅದ್ವೈತಾಚಾ ಖೇಳ ದಿಸೇ ಗುಣಾಗುಣೀ। ಏಕಾ ಜನಾರ್ದನಿ ಓಳಖಿಲೇ ॥

ನಾಕಳೇ ಅಂದರೆ ತಿಳಿಯಲಾರದ ವಸ್ತು. ಇದೇ ಆತ್ಮ ಅಥವಾ ಬ್ರಹ್ಮ ವಸ್ತು. ಕಳೇ ಅಂದರೆ ತಿಳಿಯುವ ವಸ್ತು. ಇದೇ ಪ್ರಪಂಚ ಮತ್ತು ಪ್ರಪಂಚದ ವಸ್ತುಗಳು. ಇವಕ್ಕೆ ಕ್ಷೇತ್ರಜ್ಞ ಮತ್ತು

ಕ್ಷೇತ್ರ ಅಥವಾ ಪುರುಷ ಮತ್ತು ಪ್ರಕೃತಿ ಎಂದು ಸಂಬೋಧಿಸುತ್ತಾರೆ. 'ವಳೇ' ಎಂದರೆ ಅನುಭವಕ್ಕೆ ಬರುವಂಥದು. ಆತ್ಮ-ವಸ್ತುವು ಗುರು ಕೃಪೆಯಿಲ್ಲದೇ ತಿಳಿಯುವುದಿಲ್ಲ. ಅಭ್ಯಾಸದಿಂದ ಕೇವಲ ಶಬ್ದ ಜ್ಞಾನವಾಗಬಹುದು. ಆದರೆ ಅಪರೋಕ್ಷಾನುಭೂತಿ ಯಾಗುವುದಿಲ್ಲ. ಗುರುಕೃಪೆಯಾದೊಡನೆ ಇಂದ್ರಿಯ ಗೋಚರ ಜಗತ್ತು ಕಾಣಿಸುವುದಿಲ್ಲ. ಪರಮಾತ್ಮನ ಸ್ವರೂಪವು ಮೂಲತಃ ನಿರ್ವಿಕಲ್ಪಪೂರ್ಣವಿದ್ದರೂ ನಿರ್ಗುಣನೂ ಅವನೇ ಸಗುಣನೂ ಅವನೇ. ನಿರ್ಗುಣ ಪರಮಾತ್ಮ, ಸಗುಣ ಪರಮಾತ್ಮ ಭಿನ್ನ ಭಿನ್ನವೆಂದು ಕಲ್ಪನೆ ಮಾಡಿಕೊಂಡರೆ, ಅವನ ನಾಲಿಗಿಯೇ ಕತ್ತರಿಸಿ ತುಂಡಾಗಲಿ ಎಂಬ ಶಾಪವಿದೆ. ದಿನಕ್ಕೊಂದು ಬೇರೆ ಬೇರೆ ಸೋಗು ಹಾಕಿ ಭಿಕ್ಷೆ ಬೇಡುವ ವ್ಯವಸಾಯವಿದ್ದ ಬಹುರೂಪಿಯು, ಸಂನ್ಯಾಸಿಯ ವೇಷ ಹಾಕುತ್ತಾನೆಂದು ತಿಳಿಯೋಣ. ಅವನಿಗೆ ಜನರು ದುಡ್ಡು ಕೊಡುತ್ತಾರೆ. ಆ ದುಡ್ಡು ಸನ್ಯಾಸಿಗೆ ಮುಟ್ಟಿತೋ ಅಥವಾ ಆ ಸೋಗು ಹಾಕುವವನಿಗೋ ಎಂಬ ವಿಚಾರ ಮಾಡಲಾಗಿ, ಮೂಲ ಮನುಷ್ಯನು ಒಬ್ಬನೇ ಇದ್ದು, ಅವನಿಗೇ ಅದು ಮುಟ್ಟಿತೆಂದು ಗೊತ್ತಾಗುತ್ತದೆ. ಇದೇ ಉದಾಹರಣೆಯಂತೆ, ಯುಗ ಯುಗಗಳಲ್ಲಿ ಸಗುಣರೂಪದಿಂದ ಅವತರಿಸಿದ ಪರಮಾತ್ಮನನ್ನು ಭಜಿಸಿದರೂ, ಮೂಲ ಪುರುಷ ನಿರಾಕಾರ ನಿರ್ಗುಣನನ್ನು ಭಜಿಸಿದಂತಾಗುತ್ತದೆ. 'ಅದ್ವೈತಾಚಾ ಖೇಳ ದಿಸೇ ಗುಣಾಗುಣೀ' ಅದ್ವೈತಾತ್ಮನು ತ್ರಿಗುಣಾತ್ಮಕ ಮಾಯೆಯಲ್ಲಿ ಚೇತನಶಕ್ತಿ ತುಂಬಿ ಆಟ ಆಡಿಸುವದು. ಭಗವದ್ಗೀತೆಯಲ್ಲಿ ಹೇಳಿದ್ದು ಇದೆ. 'ಈಶ್ವರಃ ಸರ್ವಭೂತಾನಾಂ ಹೃದ್ದೇಶೆ ಅರ್ಜುನ ತಿಷ್ಠತಿ, ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ' ಮತ್ತು 'ನವ್ಹೆ ತೇಚಿ ಕೈಸೇ ಜಾಲೆರೆ ಖೆಳಿಯೂ, ನಾಹೀ ತೇಚಿ ಜಿಸೂ ಲಾಗಲೇರೆ; ಅರೂಪ ಹೋತಿ ತೇ ರೂಪಾಸೀ ಆಲೇ ಜೀವ ಶಿವನಾಮ ನಾವ ಥಾವಲೇರೆ'. ತ್ರಿಗುಣಾತ್ಮಕ ಜಡ ಅಚೇತನ ಮಾಯೆಯಲ್ಲಿ ಜೀವಕಳೆ ತುಂಬಿ ಆಯಾ ಗುಣಗಳಿಗೆ ತಕ್ಕಂತೆ ಮಾಯೆಯನ್ನು ನರ್ತಿಸುವಂತೆ ಮಾಡುತ್ತಿರುವ ಅದ್ವೈತ ಆತ್ಮನ ರಹಸ್ಯವನ್ನು ಶ್ರೀ ಗುರು ಜನಾರ್ದನ ಸ್ವಾಮಿಯವರ ಕೃಪೆಯಿಂದ ತಿಳಿದುಕೊಂಡೆನೆಂದು ಸಂತ ಏಕನಾಥ ಮಹಾರಾಜರು ಹೇಳುತ್ತಾರೆ.

೧೩) ಓಳಖಿಲಾ ಹರಿ ಸಾಠವಿಲಾ ಪೋಟೀ। ಹೋತಾ ತ್ಯಾಚೀ ಭೇಟ ದುಃಖ ಕೈಂಚೆ ॥
ನರ ಅಥವಾ ನಾರೀ ಹೋ ಕಾಂ ದುರಾಚಾರೀ। ಮುಖೀ ಗಾತಾ ಹರೀ ಪವಿತ್ರ ತೋ ॥
ಪವಿತ್ರ ತೇ ಕುಳ ಧನ್ಯ ತ್ಯಾಚೀ ಮಾಯ। ಹರೀ ಮುಖೀ ಗಾಯ ನಿತ್ಯ ನೇಮೇ ॥
ಕಾಮಕ್ರೋಧ-ಲೋಭ ಜಯಾಚೇ ಅಂತರೀ। ನಾಹೀ ಅಧಿಕಾರಿ ಐಸಾ ಏಥೇ ॥

ವೈಷ್ಣವಾಂಚೇ ಗುಹ್ಯ ಕಾಢಿಲೇ ನಿವಡೋನಿ । ಏಕಾ ಜನಾರ್ದನಿ ಹರಿ ಬೋಲಾ ॥

ಪರಮಾತ್ಮನು ಎಲ್ಲ ಬ್ರಹ್ಮಾಂಡಗಳಲ್ಲಿಯ ಎಲ್ಲ ಪ್ರಾಣಿ ಮಾತ್ರಗಳ ಹೃದಯದಲ್ಲಿ ಇರುತ್ತಾನೆಂಬ ಪರೋಕ್ಷ ಜ್ಞಾನವು ಎಲ್ಲ ಸಾಮಾನ್ಯ ಭಕ್ತರಿಗೆ ಇರುತ್ತದೆ. ಆದರೆ ಇದನ್ನೇ ಗುರುಕೃಪೆ ಮೂಲಕ ಅಪರೋಕ್ಷಾನೂಭೂತಿ ಪಡೆದುಕೊಂಡ ಭಾಗ್ಯವಂತರಿಗೆ ಇಲ್ಲಿ ನಾಥ ಮಹಾರಾಜರು 'ಒಳಖಿಲಾ ಹರಿ' ಎಂದಿದ್ದಾರೆ. ಇಂಥ ಭಾಗ್ಯವಂತರು ಮಾತ್ರ ಹೃದಯ ಪೆಟ್ಟಿಗೆಯಲ್ಲಿ ಪರಮಾತ್ಮನನ್ನು ಇರಿಸಿಕೊಂಡಿರುತ್ತಾರೆ. ಸಾಮಾನ್ಯ ಜನರೆಲ್ಲರೂ ತಮ್ಮ ಹೃದಯ ಪೆಟ್ಟಿಗೆಯಲ್ಲಿ ದುಡ್ಡಿನ ಮೋಹ, ಆಸ್ತಿಯ ಮೋಹ, ಅಧಿಕಾರ ಮೋಹ ಸ್ತ್ರೀ ಪುತ್ರಾದಿಗಳ ಮೋಹ ಮತ್ತು ಕಾಮ ಕ್ರೋಧಾದಿ ವಿಕಾರಗಳನ್ನು ಸಂಗ್ರಹಿಸಿಕೊಂಡಿರುತ್ತಾರೆ. ಇಂಥವರಿಗೆ ಜನ್ಮ ಜನ್ಮಾಂತರಗಳಲ್ಲಿ ದುಃಖ ತಪ್ಪುವುದಿಲ್ಲ. ಆದರೆ ಶ್ರೀ ಹರಿಯನ್ನು ಗುರುತಿಸಿ ಅವನನ್ನು ಹೃದಯಸ್ಥನಾಗಿ ಮಾಡಿಕೊಂಡ ಭಾಗ್ಯವಂತನಿಗೆ ದುಃಖವೇ ಇಲ್ಲ. ಉದಾ : 'ಸಾಠವಿಲಾ ಹರೀ ಜಿಹೀ ಹೃದಯ ಮಂದಿರೀ, ತ್ಯಾಚೀ ಸರಲೀ ಏರ-ಝೂರ, ಸುಫಳ ಝಾಲಾ ವ್ಯಾಪಾರ. ಹರಿ ಆಲಾ ಹಾತಾ, ಮಗ ಕೈಂಚೀ ಭಯ ಚಿಂತಾ' ತು.ಮ. ಪುರುಷ ಅಥವಾ ಸ್ತ್ರೀ ಪೂರ್ವಾಶ್ರಮದಲ್ಲಿ ಎಷ್ಟೇ ದುರಾಚಾರಿಯಾಗಿದ್ದರೂ, ನಂತರ ಪಶ್ಚಾತ್ತಾಪಪಟ್ಟು ಭಗವದ್ ಭಕ್ತಿ ಮಾರ್ಗವನ್ನು ಅನುಸರಿಸಿ, ಹರಿನಾಮಸ್ಮರಣೆ ಮಾಡಿದ್ದಾದರೆ ಪವಿತ್ರರೇ ಆಗುತ್ತಾರೆ. ನಿತ್ಯ ನೇಮದಿಂದ ಹೃದಯ ತುಂಬಿ ಪ್ರೇಮ ಭರಿತನಾಗಿ, ಹರಿ ಗುಣಗಾನ ಮಾಡಿದ್ದಾದರೆ ತಂದೆ, ತಾಯಿ ಎರಡೂ ಕಡೆಯ ಕುಲ ಗೋತ್ರಜರು ಪವಿತ್ರರಾಗುತ್ತಾರೆ. ಆದರೆ ಕಾಮ, ಕ್ರೋಧ, ಲೋಭ, ವಿಕಾರಗಳ ಸಮೂಹವನ್ನು ಹೃದಯದಲ್ಲಿ ಇರಿಸಿಕೊಂಡು, ಎಷ್ಟೇ ಹರಿ ಜಪ ಮತ್ತು ಹರಿ ಗುಣಗಾನ ಮಾಡಿದರೂ, ಅವರು ಹರಿ ಕೃಪೆ ಅಥವಾ ಗುರು ಕೃಪೆಗೆ ಯಾವುದಕ್ಕೂ ಅರ್ಹರಾಗುವುದಿಲ್ಲ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಕಾಮ ಕ್ರೋಧ ಲೋಭ ಇವು ನರಕದ್ವಾರದ ಕಡೆಗೆ ಒಯ್ಯುತ್ತವೆಂದು ಹೇಳಿದ್ದಾನೆ. ಆದ್ದರಿಂದ ಮನದಲ್ಲಿ ಮತ್ತು ಧ್ಯಾನದಲ್ಲಿ ಹರಿ ಸ್ಮರಣೆಯೇ ತುಂಬಿಕೊಂಡ ವೈಷ್ಣವರು ಹೇಳುವ ಮುಖ್ಯ ಉಪದೇಶವೆಂದರೆ, ಕಲಿಯುಗದಲ್ಲಿ ಕಾಮ, ಕ್ರೋಧ, ಲೋಭಗಳನ್ನು ಹೋಗಲಾಡಿಸಿ, ಹರಿ ಪ್ರಾಪ್ತಿಗಾಗಿ ಬೇರೆ ಎಲ್ಲ ಸಾಧನೆಗಳಿಗಿಂತಲೂ ಹರಿಜಪವೇ ಸುಲಭ ಮಾರ್ಗವೆಂದು ಹೇಳಿದ್ದಾರೆ. ಆದ್ದರಿಂದ ಎಲ್ಲರೂ ಹರಿ ಹರಿ ಎಂದು ಅನ್ನಿರೆಂದು ಸಂತ ಏಕನಾಥ ಮಹಾರಾಜರು ಹೇಳುತ್ತಾರೆ.

೧೪) ಹರಿ ಬೋಲಾ ದೇತಾ ಹರಿ ಬೋಲಾ ಘೇತಾ । ಹಸತಾ ಖೇಳತಾ ಹರಿ ಬೋಲಾ ॥

ಹರಿ ಬೋಲಾ ಗಾತಾ ಹರಿ ಬೋಲಾ ಖಾತಾ । ಸರ್ವ ಕಾರ್ಯ ಕರಿತಾ ಹರಿ ಬೋಲಾ ॥
ಹರಿ ಬೋಲಾ ಏಕಾಂತೀ ಹರಿ ಬೋಲಾ ಲೋಕಾಂತಿ। ದೇಹ ತ್ಯಾಗಾ ಅಂತೀ ಹರಿ ಬೋಲಾ ॥
ಹರಿ ಬೋಲಾ ಭಾಂಡತಾ ಹರಿ ಬೋಲಾ ಖಾಂಡತಾ । ಉಠತಾ ಬೈಸತಾ ಹರಿ ಬೋಲಾ ॥
ಹರಿ ಬೋಲಾ ಜನೀ ಹರಿ ಬೋಲಾ ವಿಜನಿ । ಏಕಾ ಜನಾರ್ದನೀ ಹರಿ ಬೋಲಾ ॥

ಈ ಅಭಂಗದಲ್ಲಿ ಶ್ರೀ ಸಂತ ಏಕನಾಥ ಮಹಾರಾಜರು, ದೇಶ ಕಾಲ ಅವಸ್ಥಾ ಇವುಗಳ ನಿರ್ಬಂಧನಕ್ಕೊಳಗಾಗದೇ ಹರಿನಾಮ ಉಚ್ಚಾರ ಮಾಡಲು ಉಪದೇಶಿಸಿದ್ದಾರೆ. ಅಂದರೆ ನಾವು ಯಾವುದೇ ದೇಶದಲ್ಲಿರಲಿ, ಭೂಮಿಯ ಮೇಲಿರಲಿ ನೀರಿನ ಮೇಲಿರಲಿ, ಆಕಾಶದಲ್ಲಿರಲಿ, ಯಾವುದೇ ಕಾಲದಲ್ಲಿರಲಿ ಅಂದರೆ ಹಗಲೇ ಇರಲಿ, ರಾತ್ರಿಯೇ ಇರಲಿ, ರಾಹು ಕಾಲ, ಗುಳಿಕಾಲವಿರಲಿ, ಬೀಸುತ್ತಿರಲಿ, ಕುಟ್ಟುತ್ತಿರಲಿ, ವ್ಯವಹಾರ ಮಾಡುತ್ತಿರಲಿ, ಬೇಸಾಯ ಮಾಡುತ್ತಿರಲಿ, ಜಗಳವಾಡುತ್ತಿರಲಿ, ಸರಸ-ಸಲ್ಲಾಪವಾಡುತ್ತಿರಲಿ, ಏಕಾಂತದಲ್ಲಿರಲಿ, ಸಂತೆಯಲ್ಲಿರಲಿ, ಕೂಡ್ರುವಾಗ ಏಳುವಾಗ ಮರೆಯದೇ ಹರಿಜಪ ಮಾಡಲು ಏಕನಾಥ ಮಹಾರಾಜರು ಹೇಳುತ್ತಾರೆ.

೧೫) ಏಕ ತೀನ ಪಾಂಚ ಮೇಳಾ ಪಂಚವಿಸಾಂಚಾ । ಛತ್ತೀಸ ತತ್ವಾಂಚಾ ಮೂಳಹರಿ ॥
ಕಲ್ಪನಾ ಅವಿದ್ಯಾ ಏಣೇ ಝಾಲಾ ಜೀವ । ಮಾಯೋಪಾಧೀ ಶಿವ ಬೋಲಿಜೇತಿ ॥
ಜೀವ ಶಿವ ದೋನ್ಹೀ ಹರಿ ರೂಪೀ ತರಂಗ । ಸಿಂಧೂ ತೋ ಅಭಂಗ ನೇಣೇ ಹರಿ ॥
ಶುಕ್ತಿವರೀ ರಜತ ಪಾಹಾತಾ ಡೋಳಾ ದಿಸೇ । ರಜ್ಜೂವರೀ ಭಾಸೇ ಮಿಥ್ಯಾ ಸರ್ಪ ॥
ಕ್ಷೇತ್ರ, ಕ್ಷೇತ್ರಜ್ಞಾತೆ ಜಾಣತಾತೀ ಜ್ಞಾನೀ । ಏಕಾ ಜನಾರ್ದನೀ ಹರಿ ಬೋಲಾ ॥

ಈ ಜಗತ್ತು ಒಂದು, ಮೂರು, ಐದು, ಇಪ್ಪತ್ತೈದು ಮೂವತ್ತಾರೂ ತತ್ವಗಳಿಂದ ಕೂಡಿದ್ದು ಇದೆ ಎಂದು ಭಿನ್ನ ಭಿನ್ನ ತತ್ವಜ್ಞರ ಅಭಿಪ್ರಾಯವಾಗಿದೆ. ಪಿಂಡಾಂಡದಲ್ಲಿ ಇಪ್ಪತ್ತೈದು ತತ್ವಗಳಿರುತ್ತವೆ. ಪೃಥ್ವಿ, ನೀರು, ಬೆಂಕಿ, ವಾಯು, ಆಕಾಶ ಪಂಚ ಮಹಾಭೂತಗಳು. ಪಂಚ ವಿಷಯಗಳು ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಗಳು ಮನ ಬುದ್ಧಿ ಅಹಂಕಾರ, ಚಿತ್ತ, ಸಂಘಾತ ಹೀಗೆ ೨೫, ಇದಕ್ಕೆ ಸ್ಥೂಲ ಶರೀರದ ಹನ್ನೊಂದು ರಾಸಾಯನಿಕ ತತ್ವಗಳನ್ನು ಕೂಡಿಸಿದರೆ, ಮೂವತ್ತಾರು ತತ್ವಗಳ ಸಮೂಹವಾಗಿರುತ್ತದೆ. ಈ ಎಲ್ಲ ತತ್ವಗಳಿಗೂ ಶ್ರೀ ಹರಿಯೇ ನಿಮಿತ್ತ ಕಾರಣ ಮತ್ತು ಉಪಾದಾನ ಕಾರಣನಾಗಿರುತ್ತಾನೆ. ಒಬ್ಬನೇ ಒಬ್ಬ ಪರಮಾತ್ಮ, ಅವಿದ್ಯೆಯಿಂದ ಕೂಡಿದ ಸೂಕ್ಷ್ಮ ಶರೀರದಲ್ಲಿ ಪ್ರತಿ ಬಿಂಬಿತನಾಗಿ

ಜೀವನೆನ್ನಿಸಿಕೊಳ್ಳುತ್ತಾನೆ. ಮಾಯೋಪಾದಿಯಿಂದ ಶಿವನೆನ್ನಿಸಿಕೊಳ್ಳುತ್ತಾನೆ. ಸಮುದ್ರದ ಮೇಲೆ ತೆರೆಗಳು ಭಾಸವಾಗುವಂತೆ, ಪರಮಾತ್ಮ ರೂಪದ ಮೇಲೆ ಜೀವ ಶಿವ ಎರಡೂ ಭಾಸವಾಗುತ್ತವೆ. ಸೂರ್ಯನ ಪ್ರಕಾಶದಲ್ಲಿ ಸಿಂಪಿಯು ಬೆಳ್ಳಿಯಂತೆ ಹೊಳೆಯುತ್ತದೆ. ಸ್ವಲ್ಪ ಕತ್ತಲೆಯಲ್ಲಿ ಹಗ್ಗವು ಹಾವಿನಂತೆ ಭಾಸವಾಗುತ್ತದೆ. ಹಾಗೆಯೇ ಮೂಲ ಹರಿ ರೂಪದಲ್ಲಿ ಅಂದರೆ ಆತ್ಮ ರೂಪದಲ್ಲಿ ಉಪಾಧಿ ಭೇದದಿಂದ ಜೀವ ಶಿವ ಕಲ್ಪನೆ ಮಾತ್ರ. ಕ್ಷೇತ್ರ ಮತ್ತು ಕ್ಷೇತ್ರಜ್ಞರ ನಿಜ ಸ್ವರೂಪವನ್ನು ಜ್ಞಾನಿಗಳು ಮಾತ್ರ ತಿಳಿದಿರುತ್ತಾರೆ. ಆದ್ದರಿಂದ ಹರಿ ಹರಿ ನಾಮಸ್ಮರಣೆ ಮಾಡಿ ಜ್ಞಾನಿಗಳಿಗೆ ಶರಣು ಹೋಗಿರೆಂದು ಏಕನಾಥ ಮಹಾರಾಜರು ಆದೇಶಿಸುತ್ತಾರೆ.

೧೬) **ಕಲ್ಪನೇ ಪಾಸೂನಿ ಕಲ್ಪಿಲಾ ಜೋ ಠೇವಾ । ತೇಣೆ ಪಡೇ ಗೋವಾ ನೇಣೆ ಹರಿ ॥**
ದಿಧಲ್ಯಾ ವಾಚೋನಿ ಫಳ ಪ್ರಾಪ್ತಿ ಕೈಂಚಿ । ಇಚ್ಛಾ ಕಲ್ಪನೇಚಿ ವ್ಯರ್ಥ ಬಾಪಾ ॥
ಇಚ್ಛಾವೇ ತೇ ಜವಳೀ ಹರಿಚೆ ಚರಣ । ಸರ್ವ ನಾರಾಯಣ ದೇತೋ ತುಝ ॥
ನ ಸುಟೇ ಕಲ್ಪನಾ ಅಭಿಮಾನಾಚೀ ಗಾಠೀ । ಘೇತಾ ಜನ್ಮ ಕೋಟಿ ಹರಿ ಕೈಂಚಾ ॥
ಏಕಾಜನಾರ್ದನಿ ಸಾಪಡಲೀ ಖೂಣ । ಕಲ್ಪನಾ ಅಭಿಮಾನ ಹರಿ ಝಾಲಾ ॥

ಯಾ, ಭ್ರಮ, ಆಭಾಸ, ಕಲ್ಪನಾ ಈ ಎಲ್ಲ ಶಬ್ದಗಳ ಅರ್ಥ ಒಂದೇ. ಈ ಪ್ರಪಂಚವು ಮನೋಕಲ್ಪಿತವಿರುತ್ತದೆ. ಇದಕ್ಕೆ ಉದಾಹರಣೆ ಸುಷುಪ್ತಿ ಅವಸ್ಥೆ. ಅಂದರೆ ಪೂರ್ಣ ನಿದ್ರಾವಸ್ಥೆಯಲ್ಲಿ ಮನಸ್ಸು ಬೀಜ ರೂಪದಲ್ಲಿರುವುದರಿಂದ ಜಗತ್ತಿನ ಅನುಭವವಾಗುವುದಿಲ್ಲ. ನಿದ್ದೆ ಮುಗಿದು ಎಚ್ಚರದ ಅವಸ್ಥೆಯಲ್ಲಿ ಬಂದಾಗ, ಮನಸ್ಸು ಜಾಗೃತವಾಗುವದರಿಂದ ಜಗತ್ತು ಕಾಣಿಸುತ್ತದೆ. ಹೀಗೆಯೇ ಜೀವನು ಹಿಂದಿನ ಎಷ್ಟೋ ವಿಷಯಗಳನ್ನು ಚಿಂತಿಸುತ್ತ, ಕಾಮನೆಗಳನ್ನು ಹಾಗೂ ವಿಕಾರಗಳನ್ನು ಹೊಸ ಹೊಸ ಸಂಕಲ್ಪದಿಂದ ಹೊಸ ಹೊಸ ವಿಷಯಗಳನ್ನು ಸಂಗ್ರಹಿಸುತ್ತ, ಇವೆಲ್ಲವುಗಳಿಂದ ತಾನೇ ಹೆಣೆದ ಜಾಳಿಗೆಯಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾನೆ. ಆದ್ದರಿಂದ ತನ್ನ ಹೃದಯದಲ್ಲಿ ಇದ್ದ ಪರಮಾತ್ಮನು ಅನುಭವಕ್ಕೆ ಬರುವುದಿಲ್ಲ. ಇದನ್ನೇ ತುಕಾರಾಮ ಮಹಾರಾಜರು ಹೇಳುತ್ತಾರೆ. 'ಕಾಮೇ ನೇಲೆ ಚಿತ್ತ ನೇದೀ ಅವಲೋಕು ಮುಖ. ದಿಧಲ್ಯಾ ವಾಚೂನಿ ಫಲಪ್ರಾಪ್ತಿ ಕೈಂಚಿ' ಅಂದರೆ ಬೀಜ ಬಿತ್ತದೆ ಬೆಳೆ ಬರುವುದಿಲ್ಲ. ಎಂಥ ಬೀಜ ಬಿತ್ತಿರುತ್ತಾರೋ ಅಂಥದೇ ಬೆಳೆ ಬರುತ್ತದೆ. ಈ ಜನ್ಮದಲ್ಲಿ ದಾನ, ಧರ್ಮ ಮಾಡಿದ್ದರೆ ಅದಕ್ಕನುಗುಣವಾಗಿ ಮುಂದಿನ ಜನ್ಮಗಳಲ್ಲಿ ಫಲ ಸಿಗುವದು. ಇದು ಜಗತ್ತಿನ ನಿಯಮ. ಆದ್ದರಿಂದ ಪರಮಾತ್ಮನ ಪ್ರಾಪ್ತಿಯ ಸಲುವಾಗಿ ಮನ,

ಬುದ್ಧಿ, ಅಹಂಕಾರ ಚಿತ್ ಇವನ್ನು ಶುದ್ಧಗೊಳಿಸಬೇಕು. ''ಸರ್ವಸ್ವಾಸೀ ಮುಕಾವೇ, ತೇಣೆ ಹರಿಸೀ ಜಂಕಾವೇ'' . ಜೀವನ ಉದ್ದೇಶವೇ ಮುಖ್ಯವಾಗಿ ಪರಮಾತ್ಮ ಪ್ರಾಪ್ತಿ. ಉಳಿದ ವಸ್ತು ವಿಷಯಗಳು ಗೌಣವೆಂದು ತಿಳಿಯಬೇಕು. ಹರಿಚರಣವನ್ನೇ ಧ್ಯಾನ್ಯದಲ್ಲಿ ಇಟ್ಟುಕೊಂಡರೆ ನಾರಾಯಣನು ಎಲ್ಲವನ್ನೂ ನಿನಗೆ ಕೊಡುತ್ತಾನೆ. ಒಂದು ವೇಳೆ ನಾನು ಮಾಡುವವ ಎಂಬ ಅಹಂಕಾರ ಮತ್ತು ಅಭಿಮಾನವೆಂಬ ಭ್ರಮೆ ಇದ್ದರೆ ನೀನು ಕೋಟಿ ಜನ್ಮಗಳಲ್ಲಿ ಹರಿಭಕ್ತಿ ಮಾಡಿದರೂ ಏನೂ ಉಪಯೋಗವಿಲ್ಲ. ಏಕನಾಥ ಮಹಾರಾಜರು ಹೇಳುತ್ತಾರೆ. ಶ್ರೀ ಗುರು ಜನಾರ್ದನ ಸ್ವಾಮಿಯವರ ಕೃಪೆಯಿಂದ ನನಗೆ ಹರಿಚಿಂತನೆ, ಹರಿಸ್ಮರಣೆ, ಸತತ ಹರಿನಾಮೋಚ್ಚಾರದ ವರ್ಮ ತಿಳಿದಿದ್ದರಿಂದ ನನ್ನ ಕಲ್ಪನೆ ಅಭಿಮಾನ ಎಲ್ಲವೂ ಹರಿ ರೂಪವಾಗಿದೆ. ಇದನ್ನೇ ಭಾಗವತ ಗ್ರಂಥದಲ್ಲಿ ಹೇಳಿದ್ದಾರೆ. 'ತತ್ಕಾಳ ಜಾವಯಾ ದೇಹಾಭಿಮಾನ, ಅಖಂಡ ಮಾಜೇ ನಾಮ ಸ್ಮರಣ, ಗೀತ ನೃತ್ಯ ಹರಿ ಕೀರ್ತನ, ಸರ್ವಾಭೂತೀ ಸಮಾನ ಮದ್ಭಾವೋ'.

೧೭) **ಕಾಯ ನಪುಂಸಕಾ ಪದ್ಮಿನೀಚೆ ಸೊಹಳೇ । ವಾಂಝೆುಸೀ ಡೋಹಳೆ ಕೈಂಚೆ ಹೋತಿ ॥**
ಅಂಧಾ ಪುಢೇ ದೀಪ ಖರಾಸೀ ಚಂದನ । ಸರ್ಪಾ ದೂಧ ಪಾನ ಕರೂ ನಯೇ ॥
ಕ್ರೋಧಿ ಅವಿಶ್ವಾಸೀ ತ್ಯಾಸೀ ಭೋಧ ಕೈಂಚಾ । ವ್ಯರ್ಥ ಆಪುಲಿ ವಾಚಾ ಶಿಣವೂ ನಯೇ ॥
ಖಳಾಚೆ ಸಂಗತೀ ಉಪಯೋಗಾಸೀ ನಯೇ । ಆಪಣಾ ಅಪಾಯ ತ್ಯಾಚೆ ಸಂಗೇ ॥
ವೈಷ್ಣವೀ ಕುಪಥ್ಯ ಟಾಕಿಲೇ ವಾಳೂನಿ । ಏಕಾಜನಾರ್ದನಿ ತೇಚಿ ಭಲೇ ॥

ಈ ಅಭಂಗದಲ್ಲಿ ಶ್ರೀ ಸಂತ ಏಕನಾಥ ಮಹಾರಾಜರು, ಅರ್ಹತೆಯಿಲ್ಲದೇ ನಾಮ ಜಪ ಮಾಡಿದರೆ, ಹರಿ ಪ್ರಾಪ್ತಿಯಾಗುವುದಿಲ್ಲವೆಂಬುದನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ. ಸ್ತ್ರೀ ಸುಖ ಭೋಗಿಸಬೇಕಾದರೆ, ಪುರುಷತ್ವ ಇರಬೇಕಾಗುತ್ತದೆ. ನಪುಂಸಕನ ಮುಂದೆ ಪದ್ಮಿಣಿ ಎಂದರೆ ರೂಪ ಸುಂದರಿಯನ್ನು ನಿಲ್ಲಿಸಿದರೂ ಏನೂ ಉಪಯೋಗವಿಲ್ಲ. ಆದರಂತೆ ಬಂಜೆ ಸ್ತ್ರೀಗೆ ಪುರುಷನು ಎಷ್ಟೇ ಭೋಗ ಕೊಟ್ಟರೂ, ಅವಳಿಂದ ಸಂತತಿಯಾಗುವದು ಸಾಧ್ಯವೇ ಇಲ್ಲ. ಇದನ್ನೇ ತುಕಾರಾಮ ಮಹಾರಾಜರು ಹೇಳಿದ್ದಾರೆ.

'ಇಂದ್ರಿಯಾಸೀ ನೇಮ ನಾಹೀ, ಮುಖೀ ರಾಮ ಮ್ಹಣೋನಿ ಕಾಂಹೀ', 'ಮುಖೀ ಬೋಲೇ ಬ್ರಹ್ಮಜ್ಞಾನ, ಮನೀ ಧನ ಆಣ-ಮಾನ', ಮನಸ್ಸು ಇಂದ್ರಿಯಗಳ ನಿಯಂತ್ರಣವಿಲ್ಲದೇ, ಕೇವಲ ಯಾಂತ್ರಿಕವಾಗಿ ಮುಖದಿಂದ ರಾಮಜಪ ಮಾಡಿದರೆ ಏನೂ

ಉಪಯೋಗವಿಲ್ಲ. ಅದರಂತೆ ಮನಸ್ಸಿನಲ್ಲಿ ದುಡ್ಡು ಮತ್ತು ಮಾನ ಮರ್ಯಾದೆಯ ಇಚ್ಛೆಯನ್ನಿರಿಸಿಕೊಂಡು ಕೇವಲ ಮುಖದಿಂದ ಬ್ರಹ್ಮಜ್ಞಾನ ಹೇಳಿದರೂ ಏನೂ ಫಲ ಪ್ರಾಪ್ತಿ ಇಲ್ಲ. ಹುಟ್ಟು ಕುರುಡನಿಗೆ ದೀಪದಿಂದ, ಕತ್ತೆಗೆ ಗಂಧಲೇಪನದಿಂದ ಏನೂ ಉಪಯೋಗವಿಲ್ಲ. ಸರ್ಪಕ್ಕೆ ಹಾಲು ಕುಡಿಸಬಾರದು. ಅಮೃತ ಕೂಡಿಸಿದರೂ ಅದು ವಿಷವಾಗುತ್ತದೆ. ಹಾಗೆಯೇ ಸಂತರ ವಚನದಲ್ಲಿ ವಿಶ್ವಾಸವಿಲ್ಲದವರಿಗೆ, ಕಾಮ ಕ್ರೋಧವಿಕಾರವುಳ್ಳವರಿಗೆ ಉಪದೇಶ ಬೋಧ ಮಾಡಿ ವ್ಯರ್ಥ ಶ್ರಮ ಪಡಬಾರದು. ಯಾಕೆಂದರೆ ಅದು ಹುಟ್ಟು ಕುರುಡನ ಮುಂದೆ ದೀಪವಿಟ್ಟಂತೆ ವ್ಯರ್ಥ. ದುಷ್ಟರ ಸಂಗತಿ ಉಪಯೋಗದ್ದಲ್ಲ, ಅವರ ಸಂಗತಿ ಮಾಡಿದವರಿಗೆ ಅಪಾಯ ನಿಶ್ಚಿತ. 'ದುಷ್ಟಾಂಚೆ ಸಂಗೇ ದುಃಖ ಪ್ರಾಪ್ತ ಹೋಯ, ತೇಥೇ ಕೈಸೇ ಸೋಯ ತರಾವಯಾ'. ಕುಪಥ್ಯ ಎಂದರೆ ಲೋಕದಲ್ಲಿ ಆರೋಗ್ಯ ಕೆಡಿಸುವ ವಸ್ತುಗಳನ್ನು ಸೇವಿಸುವದು. 'ವೈಷ್ಣವೀ ಕುಪಥ್ಯೆ ಟಾಕಿಲೇ ವಾಳೋನಿ' ಅಂದರೆ ಹರಿಪ್ರಾಪ್ತಿಗೆ ಆತಂಕವುಂಟು ಮಾಡುವಂತಹ, ದಂಭ, ಅಭಿಮಾನ, ಅಹಂಕಾರ, ದುರಾಸೆ, ಕಾಮ ಕ್ರೋಧ ಮುಂತಾದವುಗಳನ್ನು ಸಂತರು ಸಮೀಪ ಬರಗೊಡುವುದಿಲ್ಲ ಮತ್ತು ಇದೇ ಆದರ್ಶ ಮಾರ್ಗವೆಂದು ಏಕನಾಥ ಮಹಾರಾಜರು ಹೇಳುತ್ತಾರೆ.

೧೮) **ನ ಜಾಯೇಚೀ ತಾಠಾ ನಿತ್ಯ ಖಟಾಟೋಪ । ಮಂಡುಕೆ ವಟವಟ ತೈಸೇ ತೇ ಗಾ ॥**
ಪ್ರೇಮಾವೀಣ ಭಜನ ನಾಕಾವೀಣ ಮೋತಿ । ಅರ್ಥಾವೀಣ ಪೋಥೀ ವಾಚೂನಿ ಕಾಯ ॥
ಕುಂಕವಾ ನಾಹೀ ಠಾವೆ ಮ್ಹಣೆ ಮೀ ಆಹೇವ । ಭಾವಾವೀಣ ದೇವ ಕೈಸಾ ಪಾವೇ ॥
ಅನುತಾಪಾವೀಣ ಭಾವ ಕೈಸಾ ರಾಹೇ । ಅನುಭವೇ ಪಾಹೇ ಶೋಧೂನಿಯಾ ॥
ಪಾಹತಾ ಪಾಹಣೆ ಗೇಲೇ ತೇ ಶೋಧೂನೀ । ಏಕಾ ಜನಾರ್ದನಿ ಅನುಭವಿಲೇ ॥

ಜಗತ್ತಿನಲ್ಲಿ ಎಷ್ಟೋ ಜನರು ಶಾಸ್ತ್ರಜ್ಞಾನ, ಭಕ್ತಿ ಇವುಗಳ ವಿಷಯವಾಗಿ ಮಾತನಾಡುವ ಬಗ್ಗೆ ಮಾತ್ರ ಪಾರಂಗತರಾಗಿ, ತಮ್ಮ ಬುದ್ಧಿ ಚಾತುರ್ಯದಿಂದ ಜಗತ್ತಿನ ಜನರಿಗೆ ಆಶ್ಚರ್ಯಚಕಿತರನ್ನಾಗಿ ಮಾಡುವ ಮತ್ತು ಪ್ರಸಿದ್ಧಿ ಪಡೆಯುವ ಉದ್ದೇಶದಿಂದಲೇ, ಅದಕ್ಕೊಪ್ಪುವ ಢಾಂಬಿಕ ವೇಷ ಭೂಷಣಗಳಿಂದ ಕಾಣಿಸಿಕೊಳ್ಳುತ್ತಾರೆ. ಇಂಥ ಕೀರ್ತನ ಪ್ರವಚನ ಹೇಳುವದರಿಂದ, ಹರಿ-ಪ್ರಾಪ್ತಿಗೆ ಬೇಕಾಗುವ ಚಿತ್ತ ಶುದ್ಧಿಯಾಗುವದಿಲ್ಲ. ತಾಠಾ ಅಂದರೆ ಅಹಂಕಾರ. ಢಾಂಬಿಕ ಭಕ್ತಿಯಿಂದ ಅಹಂಕಾರ ಹೆಚ್ಚಾಗುತ್ತ, ಚಿತ್ತ ವಿಕ್ಷೇಪವೇ ಆಗುತ್ತದೆ. ನಿತ್ಯ ಕಟಾಟೋಪವೆಂದರೆ, ನಿತ್ಯ ಇದೇ ಪ್ರಯತ್ನದಲ್ಲಿ ತೊಡಗುವದು. ಢಾಂಬಿಕ

ಭಜನೆ ಕೀರ್ತನೆಗಳಲ್ಲಿ ಧನ ಮತ್ತು ಮಾನ-ಮರ್ಯಾದೆ, ಪ್ರಸಿದ್ಧಿ ಚಿತ್ತದಲ್ಲಿಟ್ಟುಕೊಂಡು, ಮಳೆಗಾಲದಲ್ಲಿ ಕಪ್ಪೆಗಳು ವಟವಟಿಸುವಂತೆ, ಆಧ್ಯಾತ್ಮಿಕ ಸಾಹಿತ್ಯದಲ್ಲಿಯ ಶಬ್ದಗಳನ್ನು ಬಳಸುವದರಿಂದ, ಶ್ರೀ ಹರಿ ಅವರಿಂದ ದೂರ ಹೋಗುತ್ತಾನೆ. ಸಾಮಾನ್ಯ ಜನರ ಪ್ರಸಂಶೆ ಹಾಗೂ ಪ್ರಸಿದ್ಧಿ ಅಂದರೆ ಮಾಯೆ ಮಾತ್ರ ಉಳಿಯುತ್ತದೆ. ಪ್ರೇಮವಿಲ್ಲದ ಭಜನೆ, ಮೂಗು ಇಲ್ಲದ ಮೂಗುತಿ, ಅರ್ಥ ತಿಳಿಯದೇ ಗ್ರಂಥಗಳನ್ನು ಓದುವದು, ಇವೆಲ್ಲವೂ ನಿರರ್ಥಕ. ಸಂತರ ಗ್ರಂಥ ಮತ್ತು ವಚನಗಳಲ್ಲಿ ವಿಶ್ವಾಸವಿಲ್ಲದೇ ಮಾಡಿದ ಭಕ್ತಿಯು, ಗಂಡನಿಲ್ಲದ ಸ್ತ್ರೀಯು ಹಣೆಯ ಮೇಲೆ ಕುಂಕುಮ ಹಚ್ಚಿಕೊಂಡು ನಕಲಿ ಮಂಗಳಸೂತ್ರ, ಧರಿಸಿ ತಾನು ಮುತ್ತೈದಿ ಎಂದು ಹೇಳಿದಂತಾಗುತ್ತದೆ. ಅನುತಾಪವಿಲ್ಲದೇ ಭಾವಭಕ್ತಿ ವಿಶ್ವಾಸ ಹುಟ್ಟುವದಿಲ್ಲ, ಇದು ಅನುಭವದ ಮಾತು. ಅನುತಾಪವೆಂದರೆ, ಪರಮಾತ್ಮನು ಉತ್ತಮವಾದ ನರದೇಹವನ್ನು ಕೊಟ್ಟಿದ್ದರೂ, ತನ್ನನ್ನು ತಾನೇ ದೇವರ ಸ್ವರೂಪನಾಗಿ ಮಾಡಿಕೊಳ್ಳುವ ಶಕ್ತಿ ಇದ್ದರೂ, ಪ್ರಾಣಿಗಳಂತೆ ಆಹಾರ, ನಿದ್ರಾ, ಸ್ತ್ರೀ ಭೋಗ, ಪ್ರಜೋತ್ಪತ್ತಿ, ಮಕ್ಕಳಿಗೆ-ಮೊಮ್ಮಕ್ಕಳಿಗೆ ಸಾಕಷ್ಟು ಆಸ್ತಿ ಗಳಿಸಿಡುವ ಹವ್ಯಾಸ, ತನ್ನ ಸಂತತಿಗಳ ಯೋಗ ಕ್ಷೇಮ, ಚಿಂತೆ ಇದರಲ್ಲಿಯೇ ತನ್ನ ಆಯುಷ್ಯ ಮತ್ತು ಶಕ್ತಿ ಹಾಳು ಮಾಡಿಕೊಂಡೆನೆಂಬ ಪಾಶ್ಚಾತಾಪ. ಉದಾಹರಣೆಗಾಗಿ, 'ಕೀತೀ-ವೇಳಾ ಜನ್ಮಾ ಯಾವೆ ಕಿತೀ ಹ್ವಾವೇ ಫಜೀತ'. 'ಮೀ ಅವಗುಣೀ ಅನ್ಯಾಯೀ, ಪುರೇ ಹಾ ಸಂಸಾರ. ಮೀ ತವ ಅನಾಥ-ಅಪರಾಧಿ, ತುಝು ಮ್ಯಾ ಅಠವೀಲೇ ನಾಹೀ ಕಧೀ'. ಇವೆಲ್ಲಾ ಅನುತಾಪದ ಉದ್ಗಾರಗಳು. ಏಕನಾಥ ಮಹಾರಾಜರು, ಶ್ರೀಗುರು ಕೃಪೆಯಿಂದ ನೋಡುವವ ನೋಡುವ ವಸ್ತು ಮತ್ತು ನೋಡುವ ಕ್ರಿಯೆ ಈ ತ್ರಿಪುಟಿಯನ್ನು ಮೀರಿ, ಆ ವಸ್ತುವಿನಲ್ಲಿಯೇ ಅಂದರೆ ಪರಮಾತ್ಮನಲ್ಲಿಯೇ ಏಕರೂಪ ಆದದ್ದನ್ನು ಅನುಭವಿಸಿದೆನು; ಅಂದರೆ ಅನುಭವ ಮಾಡಿಕೊಳ್ಳುವ ವಸ್ತು ಅನುಭವ ಮಾಡಿಕೊಳ್ಳವವ ಮತ್ತು ಅನುಭವದ ಕ್ರಿಯೆ, ಈ ಮೂರನ್ನೂ ವಿಶೇಷ ರೀತಿಯಿಂದ ಸಂಶೋಧನೆ ಮಾಡುತ್ತಾ ಹೊರಟಂತೆ, ಈ ಮೂರೂ ನನ್ನ ಸಹಿತ ಪರಮಾತ್ಮನಲ್ಲಿ ಲೀನವಾಗಿ ಏಕರೂಪವಾಗುತ್ತವೆಂದು ಹೇಳುತ್ತಾರೆ.

೧೯) ಪರಿಮಳ ಗೇಲಿಯಾ ಓಸ ಫೂಲ ದೇಠೀ । ಆಯುಷ್ಯ ಸೇವಟಿ ದೇಹ ತೈಸಾ ॥
ಘಡಿ ಘಡಿ ಕಾಳ ವಾಟ ಯಾಚೀ ಪಾಹೇ । ಅಜುನೀ ಕಿತೀ ಆಹೇ ಅವಕಾಶ ॥
ಹಾಚಿ ಅನುತಾಪ ಘೇವೂನಿ ಸಾವಧ । ಕಾಹೀ ತರೀ ಬೋಧ ಕರೀ ಮನಾ ॥
ಏಕ ತಾಸ ಉರಲಾ ಖಟ್ವಾಂಗ ರಾಯಾಸೀ । ಭಾಗ್ಯದಶಾ ಕೈಸೀ ಪ್ರಾಪ್ತ ಝಾಲೀ ॥

ಸಾಪಡಲಾ ಹರಿ ತಯಾಲಾ ಸಾಧನೀ । ಏಕಾ ಜನಾರ್ದನೀ ಹರೀ ಬೋಲಾ ॥

ಹಿಂದಿನ ಅಭಂಗದಲ್ಲಿ ನಾಥ ಮಹಾರಾಜರು, ಅನುತಾಪವಿಲ್ಲದೇ ಭಾವಭಕ್ತಿ ಹುಟ್ಟುವದಿಲ್ಲವೆಂದು ಹೇಳಿದ್ದಾರೆ. ಈ ಅಭಂಗದಲ್ಲಿ ಅನುತಾಪವೆಂದರೆ, ಪಾಶ್ಚಾತ್ತಾಪ ಹೇಗೆ ನಿರ್ಮಿಸಿಕೊಳ್ಳಬೇಕೆಂಬುದನ್ನು ತಿಳಿಸಿ ಹೇಳಿದ್ದಾರೆ. ಹೂವಿನ ವಾಸನೆ ಅಥವಾ ಪರಿಮಳ ಹೋಗಿ ಒಣಗಿದ ನಂತರ ಹೂವಿನ ಉಪಯೋಗವಿಲ್ಲ. ಅದರಂತೆ ಆಯುಷ್ಯ ಮುಗಿದ ಮೇಲೆ ಮನುಷ್ಯ ಶರೀರದ ಉಪಯೋಗವಿಲ್ಲ. ಕ್ಷಣ ಕ್ಷಣ ಯಮಧರ್ಮರಾಯನು ಆಯಾ ಮಾನವ ಶರೀರಗಳ ಆಯುಷ್ಯ ಅವಧಿ ಮುಕ್ತಾಯದ ನಿರೀಕ್ಷಣೆಯಲ್ಲಿರುತ್ತಾನೆ. ಇದನ್ನೇ ತುಕಾರಾಮ ಮಹಾರಾಜರು ಹೇಳಿದ್ದಾರೆ. ''ಕ್ಷಣೋಕ್ಷಣ ಹಾಚೀ ಕರಾವಾ ವಿಚಾರ, ತರಾವಯಾ ಪಾರ ಭವಸಿಂಧು, ನಾಶಿವಂತ ದೇಹ ಜಾಣಾರ ಸಕಳ ಆಯುಷ್ಯ ಖಾತೋ ಕಾಳ ಸಾವಧಾನ'' 'ಕ್ಷಣ ಭಂಗುರ ನಾಹೀ ಭರವಸಾ, ಹ್ವಾರೇ ಸಾವಧ ತೋಡಿ ಮಾಯಾ ಆಶಾ, ಕಾಹೀ ನ ಚಲೇ ಮಗ ಗಳಾ ಪಡಾಲ ಫಾಸಾ, ಪುಢೇ ಹೋಶಾರ ಥೋರ ಆಹೇ ಒಳಸಾ ಗಾ'' ಇದನ್ನೇ ಜ್ಞಾನೇಶ್ವರ ಮಹಾರಾಜರು ಹೇಳಿದ್ದಾರೆ. 'ಮೋಕ್ಷ ಮೇಲ್ಯಾ ಪಾಠೀ ಆಮ್ಹಾಸಿ ಹೋಯೀಲ ಐಸೇ ಜೇ ಮ್ಹಣತೀಲ ಅತೀ ಮೂರ್ಖ. ಪ್ರತಿಯೊಬ್ಬ ಮನುಷ್ಯನು ಸಾವಧಾನದಿಂದ ಮನುಷ್ಯ ದೇಹದ ಮಹಾತ್ಮೆಯನ್ನು ಸಂತರ ಗ್ರಂಥಗಳ ಆಧಾರದಿಂದ ಮತ್ತು ಸ್ವ-ವಿಚಾರದಿಂದ ತಿಳಿದುಕೊಂಡು, ಪಾಶ್ಚಾತ್ತಾಪ ಪಟ್ಟು, ಪರಮಾರ್ಥ ಸಾಧನೆಯಲ್ಲಿ ತನನ್ನು ತಾನು ತೊಡಗಿಸಿಕೊಂಡು, ಪ್ರಯತ್ನಶೀಲನಾದಾಗ ಮಾತ್ರ ಅವರ ಅಭ್ಯಾಸಕ್ಕನುಗುಣವಾಗಿ, ಕ್ರಮೇಣ ಸಂತಕೃಪೆ ಅಥವಾ ಗುರುಕೃಪೆ ಒಳಗಿಂದೊಳಗೇ ಪ್ರಕಾಶಿಸುತ್ತದೆ. ಸೂರ್ಯವಂಶದಲ್ಲಿ ಜನಿಸಿದ ಖಟ್ವಾಂಗ ರಾಜನ ಉದಾಹರಣೆ ಪುರಾಣದಲ್ಲಿ ಉಲ್ಲೇಖವಿದೆ. ದೇವ ದಾನವರ ಯುದ್ಧದಲ್ಲಿ ದೇವತೆಗಳ ಪಕ್ಷವಹಿಸಿ ಯುದ್ಧ ಮಾಡಿ ಅವರಿಗೆ ವಿಜಯ ಸಂಪಾದಿಸಿಕೊಟ್ಟು ತನ್ನ ಆಯುಷ್ಯ ಎಷ್ಟು ಉಳಿದಿದೆ ಎಂದು ದೇವತೆಗಳಿಗೆ ವಿಚಾರಿಸಲಾಗಿ, ಅವರು ಕೇವಲ ಘಟಕಾ ಅಂದರೆ ಒಂದೇ ತಾಸು ಉಳಿದಿದೆ ಎಂದು ಹೇಳಿದರು. ಅಷ್ಟರಲ್ಲಿ ಅವನು ಸರ್ವಸಂಗ ಪರಿತ್ಯಾಗ ಮಾಡಿ ಪರಮಾತ್ಮ ಧ್ಯಾನದಲ್ಲಿ ಲೀನನಾಗಿ ಅದೇ ಅವಸ್ಥೆಯಲ್ಲಿ ದೇಹ ತ್ಯಾಗ ಮಾಡಿ ತನನ್ನು ತಾನು ಉದ್ಧರಿಸಿಕೊಂಡನು. ಕೊನೆಗೆ ಏಕನಾಥ ಮಹಾರಾಜರು ಹೇಳುತ್ತಾರೆ. 'ಹೀಗೆ ಭಗವನ್ನಾಮಸ್ಮರಣೆಯನ್ನೇ ಮುಖ್ಯ ಸಾಧನವನ್ನಾಗಿಟ್ಟುಕೊಂಡು ಎಷ್ಟೋ ಜನರು ಉದ್ಧಾರವಾಗಿರುವುದರಿಂದ, ನೀವೂ ಸಹ

ಹರಿಜಪ ಸಾಧನೆ ಮಾಡಿ ಉದ್ಧಾರವಾಗಿರಿ'.

೨೦) ಕರಾರೇ ಬಾಪಾನೋ ಸಾಧನ ಹರೀಚೇ। ಝುಣೀ ಕರಣೀಚೇ ಕರೂ ನಕಾ ॥
ಜೇಣೆ ನಯೇ ಜನ್ಮ ಯಮಾಚೀ ಯಾತನಾ। ಐಸಿಯಾ ಸಾಧನಾ ಕರಾ ಕಾಹೀ ॥
ಸಾಧನಾಚೇ ಸಾರ ಮಂತ್ರ, ಬೀಜ ಹರಿ। ಆತ್ಮ ತತ್ವ ಧರೀ ತೋಚೀ ಏಕ ॥
ಕೋಟಿ ಕೋಟಿ ಯಜ್ಞ ನಿತ್ಯ ಜ್ಯಾಚಾ ನೇಮ। ಏಕ ಹರಿನಾಮ ಜಪತಾ ಘಡೇ ॥
ಏಕಾಜನಾರ್ದನೀ ನ ಘ್ಯಾವಾ ಸಂಶಯ। ನಿಶ್ಚಯೇಸೀ ಹೋಯ ಹರಿರೂಪ ॥

ಈ ಅಭಂಗದಲ್ಲಿ ಶ್ರೀ ಏಕನಾಥ ಮಹಾರಾಜರು ಸಂಸಾರ ಸಾಗರದಲ್ಲಿ ಮುಳಗಿದ ಜೀವಗಳಿಗೆ ಬಹಳೇ ಕಳಕಳಿಯಿಂದ ಪರಮಾತ್ಮ ಪ್ರಾಪ್ತಿ ಸಾಧನೆ ಮಾಡಲಿಕ್ಕೆ ಉಪದೇಶಿಸಿದ್ದಾರೆ. ಪರಮಾತ್ಮನು ನಿಮಗೆ ಶರೀರ, ಇಂದ್ರಿಯಗಳು, ಮನಸ್ಸು, ಬುದ್ಧಿ, ವಿಶೇಷ ಜ್ಞಾನ, ಇಷ್ಟೆಲ್ಲ ಕೊಟ್ಟರೂ ಹರಿ ಪ್ರಾಪ್ತಿಯ ಸಾಧನೆ ಮಾಡದೇ, ಧನ ಮಾನ ಹೆಂಡಿರು ಮಕ್ಕಳು ಗೋತ್ರಜರು ಎಂಬ ಮೋಹಪಾಶದಲ್ಲಿಯೇ ಆಯುಷ್ಯವನ್ನು ಮತ್ತು ಶಕ್ತಿಯನ್ನು ವ್ಯಯಿಸಿದ್ದಾದರೆ, ಮುಂದಿನ ಜನ್ಮಗಳಲ್ಲಿ ಬಹಳೇ ಕಷ್ಟ ಪಡಬೇಕಾಗುತ್ತದೆ. ಇದನ್ನೇ ಮಾವುಲಿಯವರು ಹೇಳಿದ್ದಾರೆ; 'ಹರಿ-ವೀಣ ಜನ್ಮ ನರಕಚೀ ಪೈ ಜಾಣಾ ಮತ್ತು ಲಟಿಕಾ ವ್ಯವಹಾರ ಸರ್ವ ಹಾ ಸಂಸಾರ ವಾಯಾ ಯೇರಝಾರ ಹರಿವೀಣ'. ತುಕಾರಾಮ ಮಹಾರಾಜರು ಹೇಳಿದ್ದು. — 'ಆಪುಲಾ ತೋ ಏಕ ದೇವ ಕರೂನೀ ಘ್ಯಾವಾ, ಏಣೇ-ವೀನ ಜೀವಾ ಸುಖ ನೋಹೆ, ಏರ ತೇ ಮಾಯೀಕ ದುಃಖಾಚೀ ಜನತೀ, ನಾಹೀ ಆದಿ ಅಂತೀ ಅವಸಾನ'. ಆದ್ದರಿಂದ ಯಾವ ಸಾಧನೆಯಿಂದ ಪುನರ್ಜನ್ಮವಿಲ್ಲ ಮತ್ತು ಯಮಯಾತನೆ ಇಲ್ಲ, ಅಂಥಾ ಸಾಧನೆಯನ್ನೇ ಮಾಡಿರಿ. ಶ್ರೀ ಹರಿ ಪ್ರಾಪ್ತಿಯ ಸಾಧನೆಯ ಸಾರ ವೆಂದರೆ ಮಂತ್ರ ಬೀಜಾಕ್ಷರ ಹರಿ ಹರಿ, ರಾಮ ರಾಮ. ಏಕ ಹರಿ ಆತ್ಮಾ ಜೀವ ಶಿವ ಸಮ, ವಾಯಾ ತೂ ದುರ್ಗಮೀ ನ ಘಾಲೀ ಮನ. ಜ್ಞಾಮ. ಹರಿನಾಮ ಜಪದಲ್ಲಿ ಕೋಟಿ ಕೋಟಿ ಯಜ್ಞ ಮಾಡುವದರಿಂದ ಸಿಗುವ ಪುಣ್ಯ ಫಲವೂ ಇರುತ್ತದೆಯಾದ್ದರಿಂದ, ಏನೂ ಸಂಶಯ ಪಟ್ಟುಕೊಳ್ಳದೇ ಪೂರ್ಣ ವಿಶ್ವಾಸದಿಂದ ಹರಿನಾಮ ಜಪಿಸಿ ಹರಿರೂಪಿಯಾಗಿರೆಂದು ಸಂತ ಏಕನಾಥ ಮಹಾರಾಜರು ಬೋಧಿಸುತ್ತಾರೆ.

೨೧) ಬಾರಾ ಸೋಳಾ ಜಣೀ ಹರಿಸೀ ನೇಣತೀ। ಮ್ಹಣೋನಿ ಫಿರತೀ ರಾತ್ರಂ ದಿವಸ ॥
ಸಹಸ್ರ ಮುಖಾಂಚಾ ವರ್ಣಿತಾ ಭಾಗಲಾ। ಹರ್ಷ ಜಯಾ ಝಾಲಾ ತೇಣೆ ಸುಖೇ ॥

ವೇದ ಜಾಣೂ ಗೇಲಾ ಪುಢೇ ಮೌನಾವಲಾ । ತೇ ಗುಹ್ಯ ತುಜಲಾ ಪ್ರಾಪ್ತ ಕೈಂಚೇ ॥
ಪೂರ್ವ ಸುಕೃತಾಚಾ ಪೂರ್ಣ ಅಭ್ಯಾಸಾಚಾ । ದಾಸ ಸದ್ಗುರುಚಾ ತೋಚಿ ಜಾಣೇ ॥
ಜಾಣತೇ ನೇಣತೆ ಹರೀಚಿ ಶಿಕಾಣೇ । ಏಕಾ ಜನಾರ್ದನಿ ಹರಿ ಬೋಲಾ ॥

ಸೂರ್ಯನಿಗೆ ಹನ್ನೆರಡು ಕಲೆಗಳು (ದ್ವಾದಶ ಆದಿತ್ಯ), ಚಂದ್ರನಿಗೆ ಹದಿನಾರು ಕಲೆಗಳು. ಹೀಗೆ ಹನ್ನೆರಡು ಹದಿನಾರು ಕಲೆಗಳುಳ್ಳ ಸೂರ್ಯ-ಚಂದ್ರರು ಜಗತ್ತನ್ನು ರಾತ್ರಂ ದಿವಸ ತಿರುಗುತ್ತಾ ಜಗತ್ತನ್ನು ಬೆಳಗಿ, ಆ ಜಗತ್ತನ್ನು ತಿಳಿದುಕೊಂಡಿದ್ದಾರೆ. ಆದರೆ ಶ್ರೀಹರಿಯನ್ನು ತಿಳಿದುಕೊಂಡಿಲ್ಲ. ಶ್ರೀ ಹರಿಯೇ ಸೂರ್ಯ ಚಂದ್ರರನ್ನು ಬೆಳಗುತ್ತಾನೆ. ಯಾವನ ಹೆಡೆಯ ಮೇಲೆ ಎಲ್ಲ ಭೂಮಿ ಭಾರವು ಇದೆಯೋ, ಮತ್ತು ಯಾವನಿಗೆ ಶ್ರೀ ವಿಷ್ಣುವಿನ ಸೇವೆಯ ಸೌಭಾಗ್ಯವಿದೆಯೋ, ಆ ಆದಿಶೇಷನು ಕೂಡಾ ಶ್ರೀಹರಿ ಗುಣಗಾನ ಮಾಡಲು, ಅವನ ಸಾವಿರ ಮುಖಗಳು ಸಾಕಾಗಲಿಲ್ಲ. ಪರಮಾತ್ಮನ ಶ್ವಾಸದಿಂದ ಹುಟ್ಟಿ ಸರ್ವಜ್ಞರೆನಿಸಿಕೊಳ್ಳುವ ವೇದಗಳು ಸಹಿತ ಶ್ರೀ ಹರಿಯ ವರ್ಣನೆಯನ್ನು ಸಂಪೂರ್ಣ ಮಾಡಲಿಕ್ಕಾಗದೆ ಮೌನವಾದವು. ಅಂದಮೇಲೆ ಅಂಥ ಪರಮಾತ್ಮನ ರಹಸ್ಯ, ಸಾಮಾನ್ಯ ಪಾಮರರಿಗೆ ಹೇಗೆ ತಿಳಿಯುವುದು? ಹಿಂದಿನ ಎಷ್ಟೋ ಜನ್ಮಗಳಲ್ಲಿ ಶುದ್ಧ ಪುಣ್ಯವನ್ನು ಗಳಿಸಿಟ್ಟುಕೊಂಡು, ಪೂರ್ಣ ಅಭ್ಯಾಸ ಮಾಡಿ, ಸದ್ಗುರುವಿನ ದಾಸನಾದವನಿಗೆ ಮಾತ್ರ ಶ್ರೀ ಹರಿಯನ್ನು ತಿಳಿದುಕೊಳ್ಳುವ ಯೋಗ್ಯತೆಯಿದೆ. ಆದ್ದರಿಂದ ಏನೂ ಪುಣ್ಯವಿಲ್ಲದವರು ಸ್ವಲ್ಪ ಸ್ವಲ್ಪ ಪುಣ್ಯ ಗಳಿಸಲಿಕ್ಕೆ, ಏನೂ ತಿಳಿಯದವರು ಅಲ್ಪ ಸ್ವಲ್ಪ ತಿಳಿದುಕೊಳ್ಳಲಿಕ್ಕೆ ಮತ್ತು ಅಲ್ಪ ತಿಳಿದವರು ಇನ್ನೂ ಹೆಚ್ಚು ತಿಳಿದುಕೊಳ್ಳಲಿಕ್ಕೆ ಹರಿ ಹರಿ ನಾಮಸ್ಮರಣೆ ರೂಢಿಸಿಕೊಳ್ಳಬೇಕೆಂದು ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.

೨೨) ಪಿಂಡೀ ದೇಹಸ್ಥಿತಿ ಬ್ರಹ್ಮಾಂಡೀ ಪಸಾರಾ । ಹರಿವೀಣ ಸಾರಾ ವ್ಯರ್ಥ ಭ್ರಮ ॥
ಶುಕ, ಯಾಜ್ಞವಲ್ಕ್ಯ, ದತ್ತ ಕಪಿಲಮುನಿ । ಹರಿಸೀ ಜಾಣೋನಿ ಹರೀಚ ಝಾಲೇ ॥
ಯಾರೇ ಯಾರೇ ಧರೂ ಹರಿನಾಮ ತಾರೂ । ಭವಾಚಾ ಸಾಗರೂ ಭಯ ನಾಹೀಂ ॥
ಸಾಧುಸಂತ ಗೇಲೇ ಆನಂದೀ ರಾಹಿಲೇ । ಹರಿನಾಮೇ ಝಾಲೇ ಕೃತ ಕೃತ್ಯ ॥
ಏಕಾಜನಾರ್ದನಿ ಮಾಂಡಿಲೇ ದುಕಾನ । ದೇತೋ ಮೋಲಾವೀಣ ಸರ್ವ ವಸ್ತು ॥

'ಪಿಂಡ'ವೆಂದರೆ ಶರೀರ, ಇದೇ ದೇಹಸ್ಥಿತಿ. ಬ್ರಹ್ಮಾಂಡವೆಂದರೆ ಜಗತ್ತು. ಪಿಂಡಾಂಡವು ಬ್ರಹ್ಮಾಂಡದ ಒಂದು ಚಿಕ್ಕ ಪ್ರತೀಕ. ಬ್ರಹ್ಮಾಂಡದಲ್ಲಿದ್ದದ್ದೆಲ್ಲಾ ಪಿಂಡಾಂಡದಲ್ಲಿ ಸಣ್ಣ

ಪ್ರಮಾಣದಲ್ಲಿ ಇದ್ದೇ ಇರುತ್ತದೆ. ಪಿಂಡಾಂಡದಲ್ಲಿದ್ದ ಜೀವನು ಶರೀರವೇ ತಾನೆಂಬ ದೇಹಭಾವದವನಾಗಿದ್ದು, ಜಗತ್ತಿನಲ್ಲಿಯ ವಸ್ತುಗಳನ್ನು ದೊರಕಿಸಿ, ಅವುಗಳಲ್ಲಿಯೇ ಸುಖ ಪಡುವ ಭ್ರಮೆಯಿಂದ, ಶ್ರೀ ಹರಿಯನ್ನು ಧ್ಯಾನಿಸದೇ, ತನ್ನ ಆಯುಷ್ಯವನ್ನು ಹಾಳು ಮಾಡಿಕೊಳ್ಳುತ್ತಾನೆ. ಋಷಿಮುನಿಗಳಾದ ಶುಕ, ಯಾಜ್ಞವಲ್ಕ್ಯ, ದತ್ತ, ಕಪಿಲಮುನಿ ಇವರೆಲ್ಲಾ ಶ್ರೀ ಹರಿಯನ್ನು ತಿಳಿದುಕೊಂಡು ಶ್ರೀ ಹರಿಯ ರೂಪವೇ ಆದರು. ಭವಸಾಗರ ಭಯದಿಂದ ಪಾರಾಗಲು, ಹರಿನಾಮವೆಂಬ ಹಡಗವನ್ನು ಆಶ್ರಯಿಸೋಣ, ಎಲ್ಲರೂ ಬನ್ನಿ ಬನ್ನಿ ಎಂದು ನಾಥ ಮಹಾರಾಜರು ಕರೆಯುತ್ತಾರೆ. ಅಸಂಖ್ಯ ಸಾಧುಸಂತರು ಹರಿನಾಮ ಜಪ ಸಾಧನದಿಂದ ಸಚ್ಚಿದಾನಂದ ಸ್ವರೂಪಿಗಳಾದರು. ಭಕ್ತಿ ಜ್ಞಾನ ನಾಮಜಪ ಇವೆಲ್ಲ ಸಾಮಾನುಗಳಿದ್ದ ಅಂಗಡಿಯನ್ನು ಸ್ಥಾಪಿಸಿದ್ದು, ಪುಕ್ಕಟೆಯಾಗಿ ಅವರವರಿಗೆ ಅರ್ಹತೆಗನುಗುಣವಾಗಿ ವಸ್ತುಗಳನ್ನು ಕೊಡುತ್ತೇನೆಂದು ಶ್ರೀ ಸಂತ ಏಕನಾಥ ಮಹಾರಾಜರು ಹೇಳುತ್ತಾರೆ.

೨೩) ಆವಡೀನೆ ಭಾವೇ ಹರಿನಾಮ ಘೇಸಿ । ತುಝಿ ಚಿಂತಾ ತ್ಯಾಸಿ ಸರ್ವ ಆಹೇ ॥
ನಕೋ ಖೇದ ಕರೂ ಕೋಣತ್ಯಾ ಗೋಷ್ಟಿಚಾ । ಪತಿ ತೋ ಲಕ್ಷ್ಮೀಚಾ ಜಾಣತಸೇ ॥
ಸಕಳ ಜೀವಾಂಚಾ ಕರೀ ತೋ ಸಾಂಭಾಳ । ತುಜ ಮೋಕಲೀಲ ಐಸೇ ನಾಹೀ ॥
ಜೈಸೀ ಸ್ಥಿತಿ ಆಹೇ ತೈಶಾಪರೀ ರಾಹೇ । ಕೌತುಕ ತೂ ಪಾಹೇ ಸಂಚಿತಾಚೆ ॥
ಏಕಾ ಜನಾರ್ದನೀ ಭೋಗ ಪ್ರಾರಬ್ಧಾಚಾ । ಹರಿ ಕೃಪೇ ತ್ಯಾಚಾ ನಾಶ ಝಾಲಾ ॥

ಪ್ರೇಮ ಮುದಿತ ಭಾವದಿಂದ ಹರಿನಾಮ ಉಚ್ಚಾರ ಮಾಡಿದರೆ, ನಿನ್ನ ಎಲ್ಲ ಚಿಂತೆಗಳನ್ನು ಪರಮಾತ್ಮನು ನಿವಾರಿಸುತ್ತಾನೆ. ಆದ್ದರಿಂದ ಯಾವುದೇ ವಿಷಯದ ಬಗ್ಗೆ ದುಃಖ ಪಡಬೇಡ. ಯಾಕೆಂದರೆ ಲಕ್ಷ್ಮೀಪತಿ ಮಾಧವನು ಎಲ್ಲ ಆಗು-ಹೋಗುಗಳನ್ನು ಅಂತರ್ಯಾಮಿಯಾಗಿ ತಿಳಿದವನಾಗಿರುತ್ತಾನೆ. ಜಗತ್ತಿನ ಎಲ್ಲ ಜೀವಿಗಳ ಪೋಷಣೆಯ ಚಿಂತೆಯು ಅವನಿಗೆ ಇರುತ್ತದೆ. ಆದ್ದರಿಂದ ನಿನ್ನನ್ನು ಮಾತ್ರ ಪೋಷಣೆ ಮಾಡುವದಿಲ್ಲವೆಂಬ ಶಂಕೆಯನ್ನು ಬಿಟ್ಟುಬಿಡು. ಪರಮಾತ್ಮನು ನಿನ್ನನ್ನು ಯಾವ ಸ್ಥಿತಿಯಲ್ಲಿಟ್ಟಿರುತ್ತಾನೋ, ಅದೇ ಸ್ಥಿತಿಯಲ್ಲಿ ಸಮಾಧಾನದಿಂದಿರು. ನಿನ್ನ ಹಿಂದಿನ ಜನ್ಮಗಳಲ್ಲಿ ಗಳಿಸಿಕೊಂಡ ಪಾಪ ಪುಣ್ಯಗಳ ಕರ್ಮ ಫಲಗಳನ್ನು, ಈ ಜನ್ಮದಲ್ಲಿ ಉಣ್ಣುತ್ತಿದ್ದೇನೆಂಬ ಕೌತುಕವನ್ನು ನೀನೇ ವಿಚಾರ ಮಾಡಿ ತಿಳಿದುಕೋ. ಸಂತ ಏಕನಾಥ ಮಹಾರಾಜರು ಹೇಳುತ್ತಾರೆ:– ಪ್ರತಿಯೊಬ್ಬ ಮನುಷ್ಯನಿಗೆ ಪ್ರಾರಬ್ಧ ಭೋಗ ಅಂದರೆ ಹಿಂದಿನ ಜನ್ಮಗಳಲ್ಲಿಯ ಪಾಪ ಪುಣ್ಯಗಳ ಒಂದು ಭಾಗವನ್ನು

ಈ ಜನ್ಮದಲ್ಲಿ ಅನುಭವಿಸಲೇಬೇಕಾದ ಕರ್ಮಫಲ. ಇದು ಯಾರಿಗೂ ತಪ್ಪಿದ್ದಲ್ಲ.. ಆದ್ದರಿಂದ ಹರಿನಾಮ ಜಪ ಹರಿ ಭಕ್ತಿ ಮಾಡಿ ಹರಿಕೃಪೆ ಸಂಪಾದಿಸಿದರೆ, ಎಲ್ಲ ಕರ್ಮಗಳು ನಾಶವಾಗುತ್ತವೆ. ಸಾಮಾನ್ಯ ನೇಮದ ಪ್ರಕಾರ ಪ್ರಾರಬ್ಧವನ್ನು ಭೋಗಿಸಲೇಬೇಕಾಗುತ್ತದೆ. ಇದು ಸಾಮಾನ್ಯ ಜೀವಿಗೆ ಅಂದರೆ ಹರಿಕೃಪೆ ಪ್ರಾಪ್ತವಾಗದ ಜೀವಿಗೆ ಸಂಬಂಧಿಸಿರುತ್ತದೆ. ಹರಿಕೃಪೆ ಪ್ರಾಪ್ತಮಾಡಿಕೊಂಡ ಜೀವಿಗೆ ಇದು ಅನ್ವಯವಾಗುವದಿಲ್ಲ. ಉದಾ :- ಅಜಾಮೇಳನ ಪ್ರಾರಬ್ಧದಲ್ಲಿ ನರಕ ಭೋಗ ಇದ್ದದ್ದನ್ನು ಸರ್ವೇಶ್ವರ ಶ್ರೀ ಹರಿಯು ಬದಲಿಸಿ ವೈಕುಂಠವಾಸಿಯನ್ನಾಗಿ ಮಾಡಿದನು. ಇದರಂತೆಯೇ ಪ್ರಾರಬ್ಧ ಪ್ರಕಾರ ಕಡುಬಡವನಾಗಿ ಜೀವಿಸಬೇಕಾದ ಸುದಾಮನಿಗೆ ಶ್ರೀ ಹರಿಯು ಸುವರ್ಣ ನಗರಿಯನ್ನು ಕೊಟ್ಟನು. ಹಾಗೇ ಧ್ರುವನಿಗೆ ಧ್ರುವ ನಕ್ಷತ್ರದ ಅಢಳ ಪದವನ್ನು ಕೊಟ್ಟನು.

೨೪) ದುರ್ಬಳಾಚೀ ಕನ್ಯಾ ಸಮರ್ಥಾನೇ ಕೇಲೀ । ಅವದಶಾ ನಿಮಾಲೀ ದರಿದ್ರಾಚೀ ॥
ಹರಿ ಕೃಪಾ ಹೋತಾ ಭಕ್ತಾ ನಿಘತೀ ದೋಂದೆ । ನಾಚತೀ ಸ್ವಾನಂದೇ ಹರಿ ರಂಗೀ ॥
ದೇವ ಭಕ್ತ ದೊನ್ಹೀ ಏಕರೂಪ ಝಾಲೇ । ಮುಳೀಂಚ ಸಂಚಲೇ ಜೈಸೆ ತೈಸೇ ॥
ಪಾಜಳಲೀ ಜ್ಯೋತಿ ಕಾಪುರಾಚೀ ವಾತೀ । ಓವಾಳಿತಾ ಆರತೀ ಭೇದ ನುರೇ ॥
ಏಕಾಜನಾರ್ದನೀ ಕಲ್ಪೇಂಚಿ ಮುರಾಲಾ । ತೋಚಿ ಹರಿ ಝಾಲಾ ಬ್ರಹ್ಮರೂಪ ॥

ಒಬ್ಬ ಕಡು ಬಡವನ ಸುಶೀಲ ಮತ್ತು ಸುಂದರ ಕುಮಾರಿಯನ್ನು ರಾಜನು ಅಂಗೀಕರಿಸಿ, ಪಟ್ಟದ ರಾಣಿಯನ್ನಾಗಿ ಮಾಡಿಕೊಂಡರೆ, ಆ ಬಡವನ ದರಿದ್ರತನ ಮತ್ತು ದುಃಖ-ದುಮ್ಮಾನಗಳು ದೂರವಾಗುವವು. ಅದರಂತೆಯೇ ರಾಗದ್ವೇಷ, ಅಹಂಕಾರ, ಸುಖ-ದುಃಖ, ಕಾಮ ಕ್ರೋಧ ವಿಕಾರ, ಶರೀರ ಪೀಡೆ, ಈ ಎಲ್ಲ ದ್ವಂದ್ವಗಳಿಂದ ವಿಕಾರಯುಕ್ತನಾದ ದರಿದ್ರ ಜೀವಿಗೆ, ನಿಷ್ಕಾಮ ಭಕ್ತಿ ಮತ್ತು ನಾಮ ಜಪಗಳ ಬಲದಿಂದ ಹರಿಕೃಪೆಯಾದರೆ, ಅಂತರ್ಬಾಹ್ಯ ಸರ್ವ ಸುಖ ಭರಿತನಾಗುತ್ತಾನೆ. ಅವನು ಆತ್ಮಾನಂದದಿಂದ ಸದಾ ಕುಣಿದಾಡುತ್ತಾನೆ. ಇದನ್ನೇ ತುಕಾರಾಮ ಮಹಾರಾಜರು ಹೇಳುತ್ತಾರೆ:- ''ಕೀರ್ತನ ಚಾಂಗ ಕೀರ್ತನ ಚಾಂಗ, ಹೋಯ ಅಂಗ ಹರಿರೂಪ. ಪ್ರೇಮೇ ಛಂದೇ ನಾಚೇ ಡೋಲೇ ಹರಪಲಾ ದೇಹಭಾವ. ತುಕಾಮ್ಹಣೇ ಉರಲಾ ದೇವ, ಗೇಲಾ ಭೇವ ತ್ಯಾ ಕಾಳೇ''. ಧನ್ಯ ಜಗೀ ತೋಚೇ ಏಕ ಹರಿ ರಂಗೀ ನಾಚೇ, ರಾಮಕೃಷ್ಣ ವಾಸುದೇವ ಸದಾ ಸ್ಮರೇ ವಾಚೇ'' — ಏ.ಮ. ಹರಿಕೃಪೆಯಿಂದ ಭಕ್ತರಿಗೆ ಆಗುವ ಸುಖ-ಸ್ವರೂಪ ವರ್ಣನೆಯನ್ನು ಸ್ವತಃ ಶ್ರೀ

ಕೃಷ್ಣ ಪರಮಾತ್ಮನು ಭಾಗವತದಲ್ಲಿ ಹೀಗೆ ಹೇಳಿದ್ದಾನೆ. ''ಭಕ್ತ ಭೋಗಿತಾ ಮಾಝೀ ಸುಖ, ವಿಸರಲೇ ದೇಹಾದಿ ಜನ್ಮ ದುಃಖ, ವಿಸರಲೇ ತೇ ತಹಾನ ಭೂಕ, ನಿಜಾತ್ಮ ಸುಖ ಕೋಂದಲೇ. ಐಸಿಯಾ ನಿಜ ಸುಖಾಚಿ ಗೋಡಿ, ವಿಷಯೀ ಕಾಯ ಜಾಣತೀ ಬಾಪುಡೀ, ವೇಚಿತಾ ಲಕ್ಷಾಲಕ್ಷ ಕೋಡಿ ತ್ಯಾ ಸುಖಾಚೀ ಕವಡೀ ಲಾಭೇನಾ''; ಮತ್ತು ''ಧನಧಾನ್ಯ, ಪುತ್ರ-ಸ್ವಜನ, ಸರ್ವಸ್ವ ವೇಚಿತಾಹೀ ಜಾಣ, ತ್ಯಾ ಸುಖಾಚಾ ರಜಃಕಣ, ವಿಷಯೀ ಜನ ನ ಲಭತೀ. ಮಜ ನಿಜಾತ್ಮಯಾಚೇ ಸುಖಪ್ರಾಪ್ತಿ, ಸಕಳ ಇಂದ್ರಿಯೇ ಸುಖರೂಪ ಹೋತೀ, ತ್ಯಾ ಸುಖಾಚೀ ಸುಖಸ್ಥಿತಿ, ಲೋಕಾಂತರ ಪ್ರಾಪ್ತಿ ಕೋಟ್ಯಾಂಶೇ ನ ತುಕೇ. ನಿಷ್ಕಾಮ ನಿರ್ಲೋಭ ನಿರ್ದಂಭ ಭಜನ, ನಿರ್ಮತ್ಸರ ನಿರಭಿಮಾನ, ಐಸಿಯಾ ಮದ್ಭಕ್ತಾಂಸೀ ಜಾಣ, ಮಾಝೀ ಸುಖ ಸಂಪೂರ್ಣ ಮೀ ದೇತೋ''.

ಇದರ ಸಾರಾಂಶ ಹೀಗಿದೆ:- ಭಗವತ್ ಕೃಪೆಯಾದ ಭಕ್ತನು ದೇಹದ ಎಲ್ಲ ದುಃಖಗಳನ್ನು, ಹಸಿವೆ ನೀರಡಿಕೆಗಳನ್ನು ಸಹಿತ ಮರೆತು ನಿಜಾನಂದ ಲಹರಿಯಲ್ಲಿ ತೇಲಾಡುತ್ತಾನೆ. ಎಲ್ಲ ಇಂದ್ರಿಯ ಸುಖಗಳನ್ನು ಅಂದರೆ ಮೃಷ್ಟಾನ್ನ ಭೋಜನ, ಸ್ತ್ರೀಭೋಗ, ಅಧಿಕಾರ ಭೋಗ, ಜನಪ್ರಿಯತೆ, ಇಂಥ ಎಲ್ಲ ಕೊಟ್ಯಾನುಕೊಟಿ ಸುಖಗಳನ್ನು ಒಟ್ಟುಗೂಡಿಸಿದರೂ, ನಿಜ ಭಕ್ತನು ಭೋಗಿಸುವ ಆತ್ಮ ಸುಖದ ಒಂದು ಕವಡಿಯ ಸಮಾ ಆಗುವದಿಲ್ಲವೆಂದು ಶ್ರೀಕೃಷ್ಣ ಪರಮಾತ್ಮನು, ಉದ್ಧವನ ನಿಮಿತ್ತ ಮಾಡಿಕೊಂಡು ನಮ್ಮೆಲ್ಲರಿಗ ಉಪದೇಶಿಸಿದ್ದಾರೆ. ಹೀಗೆ ಭಗವತ್ ಕೃಪೆಯಿಂದ ಜೀವತ್ವ ಎಂಬ ಭ್ರಮೆ ಇಲ್ಲದಾಗಿ ದೇವ ಸ್ವರೂಪ ಒಂದೇ ಉಳಿಯುತ್ತದೆ. ಇದನ್ನೇ ಶಂಕರಾಚಾರ್ಯರು ಹೇಳಿದ್ದಾರೆ. ಜೀವ ಬ್ರಹ್ಮ ಏವ ನಾ ಪರಃ. ನಾಸೇ ಜೀವಪಣ ಭವರೋಗ. — ತು.ಮ.

ಭಗವದನನುಗ್ರಹವನ್ನು ಒಂದು ಜ್ಯೋತಿಗೆ ಹೋಲಿಕೆ ಕೊಟ್ಟು, ಅದನ್ನು ಶುದ್ಧ ಕರ್ಪೂರಕ್ಕೆ ಸ್ಪರ್ಶಿಸಿದರೆ ಕರ್ಪೂರವೆಲ್ಲವು ಅಗ್ನಿ ಸ್ವರೂಪವೇ ಆಗುವದು. ಅದು ಕರ್ಪೂರವಾಗಿ ಉಳಿಯುವದಿಲ್ಲ. ಹಾಗೆಯೇ ಅವನು ಭಕ್ತನಾಗಿ ಉಳಿಯದೇ ಭಗವತ್ ಸ್ವರೂಪನಾಗಿ ಭಗವಂತನ ಸೇವೆಯನ್ನೇ ಮಾಡುತ್ತಾನೆಂದು ಏಕನಾಥ ಮಹಾರಾಜರು ಹೇಳುತ್ತಾರೆ. ಭಗವತ್ ಕೃಪೆಯಿಂದ ಕಲ್ಪನೆಯೆಂಬ ಭ್ರಮೆಯು ಇಲ್ಲದಂತಾಗಿ, ಬ್ರಹ್ಮರೂಪ ಮಾತ್ರ ಉಳಿಯುತ್ತದೆಂದು ಏಕನಾಥ ಮಹಾರಾಜರು ಹೇಳುತ್ತಾರೆ. ಉದಾ :- ಕಲ್ಪನೆಯೆಂಬ ಬಿರುಗಾಳಿಯಿಂದ ಸಮುದ್ರವು ದೊಡ್ಡ ತೆರೆಗಳ ಸಮೂಹವಾಗಿ ಕಾಣಿಸಿಕೊಳ್ಳುತ್ತದೆ. ಮತ್ತು

ಗಾಳಿನಿಂತ ಕೂಡಲೇ ಅದು ಕೇವಲ ನೀರಿನ ಸಮೂಹವಾಗಿ ಕಾಣಿಸುತ್ತದೆ.

೨೫) ಮುದ್ರಾ ತೀ ಪಾಂಚವೀ ಲಾವೂನಿಯಾ ಲಕ್ಷ। ತೋ ಆತ್ಮಾ ಪ್ರತ್ಯಕ್ಷ ಹರೀದಿಸೇ ॥
ಕಾನೀ ಜೇ ಪೇರಿಲೇ ಡೋಳಾ ತೇ ಉಗವಲೇ । ವ್ಯಾಪಕ ಭರಿಲೇ ತೋಚಿ ಹರೀ ॥
ಕರ್ಮ ಉಪಾಸನಾ ಜ್ಞಾನ ಮಾರ್ಗೀ ಝಾಲೇ । ಹರಿಪಾಠೀ ಆಲೇ ಸರ್ವ ಮಾರ್ಗ ॥
ನಿತ್ಯ ಪ್ರೇಮಭಾವೇ ಹರಿಪಾಠ ಗಾಯ । ಹರಿ ಕೃಪಾ ಹೋಯ ತಯಾವರಿ ॥
ಝಾಲಾ ಹರಿಪಾಠ ಬೋಲಣೇ ಏಥುನೀ । ಏಕಾ ಜನಾರ್ದನಿ ಹರಿಬೋಲಾ ॥

ಯಮ ನಿಯಮ ಅಂದರೆ ಮನಸ್ಸು ಇಂದ್ರಿಯಗಳ ನಿಯಂತ್ರಣ. ಪ್ರಾಣಯಾಮ ಅಂದರೆ ಶ್ವಾಸ ಉಚ್ವಾಸದ ನಿಯಂತ್ರಣ. ಆಸನ ಅಂದರೆ ಕೂಡ್ರುವ ಬಂಗಿ, ಪ್ರತ್ಯಾಹಾರ ಅಂದರೆ ಬಾಹ್ಯ ವಿಷಯಗಳ ಪ್ರಭಾವಕ್ಕೊಳಗಾದ ಮನಸ್ಸನ್ನು ಒಳಕ್ಕೆ ಎಳೆದುಕೊಳ್ಳುವದು. ಧ್ಯಾನವೆಂದರೆ ನಿಶ್ಚಲವಾದ ಹಾಗೂ ವೃತ್ತಿ ರಹಿತ ಚಿತ್ತ ವಿಷಯರಹಿತ ಮನಸ್ಸು. ಧಾರಣಾ ಇದು ಧ್ಯಾನದ ಗುಣಮಟ್ಟವನ್ನು ಸುಧಾರಿಸುತ್ತಾ, ಧ್ಯಾನದ ಅವಧಿಯನ್ನು ಹೆಚ್ಚಿಸುತ್ತಾ ಸಮಾಧಿವರೆಗೆ ಬೆಳೆಸುವುದು.

ಐದನೇ ಮುದ್ರೆಯೇ ಅಲಕ್ಷ್ಯ ಮುದ್ರೆ. ಇದನ್ನೇ ಜ್ಞಾನೇಶ್ವರ ಮಹಾರಾಜರು ಹೀಗೆ ಹೇಳಿದ್ದಾರೆ:- ಅಲಕ್ಷ್ಯ ಲಕ್ಷೀ ಮೀ ಲಕ್ಷೀ, ತೇಥೆ ದಿಸತೀ ಧೋನ್ಹೀ ಪಕ್ಷಿ, ವೇದಶಾಸ್ತ್ರ ಹೇಚಿ ಸಾಕ್ಷಿ, ಚಂದ್ರ ಸೂರ್ಯಾ ಸಹಿತ; ಹೀಗೆ ಐದನೇ ಮುದ್ರಾ ಅಲಕ್ಷ್ಯ ಮುದ್ರಾದಿಂದ ಎರಡೂ ಭ್ರೂಮಧ್ಯದಲ್ಲಿ ದೃಷ್ಟಿಯನ್ನು ಮೇಲಕ್ಕೆತ್ತರಿಸಿ ಕೇಂದ್ರೀಕರಿಸಬೇಕು. ಮನಸ್ಸು ಹಾಗೂ ಪ್ರಾಣವನ್ನು ಹುಬ್ಬುಗಳ ಮಧ್ಯದಲ್ಲಿ ಲಯಗೊಳಿಸಿದರೆ, ಆತ್ಮ ಸ್ವರೂಪನಾದ ಶ್ರೀ ಹರಿಯು ಪ್ರತ್ಯಕ್ಷ ಅನುಭವಕ್ಕೆ ಬರುತ್ತಾನೆ. ಹೀಗೆ ಅಭಂಗದ ಒಂದನೆಯ ಪದದಲ್ಲಿ ಯೋಗ ಮಾರ್ಗದಿಂದ ಪರಮಾತ್ಮ ಪ್ರಾಪ್ತಿಯ ಸಾಧನೆಯನ್ನು ವರ್ಣಿಸುತ್ತಾರೆ. ಈ ಅಭಂಗದ ಎರಡನೆಯ ಪದದಲ್ಲಿ ಜ್ಞಾನ ಮಾರ್ಗದ ಸಾಧನೆಯನ್ನು ವಿವರಿಸಿದೆ. ಇದರಲ್ಲಿ ಶಮ, ದಮ, ಉಪರತೀ ತಿತಿಕ್ಷಾ ಶ್ರದ್ಧಾ, ಸಮಾಧಾನ, ವಿವೇಕ, ವೈರಾಗ್ಯ, ಸಾಧನ ಚತುಷ್ಟಯ ಸಂಪತ್ತೀ, ಮುಮುಕ್ಷತ್ವ ಇವೆಲ್ಲವನ್ನು ತಿಳಿದುಕೊಂಡು ಸಾಧನೆ ಮಾಡಿ ಹೃದಯದಲ್ಲಿ ಅಡಗಿಸಿಕೊಂಡ ಸಾಧಕನಿಗೆ ಸದ್ಗುರುವು ತಾನಾಗಿಯೇ ಭೆಟ್ಟಿಯಾಗಿ 'ತತ್ವಮಸಿ' 'ಅಹಂಬ್ರಹ್ಮಾಸ್ಮಿ' 'ಅಯಮಾತ್ಮಾಬ್ರಹ್ಮಂ', 'ಪ್ರಜ್ಞಾನಂಬ್ರಹ್ಮಂ', ಈ ನಾಲ್ಕು ಮಹಾ ವಾಕ್ಯಗಳಲ್ಲಿ ಒಂದನ್ನು ಮಾತ್ರ ಕಿವಿಯಲ್ಲಿ ಉಪದೇಶಿಸುತ್ತಾನೆ. ಇದಕ್ಕೇ ಕಾನೀ ಜೇ ಪೇರಿಲೇ ಅನ್ನುತ್ತಾರೆ. ಅಂದರೆ

ಕಿವಿಯಲ್ಲಿ ಮಹಾವಾಕ್ಯ ಬೀಜಾಕ್ಷರ ಬಿತ್ತುವದು. ಡೋಳಾ ತೇ ಉಗವಲೇ ಅಂದರೆ ತಾನೇ ಪರಮಾತ್ಮ ಸ್ವರೂಪನೆಂಬ ಜ್ಞಾನೋದಯವಾಗುವದು. ಎಲ್ಲ ಬ್ರಹ್ಮಾಂಡಗಳನ್ನು ವ್ಯಾಪಿಸಿದ ಹರಿಸ್ವರೂಪವೇ ತಾನು ಎಂಬ ಅನುಭವವಾಗುವದು. ಇನ್ನು ಮೂರನೇ ಪದದಲ್ಲಿ ಅವರವರ ಅರ್ಹತೆ, ಪರಿಪಕ್ವತೆಗೆ ಅಂದರೆ ಚಿತ್ತಶುದ್ಧಿ ಅಧಿಕಾರಕ್ಕೆ ಅನುಗುಣವಾಗಿ ಕರ್ಮ ಮಾರ್ಗ, ಉಪಾಸನಾ ಮಾರ್ಗ, ಜ್ಞಾನ ಮಾರ್ಗ ಇವುಗಳನ್ನು ಶಾಸ್ತ್ರದಲ್ಲಿ ವಿವರಿಸಿದೆ. ವಿವೇಕ, ವೈರಾಗ್ಯವಿಲ್ಲದವರಿಗೆ ಕರ್ಮಮಾರ್ಗ ಉಪಯುಕ್ತವಾಗುತ್ತದೆ. ಎಷ್ಟೋ ಜನ್ಮಗಳಲ್ಲಿ ಸಾಧನೆ ಮಾಡಿ ಪವಿತ್ರರಾಗಿ ವಿವೇಕ ವೈರಾಗ್ಯ ಸಂಪನ್ನರಾದವರಿಗೆ ಜ್ಞಾನ ಮಾರ್ಗ ಉಪಯುಕ್ತ. ಇವೆರಡರ ಮಧ್ಯದಲ್ಲಿ ಇದ್ದವರಿಗೆ, ಅಂದರೆ ಸಂಪೂರ್ಣ ವಿವೇಕ ವೈರಾಗ್ಯವೂ ಇಲ್ಲಾ ಹಾಗೂ ಸಂಪೂರ್ಣ ವಿಷಯಾಸಕ್ತಿಯೂ ಇಲ್ಲಾ; ಇಂಥವರಿಗೆ ಭಕ್ತಿ ಮಾರ್ಗ ಉಪಯುಕ್ತವೆಂದು ಏಕನಾಥ ಮಹಾರಾಜರು ಹೇಳುತ್ತಾರೆ. ಹರಿಪಾಠದಲ್ಲಿ ಕರ್ಮ ಉಪಾಸನಾ (ಭಕ್ತಿ) ಜ್ಞಾನ ಈ ಮೂರೂ ಮಾರ್ಗಗಳು ಸಮಾವೇಶವಾಗಿರುತ್ತವೆ. ನಾಲ್ಕನೇ ಪದದಲ್ಲಿ ಹೇಳುತ್ತಾರೆ. ದಿನಾಲು ಪ್ರೇಮಭಾವದಿಂದ ಹರಿಗುಣಗಾನ ಮಾಡುವದರಿಂದ ಹರಿಕೃಪೆಯು ಸಹಜ ಲಭಿಸುತ್ತದೆ. ಆದ್ದರಿಂದಲೇ ''ಧನ್ಯ ಧನ್ಯ ವೈಷ್ಣವ ಮಂದಿರ, ಜೇಥೇ ನಾಮ ಘೋಷ ಹೋಯ ನಿರಂತರ''. ಹೀಗೆ ಹೇಳಿದ್ದಾರೆ. ''ಜ್ಯಾ ಸುಖಾ ಕಾರಣೇ ದೇವ ವೇಡಾವಲಾ, ವೈಕುಂಠ ಸಾಂಡೋನಿ ಸಂತ ಸದನೀ ರಾಹಿಲಾ— ಏ.ಮ. ಐದನೆಯ ಪದದಲ್ಲಿ ಏಕನಾಥ ಮಹಾರಾಜರು ಹೀಗೆ ಹೇಳುತ್ತಾರೆ. ಈ ಇಪ್ಪತ್ತೈದು ಅಭಂಗಗಳಲ್ಲಿ ಹರಿಪಾಠ ಮಹಾತ್ಮೆಯನ್ನು ಉಪಪತ್ತಿ ಸಿದ್ಧಾಂತ ಉಪದೇಶಪರ ಅಕ್ಷರಗಳಲ್ಲಿ ಎಲ್ಲರಿಗೂ ತಿಳಿಯುವಂತೆ ವಿವರಿಸಿದ್ದು, ಎಲ್ಲರೂ ಪ್ರೇಮಭಾವದಿಂದ 'ಹರಿ ಹರಿ' - 'ರಾಮ ರಾಮ' ಈ ಬೀಜಾಕ್ಷರಗಳನ್ನು ವೈಖರಿಯಿಂದ (ನಾಲಿಗೆಯಿಂದ) ಯಾವಾಗಲೂ ಉಚ್ಚರಿಸಲು ಹೇಳಿದ್ದಾರೆ.

ಶ್ರೀ ಸಂತ ಏಕನಾಥ ಮಹಾರಾಜರ ಆರತಿ

೧) ಭಾನುದಾಸಾಚ್ಯಾ ಕುಳೀ ಮಹಾವಿಷ್ಣುಚಾ ಅವತಾರ ।
ಆದಿ ಕ್ಷೇತ್ರೀ ಸ್ಥಾನ ವಸ್ತಿ ಗೋದಾತೀರ ॥ ೧ ॥
ಓವಾಳು ಆರತೀ ಸ್ವಾಮಿ ಏಕನಾಥಾ ।
ತುಮಚೀ ನಾಮ ಘೇತಾ ಹರೇ ಭವ ಭಯ ಚಿಂತಾ ॥ ಧ್ರು ॥

ಜನಾರ್ದನಾಚೀ ಕೃಪಾ ದತ್ತಾತ್ರಯಾಚಾ ಪ್ರಸಾದ ।
ಭಾಗವತ ರಾಮಾಯಣ ಸ್ವಯಂವರ ಸ್ವಾತ್ಮಬೋಧ ॥ ೨ ॥ ಓವಾಳು ॥

ಬ್ರಹ್ಮ ವಿಷ್ಣು ಮಹೇಶ ಜ್ಯಾಸೀ ಭಳಾವಯಾ ಯೇತಿ ।
ನ ಢಳೇ ಜ್ಯಾಚೀ ನಿಷ್ಠಾ ಐಸೀ ಏಕಾತ್ಮ ಭಕ್ತಿ ॥ ೩ ॥ ಓವಾಳು ॥

ಕಾವಡೀನೇ ಪಾಣೀ ಜ್ಯಾ ಘರೀ ಚಕ್ರಪಾಣಿ ವಾಹೇ ।
ಅನನ್ಯ ಭಕ್ತಿಭಾವೇ ನಿಳಾ ವಂದಿತಸೇ ಪಾಯ ॥ ೪ ॥ ಓವಾಳು ॥

೨) ಆರತಿ ಏಕನಾಥಾ, ಮಹಾರಾಜಾ ಸಮರ್ಥಾ ।
ತ್ರಿಭುವನೀ ತೂಚಿ ಥೋರ ಸದ್ಗುರು ಜಗನ್ನಾಥಾ ॥ ಧ್ರು ॥ ಆರತಿ ॥

ಏಕನಾಥ ನಾಮಸಾರ, ವೇದ ಶಾಸ್ತ್ರಾಂಚೆ ಗುಜ ।
ಸಂಸಾರ ದುಃಖ ನಾಸೇ, ಮಹಾಮಂತ್ರಾಚೇ ಬೀಜ ॥ ೧ ॥ ಆರತಿ ॥

ಏಕನಾಥ ನಾಮ ಘೇತಾ, ಸುಖ ವಾಟಲೇ ಚಿತ್ತಾ ।
ಅನಂತ ಗೋಪಾಳದಾಸಾ, ಧಣೀ ನ ಪುರೇ ಗಾತಾ ॥ ೨ ॥ ಆರತಿ ॥



ಶ್ರೀ ಸಂತ ನಾಮದೇವ ಮಹಾರಾಜರ ಹರಿಪಾಠ

೧) ನಾಮಾಚಾ ಮಹಿಮಾ ಕೋಣ ಕರೀ ಸೀಮಾ । ಜಪಾವೇ ಶ್ರೀ ರಾಮಾ ಏಕಾ ಭಾವೇ ॥
ನ ಲಗತೀ ಸ್ತೋತ್ರೆ ನಾನಾ ಮಂತ್ರೇ ತಂತ್ರೇ । ವರ್ಣಿಜೇ ವಕ್ತ್ರೇ ಶ್ರೀ ರಾಮನಾಮ ॥
ಅನಂತ ಪುಣ್ಯರಾಶೀ ಘಡೇ ಜ್ಯಾ ಪ್ರಾಣ್ಯಾಸೀ । ತರೀಚ ಮುಖಾಸೀ ನಾಮ ಏತ ॥
ನಾಮಾ ಮ್ಹಣೇ ರಾಮ ಹಾ ಜಪ ಪರಮ । ತೋ ದೇಹ ಉತ್ತಮ ಮೃತ್ಯುಲೋಕೀ ॥

ನಾಮದ ಮಹಿಮೆ ಅಪಾರವಾದದ್ದು; ಆದ್ದರಿಂದ ಸ್ತೋತ್ರ, ಮಂತ್ರ, ತಂತ್ರ ಇವುಗಳಿಗೆಲ್ಲಾ ಶ್ರಮವಹಿಸದೆ ಸುಲಭ ಮತ್ತು ಪರಮ ಪಾವನವಾದ ರಾಮನಾಮ ಜಪಿಸಿರಿ. ಹಿಂದಿನ ಅನಂತ ಜನ್ಮಗಳ ಪುಣ್ಯವಿದ್ದರೆ ಮಾತ್ರ ಮುಖದಿಂದ ರಾಮನಾಮ ಜಪ ಮಾಡಲು ಸಾಧ್ಯ; ಮತ್ತು ಅದೇ ದೇಹ ಮೃತ್ಯು ಲೋಕದಲ್ಲಿ ಉತ್ತಮವೆನಿಸಿಕೊಳ್ಳುತ್ತದೆ.

೨) ಜನ್ಮಾಚೆ ಕಾರಣ ರಾಮ ನಾಮ ಪಾಠೀ । ಜಾಯಿಜೆ ವೈಕುಂಠೀ ಏಕಾವೇಳಾ ॥
ರಾಮ ನಾಮ ಐಸಾ ಜಿವ್ಹೇ ಉಮಟೇ ಠಸಾ । ತೋ ಉದ್ದರೇಲ ಅಪೈಸಾ ಇಹ ಲೋಕೀ ॥
ದೋ ಅಕ್ಷರೀ ರಾಮ ಹಾ ಜಪ ಪರಮ । ನ ಲಗೆ ತುಜ ನೇಮ ನಾನಾ ಪಂಥ ॥
ನಾಮಾ ಮ್ಹಣೇ ಪವಿತ್ರ ಶ್ರೀ ರಾಮಾಚೇ ಚರಿತ್ರ । ಉದ್ಧರಸೀ ಗೋತ್ರ ಪೂರ್ವಜೇಸೀ ॥

ನರ ಅಥವಾ ನಾರಿ ಒಂದು ಸಲ ಮಾತ್ರ ರಾಮ ನಾಮ ಜಪಿಸುವದರಿಂದ ವೈಕುಂಠವಾಸ ಪದವಿ ಪ್ರಾಪ್ತವಾಗುತ್ತದೆ. ಹೃದಯದಲ್ಲಿ ಮತ್ತು ನಾಲಿಗೆಯ ಮೇಲೆ ರಾಮನಾಮದ ಮುದ್ರೆಯನ್ನು ವತ್ತಿಕೊಂಡವನು, ಈ ಲೋಕದಲ್ಲಿ ಸಹಜವಾಗಿ ಉದ್ಧಾರವಾಗುತ್ತಾನೆ. ನಾನಾ ರೀತಿಯ ಸಾಧನಗಳಲ್ಲಿ ಸಮಯ ವ್ಯಯಿಸದೆ ಎರಡಕ್ಷರ ರಾಮನಾಮ ಜಪಿಸಿರಿ. ಶ್ರೀ ರಾಮ ಚರಿತ್ರೆಯು ಪರಮ ಪವಿತ್ರವಿದ್ದು ನಿಮ್ಮ ವಂಶಜರನ್ನೆಲ್ಲಾ ಉದ್ಧರಿಸುತ್ತದೆ.

೩) ವಿಷಯಾಂಚೇ ಕೋಡ ಕಾ ಕರೀಸೀ ಗೋಡ । ಹೋಯಿಲ ತುಜ ಜೋಡ ಇಂದ್ರಿಯಬಾಧಾ ॥
ಸರ್ವಹೀ ಲಟಿಕೆ ಜಾಣ ತೂ ಬಾ ನಿಕೇ । ರಾಮಾವೀಣ ಏಕೇ ನ ಸುಟಜೇ ॥

ಮಾಯಾಜಾಳ ಮೋಹೆ ಇಂದ್ರಿಯಾಂಚಾ ರೋಹೋ । ಪರಿ ನ ಧರೇಚಿ ಭಾವೋ ಭಜನ ಪಂಥೇ ॥
ನಾಮಾ ಮ್ಹಣೇ ದೇವಾ ಕರೀ ತೂ ಲವಲಾಹೋ । ಮಯೂರಾಚಾ ಟಾಹೋ ಘನ ಗರ್ಜನಾ ॥

ಇಂದ್ರಿಯಗಳಿಗೆ ವಿಷಯಗಳ ರುಚಿಯನ್ನು ಹಚ್ಚಿ, ನಂತರ ಚಡಪಡಿಸಬೇಡ. ರಾಮನಾಮದ ಹೊರತು, ಎಲ್ಲವೂ ತೊಂದರೆ ಕೊಡುವಂತಹವು. ಆದ್ದರಿಂದ ರಾಮನಾಮದ ಅಭಿರುಚಿ ಬೆಳೆಸಿಕೊಳ್ಳಿರಿ. ಎಲ್ಲ ಜನರೂ ಮಾಯಾ ಮೋಹದ ಪ್ರಭಾವದಿಂದ, ಇಂದ್ರಿಯಗಳ ಆಧೀನರಾಗಿ ವರ್ತಿಸುವದರಿಂದ, ಅವರ ಒಲವು ಭಕ್ತಿ ಭಾವದ ಕಡೆಗೆ ಇಲ್ಲದಂತಾಗಿದೆ. ಆದ್ದರಿಂದ ದೇವಾದಿ ದೇವನೇ, ನೀನು ತ್ವರಿತ ಕೃಪೆ ಮಾಡಿ ಅಜ್ಞ ಜನರು ಭಕ್ತಿ ಮಾರ್ಗ ಅನುಸರಿಸುವಂತೆ ಕೃಪೆ ಮಾಡಬೇಕೆಂದು ಶ್ರೀ ಸಂತ ನಾಮದೇವ ಮಹಾರಾಜರು ಪಂಢರಿರಾಯನಿಗೆ ವಿನಂತಿಸುತ್ತಾರೆ. ಮೇಘ ಗರ್ಜನೆಯಾಗುವಾಗ ನವಿಲುಗಳು ಉಲ್ಹಾಸದಿಂದ ಕುಣಿದಾಡುವಂತೆ, ಪರಮಾತ್ಮನ ಕೃಪೆಯಿಂದ ಮಾತ್ರ ಅಜ್ಞ ಜನರು ಕೂಡಾ ಉಲ್ಹಾಸದಿಂದ ಕುಣಿ ಕುಣಿದು ಭಜನೆ ಮಾಡುತ್ತಾರೆ.

೨) **ಕಾಸವೀಚಿ ದೃಷ್ಟಿ ಜೈ ಹೋಯಿಜೇ ಭೇಟೀ । ತೇ ಅಮೃತಾಚೀ ಸೃಷ್ಟಿ ಘಡೇ ತ್ಯಾಸೀ ॥**
ತೈಸೇ ಹೇ ಭಜನ ಶ್ರೀ ರಾಮಾಚೇ ಧ್ಯಾನ । ವಾಚೇ ನಾರಾಯಣ ಅಮೃತಮಯ ॥
ಧನ್ಯ ತ್ಯಾಚೇ ಕುಳ ಸದಾ ಪೈ ಸಕಳ । ದಿನನಿಸೀ ಪಳ ರಾಮನಾಮ ॥
ನಾಮಾಮ್ಹಣೇ ಚೋಖಟ ಭಕ್ತ ತೋ ಉತ್ತಮ । ವಾಚೇಸೀ ಸುಗಮ ರಾಮನಾಮ ॥

ಕಲ್ಲಾವಿಗಳಿಗೆ ಸ್ತನಗಳಿರುವದಿಲ್ಲ. ತಾಯಿಯ ಕೃಪಾದೃಷ್ಟಿ ಮಾತ್ರದಿಂದ ಮರಿಗಳಿಗೆ ಮೊಲೆ ಹಾಲು ಸೇವಿಸಿದ ತೃಪ್ತಿಯಾಗುವಂತೆ ಸೃಷ್ಟಿಕರ್ತನು ಅವುಗಳ ಸ್ವಭಾವ ನೇಮಿಸಿದ್ದಾನೆ.

ಇದರಂತೆಯೇ ಶ್ರೀ ರಾಮಚಂದ್ರನ ಧ್ಯಾನ, ಭಜನೆ, ನಾರಾಯಣ ನಾಮೋಚ್ಚಾರ ಮಾಡುವವರಿಗೆ ಅಮೃತಪಾನ ಮಾಡಿದಷ್ಟು ತೃಪ್ತಿಯಾಗುತ್ತದೆ. ಹಗಲು ರಾತ್ರಿ ರಾಮ ನಾಮ ಉಚ್ಚಾರ ಮಾಡುವವನ ವಂಶವು ಧನ್ಯವಾದದ್ದು. ಹೀಗೆ ಸುಲಭವಾದ ರಾಮ ನಾಮಸ್ಮರಣೆ ಮಾಡುವವನೇ ಉತ್ತಮ ಮತ್ತು ಪವಿತ್ರ ಭಕ್ತನೆಂದು ಶ್ರೀ ಸಂತ ನಾಮದೇವರು ಹೇಳುತ್ತಾರೆ.

೩) **ಸದಾ ಫಳ ಸುಫಳ ವಾಚೇಸೀ ಗೋಪಾಳ । ವಂದೀ ಕಳಿಕಾಳ ಶಾಸ್ತ್ರ ಸಾಂಗೇ ॥**
ಬ್ರಹ್ಮಾಂಡ ನಾಯಕ ಐಸೇ ಜೇ ಕೌತುಕ । ತೇಚಿ ನಾಮ ಏಕ ಶ್ರೀ ಕೃಷ್ಣ ಐಸೇ ॥
ಆದಿ ಅಂತ ಪಾಹತಾ ನಾಹೀ ಪೈ ಸರ್ವಥಾ । ಪರಿಪೂರ್ಣ ಸರಿತಾ ಅಮೃತಾಚೀ ॥
ನಾಮಾ ಮ್ಹಣೇ ಅನಂತ ಕಾ ಕರಸೀ । ಸಂಕೇತ ಉದ್ಧರಿಲೇ ಪತಿತ ಯುಗಾಯುಗೀ ॥

ಗೋಪಾಳ ನಾಮೋಚ್ಚಾರದಿಂದ ಯಾವಾಗಲೂ ಉತ್ತಮ ಫಲವೇ ಲಭಿಸುತ್ತದೆ; ಮತ್ತು ಕಲಿಕಾಳ ಬಾಧೆಯಾಗುವದಿಲ್ಲೆಂದು ಶಾಸ್ತ್ರವು ಹೇಳುತ್ತದೆ. ಬ್ರಹ್ಮಾಂಡ ನಾಟಕದ ಮಾಯಾ ಸೂತ್ರಧಾರಿಯಾದ ಶ್ರೀಕೃಷ್ಣನ ನಾಮಜಪದಿಂದ ಅಪರಂಪಾರ ಪುಣ್ಯಲಭಿಸಿ ಪರಿಪೂರ್ಣ ಅಮೃತತ್ವ ಪ್ರಾಪ್ತವಾಗುತ್ತದೆ. ಯುಗ ಯುಗಗಳಲ್ಲಿ ಅನಂತ ಅವತಾರ ತೆಗೆದುಕೊಂಡು ಪತಿತರನ್ನು ಉದ್ಧಾರ ಮಾಡುವಂತಹ ಶ್ರೀ ಹರಿಯ ನಾಮವೊಂದಾದರೆ ಸಾಕೆಂದು ಸಂತನಾಮದೇವರು ಹೇಳುತ್ತಾರೆ.

೬) ಗೋವಿಂದ ಗೋಪಾಳ ವಾಚೇಸಿ ನಿಖಳ । ತೋ ಉದ್ಧರೇ ತಾತ್ಕಾಳ ಕಲೀಮಾಜೀ ॥
ನಾರಾಯಣ ನಾರಾಯಣ ಹೇಚಿ ಪಾರಾಯಣ । ಉದ್ಧರಲೇ ಜನ ಇಹಲೋಕೀ ॥
ತುಟತೀ ಯಾತನಾ ಕರ್ಮಾಚ್ಯಾ ಭಾವನಾ । ಜಡ ಜೀವ ಉದ್ಧರಣಾ ನಾಮ ಸ್ಮರಾ ॥
ನಾಮಾ ಮ್ಹಣೆ ರಾಮ ಹಾ ಜಪ ಪರಮ । ನ ಲಗತೀ ನೇಮ ನಾನಾ ಕೋಟಿ ॥

ಸ್ಪಷ್ಟವಾಗಿ ಗೋವಿಂದ–ಗೋಪಾಳ ಅನ್ನುವುದರಿಂದ ಕಲಿಯುಗದಲ್ಲಿ ಶೀಘ್ರ ಉದ್ಧಾರವಾಗುತ್ತಾರೆ. ನಾರಾಯಣ ನಾರಾಯಣ ಇದೇ ಪುನರಾವೃತ್ತಿ ಮಾಡುವದರಿಂದ ಈ ಲೋಕದ ಜನರು ಉದ್ಧಾರವಾಗುತ್ತಾರೆ. ಕರ್ಮವಾಸನೆ ನಷ್ಟವಾಗಿ ಯಮ ಯಾತನೆ ತಪ್ಪಿಸಿಕೊಳ್ಳಲು ಮಂದ ಜೀವಿಗಳು ಹರಿನಾಮ ಜಪ ಮಾಡಬೇಕು. ರಾಮ ಜಪವು ಪರಮ ಶ್ರೇಷ್ಠವಾಗಿದ್ದು ಬೇರೆ ಯಾವ ಉಪಾಯವೂ ಬೇಕಿಲ್ಲ.

೭) ತೀರ್ಥ ತಪರಾಶಿ ಜಪ ಹೃಷಿಕೇಶಿ । ನಾವು ಅಹರ್ನಿಶಿ ರಾಮು ರಾಮು ॥
ತೀರ್ಥಾಚೇ ಪೈ ತೀರ್ಥ ನಾಮ ಹೇ ಸಮರ್ಥ । ಹೋಯಿಲ ಕೃತಾರ್ಥ ರಾಮನಾಮೇ ॥
ಸಾಧೇಲ ಸಾಧನ ತುಟೇಲ ಬಂಧನ । ವಾಚೇ ಜನಾರ್ದನ ಸುಫಳ ಸದಾ ॥
ನಾಮಾಮ್ಹಣೆ ಹರಿ ಉಚ್ಚಾರ ತೂ ಕರೀ । ಉದ್ಧರಸೀ ನಿರ್ಧಾರೀ ಇಹ ಲೋಕೀ ॥

ನಾನಾ ತೀರ್ಥಗಳ ಯಾತ್ರೆ, ಇಂದ್ರಿಯಗಳನ್ನು ನಿಗ್ರಹಿಸಿ ನಾನಾ ತಪಾಚರಣೆ ಇತ್ಯಾದಿ ತಾಪದಾಯಕ ಸಾಧನೆಗಳ ಬದಲಾಗಿ ರಾತ್ರಂ-ದಿವಸ ರಾಮ ರಾಮ ಜಪ ಮಾಡಿರಿ. ಏಕೆಂದರೆ ರಾಮ ನಾಮದಲ್ಲಿ ಎಲ್ಲ ತೀರ್ಥಗಳನ್ನೂ ಸಹ ಪಾವನ ಮಾಡುವ ಶಕ್ತಿ ಇದೆ. ಆದ್ದರಿಂದ ಎಲ್ಲ ಬಂಧನಗಳಿಂದ ಮುಕ್ತಿ ಹೊಂದಿ ಉದ್ಧಾರವಾಗಲು ಶ್ರೀ ಹರಿ ಜನಾರ್ದನನ ನಾಮಜಪ ಒಂದೇ ತಾರಕ ಮಂತ್ರವೆಂದು ಸಂತ ನಾಮದೇವರು ಹೇಳುತ್ತಾರೆ.

೮) ಪಾಹತಾ ಯೇ ಪರಿಪಾಟೀ ಆಣಿಕ ನಾಹೀ ಸೃಷ್ಟಿ । ನಾಮೇವೀಣ ದೃಷ್ಟಿನ ದಿಸೇ ಮಾಜಾ ॥
ನಾಮಚೀ ಸಮರ್ಥ ನಾಮಚೀ ಮತಿಥ । ಶಂಕರಾಶೀ ಹೇತ ರಾಮನಾಮೀ ॥
ಪುರತೀ ಸರ್ವ ಕಾಮ ವಾಚಿ ರಾಮ ರಾಮ । ನ ಲಗತೀ ತೇ ನೇಮ ಕರ್ಮಜಾಳ ॥
ನಾಮಾ ಮ್ಹಣೆ ಉಚ್ಚಾರ ನ ಕರೀ ತೂ ವಿಚಾರ । ತುಟೇಲ ಯೇರ-ಝೂರ ನಾನಾ ಯೋನೀ ॥

ಈ ಸೃಷ್ಟಿಯಲ್ಲಿ ಭಗವನ್ನಾಮಸ್ಮರಣೆಯಿಂದಲೇ ಎಲ್ಲ ಸಾಧಿಸುತ್ತದೆ. ನಾಮದ ಮಹಾತ್ಮೆ ಮಹಾದೇವರಿಗೆ ತಿಳಿದಿದ್ದರಿಂದಲೇ ಹಗಲು-ರಾತ್ರಿಯನ್ನದೇ ಎಷ್ಟೋ ಯುಗಗಳಿಂದ ರಾಮ ನಾಮ ಜಪದಲ್ಲಿಯೇ ಮಗ್ನರಾಗಿದ್ದಾರೆ. ರಾಮನಾಮದಿಂದ ಎಲ್ಲ ಕಾಮನೆಗಳು ಸಿದ್ಧಿಸಿ ಎಲ್ಲ ಪಾಪಗಳು ನಾಶವಾಗುತ್ತವೆ. ಆದ್ದರಿಂದ ಜನ್ಮ ಮರಣ ತಪ್ಪಿಸುವ ಸಲುವಾಗಿ ರಾಮ ನಾಮ ಜಪಿಸಿರೆಂದು ಸಂತ ನಾಮದೇವರು ಹೇಳುತ್ತಾರೆ.

೯) ತಪಾಚೀ ಹೇ ತಪ ರಾಮ ಹೇ ಅಮೂಪ । ಕರೀ ಕಾ ರೇ ಜಪ ರಾಮನಾಮೀ ॥
ರಾಮಕೃಷ್ಣ ಮ್ಹಣೇ ವಾಚೇ ನಾರಾಯಣ । ತುಟಲೇ ಬಂಧನ ಯಮಪಾಶ ॥
ಸಾಧೇಲ ಸಾಧನ ಹೋತಿ ಕೋಟಿಯಜ್ಞ । ರಾಮ ಜನಾರ್ದನ ಜಪ ಕರೀ ॥
ನಾಮಾ ಮ್ಹಣೇ ಜಿಹ್ವೇ ನಾಮಸ್ಮರಣ ಕರೀ । ಮ್ಹಣೇ ನರಹರೀ ಏಕ್ಯಾ ಭಾವೇ ॥

ರಾಮ ಜಪವೇ ಶ್ರೇಷ್ಠ ಜಪ. ರಾಮಕೃಷ್ಣ ನಾರಾಯಣ ಅನ್ನುವದರಿಂದಲೇ ಭವ ಬಂಧನ, ಯಮ ಪಾಶ, ನಾಶವಾಗುತ್ತದೆ. ರಾಮ ಜನಾರ್ದನ ಜಪವೇ ಕೋಟಿಯಜ್ಞಸಮ. ನರಹರೀ ನರಹರೀ ಏಕಚಿತ್ತದಿಂದ ಜಪ ಮಾಡಿರೆಂದು ಸಂತ ನಾಮದೇವರು ಹೇಳುತ್ತಾರೆ.

೧೦) ಹಾಚಿ ನೇಮ ಸಾರೀ ಸಾಧೇಲ ತೋ ಹರೀ । ನಾಮ ಹೇ ಮುರಾರೀ ಅಚ್ಯುತಾಚೆ ॥
ರಾಮ ಗೋವಿಂದ ಹರೇ ಕೃಷ್ಣ ಗೋವಿಂದ ಹರೇ । ಯಾದವ ಮುರಾರಿ ರಾಮನಾಮ ॥
ನ ಲಗತೀ ಕಥಾ ನಾನಾ ವಿಕಳತಾ । ರಾಮಚೀ ಸ್ಮರತಾ ನಾಮವಾಚೆ ॥
ನಾಮಾ ಮ್ಹಣೇ ರಾಮ ಆಮ್ಹಾ ಹಾಚಿ ನೇಮ । ನಿತ್ಯ ತೋ ಸಪ್ರೇಮ ಜಪ ಆಮ್ಹಾ ॥

ಅಚ್ಯುತ ಮುರಾರಿ ನಿತ್ಯ ನೇಮದಿಂದ ಜಪಿಸಿದರೆ ಹರಿಪ್ರಾಪ್ತಿಯಾಗುತ್ತದೆ. ಗೋವಿಂದ ಹರೆ ಗೋವಿಂದಹರೇ ಯಾದವ ಮುರಾರೆ ರಾಮರಾಮ ಹೀಗೆ ಸ್ಮರಣೆ ಮಾಡುತ್ತಾ ಜಪ ಮಾಡಿದರೆ ನಾನಾ ಪುರಾಣ ಪುಣ್ಯಗಳನ್ನು ಶ್ರವಣ ಮಾಡುವ ಆವಶ್ಯಕತೆಯಿಲ್ಲ. ಆದ್ದರಿಂದ ಪ್ರೇಮ ಮುದಿತ ಮನದಿಂದ ನಿತ್ಯನೇಮ, ರಾಮ ಜಪ ಮಾಡುವುದೇ ತಾರಕವೆಂದು ಸಂತ ನಾಮದೇವರು ಹೇಳುತ್ತಾರೆ.

೧೧) ಕರೂ ಹೇ ಕೀರ್ತನ ರಾಮ ನಾರಾಯಣ। ಜನೀ ಜನಾರ್ದನ ಹೇಚಿ ದೇಖೇ ॥
ಜಗಾಚಾ ಜನಕ ರಾಮಕೃಷ್ಣ ಏಕ। ನ ಕರಿತಾ ವಿವೇಕ ಸ್ಮರೇ ರಾಮ ॥
ತುಟೇಲ ಭವ ಜಾಳ ಕಾ ಕರಿಸೀ ಪಾಲ್ಹಾಳ। ಸರ್ವ ಮಾಯಾ ಜಾಳ ಇಂದ್ರಿಯ ಬಾಧಾ ॥
ನಾಮಾ ಮ್ಹಣೆ ಗೋವಿಂದ ಸ್ಮರೇ ತೂ ಸಾವಧ। ನವ್ಹೇ ತುಜ ಬಾಧ ನಾನಾ ವಿಘ್ನೇ ॥

ರಾಮ ನಾರಾಯಣ ಜಪಿಸುತ್ತ ಜಗತ್ತಿನ ಜನರಲ್ಲಿಯೇ ಜನಾರ್ದನನ ವಾಸವಿದೆಯೆಂದು ಭಾವಿಸಬೇಕು. ರಾಮಕೃಷ್ಣರೇ ಜಗತ್ತಿನ ತಂದೆ-ತಾಯಿಯೆಂದು ಸ್ಮರಿಸಬೇಕು. ಈ ಜಗತ್ತಿನಲ್ಲಿ ಮಾಯಾ ಜಾಲ ತುಂಬಿ ತುಳುಕುತ್ತಿದ್ದು, ಮನುಷ್ಯನ ಇಂದ್ರಿಯಗಳನ್ನು ಭ್ರಷ್ಟಗೊಳಿಸುತ್ತದೆ. ಈ ಭವತಾಪ ನಿವಾರಣೆಯಾಗಲು ರಾಮ ಗೋವಿಂದ ಜಪವನ್ನು ಸಾವಧಾನದಿಂದ ಮಾಡಿರೆಂದು ಸಂತನಾಮದೇವರು ಹೇಳುತ್ತಾರೆ.

೧೨) ಮಾಯೇಚೀ ಭೂಚರೇ ರಜ ತಮ ಸಾತ್ವಿಕ। ರಾಮ ನಾಮ ಏಕ ಸೋಡವಿಣೇ ॥
ರಾಮ ಹೇಚಿ ಸ್ನಾನ ರಾಮ ಹೇಚಿ ಧ್ಯಾನ। ನಾಮೇ ಘಡತೀ ಯಜ್ಞ ಕೋಟಿ ದೇವಾ ॥
ನ ಲಗತೀ ಸಾಧನೇ ನಾನಾ ಮಂತ್ರ ವಿವೇಕ। ರಾಮನಾಮೀ ಮುಖ ರಂಗಿವೀ ಕಾ ರೇ ॥
ನಾಮಾ ಮ್ಹಣೇ ಶ್ರೀ ರಾಮ ಹೇಚಿ ವಚನ ಆಮ್ಹಾ। ನಿತ್ಯ ತೇ ಪೌರ್ಣಿಮಾ ಸೋಳಾಕಳೀ ॥

ರಜತಮ ಸತ್ವ ಗುಣಗಳೆಂಬ ಮಾಯಾ ಪಿಶಾಚಿಯಿಂದ ಬಿಡಿಸಿಕೊಳ್ಳಲು ರಾಮನ ಧ್ಯಾನ ಮತ್ತು ರಾಮನಾಮದ ಸ್ನಾನ ಇವೇ ಮುಖ್ಯ. ಇದರಿಂದಲೇ ದೇವನಿಗೆ ಕೋಟಿ ಯಜ್ಞಗಳ ಫಲ ಅರ್ಪಿಸಿದಂತೆ. ರಾಮನಾಮದಲ್ಲಿ ತಲ್ಲೀನವಾದವನಿಗೆ ನಾನಾ ಮಂತ್ರ ಸಾಧನಗಳು ಅವಶ್ಯವಿಲ್ಲ. ಆದ್ದರಿಂದ ಶ್ರೀ ರಾಮ ವಚನವೇ ನಮಗೆ ಪೌರ್ಣಿಮೆಯ ಚಂದ್ರನಂತೆ ಸೀತಳವಾಗಿರುತ್ತದೆಂದು ಸಂತ ನಾಮದೇವರು ಹೇಳುತ್ತಾರೆ.

೧೩) ಮಾಝೀ ಮೀ ಕರಿತಾ ಗೇಲೇ ಹೇ ದಿವಸ। ನ ಧರೀಚ ವಿಶ್ವಾಸ ರಾಮ ನಾಮೀಂ ॥
ಅಂತೀ ತುಜ ಉದ್ಧರತೀ ರಾಮಕೃಷ್ಣಹರಿ। ರಾಮ ಪಂಚಾಕ್ಷರೀ ಮಂತ್ರಸಾರ ॥
ಕಾ ಕರಿಶೀ ಸಾಂಠಾ ಪ್ರಪಂಚ ವಿಸ್ತಾರ। ನ ತುಟೆ ಏರಝಾರ ನಾಮೇವೀಣ ॥
ನಾಮಾ ಮ್ಹಣೆ ಐಸೇ ರಾಮನಾಮೀ ಪಿಸೇ। ತೋ ಉದ್ಧರೇಲ ಆಪೈಸೇ ಇಹಲೋಕೀ ॥

ನಾನು ಮತ್ತು ನನ್ನದು ಎಂಬ ಅಜ್ಞಾನದಲ್ಲಿಯೇ ಆಯುಷ್ಯ ಮುಗಿಯುತ್ತಿದೆಯಾದರೂ ; ರಾಮನಾಮದಿಂದ ಉದ್ಧಾರವಾಗುವುದೆಂಬ ವಿಶ್ವಾಸ ಗಳಿಸಿಕೊಂಡಿಲ್ಲ. ರಾಮಕೃಷ್ಣಹರಿ ನಾಮವೇ ನಿನ್ನನ್ನು ಉದ್ಧರಿಸುತ್ತದೆ. ರಾಮನಾಮವು 'ನಮಃ ಶಿವಾಯ' ಪಂಚಾಕ್ಷರಿ ಮಂತ್ರದ

ಸಾರವೇ ಆಗಿದೆ. ಹಣ ಮತ್ತು ವಸ್ತುಗಳ ಸಂಗ್ರಹದಿಂದ ಪ್ರಪಂಚ ವಿಸ್ತಾರ ಮಾಡಿ ನಿನಗೆ ಏನು ಪ್ರಯೋಜನ? ನಾಮಜಪ ಮಾಡದೇ ನಿನ್ನ ಜನ್ಮ-ಮರಣ ತಪ್ಪುವದಿಲ್ಲ. ರಾಮ ಜಪದ ರುಚಿಯನ್ನು ಮತ್ತು ಆನಂದವನ್ನು ಅನುಭವಿಸುತ್ತಿರುವವನು ಮಾತ್ರ ಈ ಲೋಕದಲ್ಲಿ ಉದ್ಧಾರವಾಗುತ್ತಾನೆಂದು ಸಂತ ನಾಮದೇವರು ಹೇಳುತ್ತಾರೆ.

೧೪) ನಕೋ ನಕೋ ಮಾಯಾ ಸಾಂಡೀ ಲವಲಾಹ್ಯಾ । ಪುಢೀಲ ಉಪಾಯಾ ಝೋಂಬೇ ಕಾರೇ ॥
ರಾಮನಾಮ ಮ್ಹಣೇ ತುಟೇಲ ಬಂಧನ । ಭವ ಬಂಧ ಮೋಚನ ಏಕ್ಯಾ ನಾಮೇ ॥
ಸ್ಮರತಾ ಪತಿತ ಉದ್ಧರೇಲ ಯಥಾರ್ಥ । ನಾಮ ಹಾಚಿ ಸ್ವಾರ್ಥ ತಯಾ ಝಾಲಾ ॥
ನಾಮಾ ಮ್ಹಣೇ ಜಪ ಕರೀ ತೂ ಅಮೂಪ । ನಾಮೇ ಚುಕೇ ಖೇಪ ಇಯೇ ಜನೀ ॥

ಮಾಯೆಯನ್ನು ತೀವ್ರಗತಿಯಿಂದ ತ್ಯಜಿಸಿ ಮುಂದಿನ ಉಪಾಯಕ್ಕೆ ಅಣಿಯಾಗು. ಒಂದೇ ಒಂದು ರಾಮನಾಮ ಉಚ್ಚಾರದಿಂದ ಭವಬಂಧ ಮೋಚನವಾಗುತ್ತದೆ. ಮಹಾ ಪಾತಕೀ ಕೂಡಾ ರಾಮ ಜಪದಿಂದ ಉದ್ಧಾರವಾಗುತ್ತಾನೆ. ಆದ್ದರಿಂದ ಅಧಿಕ ರಾಮಜಪ ಮಾಡಿರೆಂದು ಈ ಲೋಕದ ಜನರಿಗೆ ಸಂತನಾಮದೇವರು ಹೇಳುತ್ತಾರೆ.

೧೫) ಸ್ಮರಣ ಕರಿತಾ ರಾಮನಾಮ ಧ್ವನಿ । ಐಕತಾಚಿ ಕರ್ಣೀ ಪಳತೀ ಯಮ ॥
ನಾಮ ಪಾಠ ಕರಾ ರಾಮಕೃಷ್ಣ ಹರೀ । ಹೋತೀಲ ಕಾಮಾರೀ ರಿದ್ಧಿಸಿದ್ಧಿ ॥
ಸಾಧ್ಯ ತೇಚಿ ಸಾಧೀನ ಕರೀ ಉಪಾಧಿ । ಜನ್ಮಾಂತರೀಚ್ಯಾ ವ್ಯಾಧಿ ಹರತೀ ನಾಮೇ ॥
ನಾಮಾ ಮ್ಹಣೇ ಸರ್ವ ರಾಮು ಹಾಚಿ ಭಾವ । ನಾಹೀ ಆಣಿಕ ದೇವ ರಾಮೇವೀಣ ॥

ರಾಮನಾಮ ಧ್ವನಿಯು ಕಿವಿಯಲ್ಲಿ ಕೇಳುತ್ತಲೇ ಯಮ ಧರ್ಮನು ಅಲ್ಲಿಂದ ಓಡಿ ಹೋಗುತ್ತಾನೆ. ರಾಮಕೃಷ್ಣ ಹರಿ ನಾಮಜಪದಿಂದ ಎಲ್ಲ ಸಿದ್ಧಿಗಳು ವಶವಾಗುತ್ತವೆ. ಬೇರೆ ಉಪದ್ವ್ಯಾಪ ಮಾಡುವದಕ್ಕಿಂತ ಹರಿ ಸಂಪಾದನೆ ಮಾಡಿದರೆ ಹಿಂದಿನ ಎಲ್ಲ ಜನ್ಮಗಳಲ್ಲಿಯ ರೋಗಗಳು ನಿವಾರಣೆಯಾಗುತ್ತವೆ. ರಾಮನನ್ನು ಬಿಟ್ಟು ಬೇರೆ ಯಾವ ದೇವರೂ ಇಲ್ಲಾ, ಈ ಭಾವದಿಂದ ಎಲ್ಲವೂ ರಾಮನೆಂದು ತಿಳಿದು ರಾಮಜಪ ಮಾಡಿರೆಂದು ಸಂತ ನಾಮದೇವರು ಬೋಧಿಸುತ್ತಾರೆ.

೧೬) ರಾಮಕೃಷ್ಣ ಮಾಳಾ ಘಾಲಿತಾ ಅಢಳ । ತುಟೇಲ ಭವಜಾಳ ಮಾಯಾ ಮೋಹ ॥
ಹೋಶೀಲ ತೂ ಸಾಧು ನ ಪಾವಸೀ ಬಾಧೂ । ಪೂರ್ಣ ಬ್ರಹ್ಮಾನಂದ ತುಷ್ಟೇಲ ತುಜ ॥

ಜಪತಾ ರಾಮನಾಮ ಪುರತೀ ಸರ್ವಕಾಮ । ಆದಿ ಅಂತೀ ನೇಮ ಸಾಧೇಲ ತುಜ ॥
ನಾಮಾಮ್ಹಣೇ ಕೃತಾರ್ಥ ಸರ್ವ ಮನೋರಥ । ನ ಲಗತೀ ತೇ ಅರ್ಥ ಮಾಯಾಪಾಶ ॥

ರಾಮಕೃಷ್ಣ ಪುನರಾವೃತ್ತಿಯನ್ನು ನಾಲಿಗೆಯ ಮೇಲೆ ದೃಢವಾಗಿ ಧರಿಸುವದರಿಂದ ಜಗತ್ತಿನ ಮಾಯಾ ಮೋಹ ಇಲ್ಲದಂತಾಗುತ್ತದೆ. ಮತ್ತು ಅವಗುಣಗಳಿಲ್ಲದ ಸಾಧುವಾಗಿ ನೀನು ಪೂರ್ಣ ಬ್ರಹ್ಮಾನಂದ ಪಡೆಯುತ್ತೀ. ರಾಮ ನಾಮ ಜಪದಿಂದ ಎಲ್ಲ ಸಾಧನೆಗಳ ಫಲಗಳು ಸಾಧಿಸಿದಂತಾಗಿ ಎಲ್ಲ ಇಚ್ಛೆಗಳು ಪೂರ್ತಿಯಾಗುತ್ತವೆಂದು ಸಂತ ನಾಮದೇವರು ಹೇಳುತ್ತಾರೆ.

೧೭) ಶರೀರ ಸಂಪತ್ತಿ ಮಾಯೇಚೇ ಟವಾಳ । ವಾಯಾಂಚೀ ಪಾಲ್ಹಾಳ ಮಿರವಿಸೀ ॥
ನಾಮ ಹೇಚಿ ತಾರೀ ವಿಠ್ಠಲ ನಿರ್ಧಾರೀ । ಮ್ಹಣೇ ಹರಿ ಹರಿ ಏಕವೇಳಾ ॥
ಸ್ಮರತಾ ಗೋಪಾಳ ನಾಮ ವಂದಿತೀಲ ಯಮ । ನ ಲಗತೀ ನೇಮ ಮಂತ್ರ ಬಾಧಾ ॥
ನಾಮಾ ಮ್ಹಣೆ ಸಾರ ತೋ ಮಂತ್ರ ಉತ್ತಮ । ರಾಮ ಹೇಚಿ ನಾಮ ಸ್ಮರೇ ಕಾರೇ ॥

ಸುಂದರವಾದ ಶರೀರ, ಆಸ್ತಿ, ಸಂಪತ್ತು, ಅಂತಸ್ತು ಇವೆಲ್ಲವುಗಳೂ ಮಾಯೆಯ ಥಂಬಾಚಾರವಿದ್ದು, ಮನುಷ್ಯನ ದೇಹದೊಂದಿಗೆ ಇವೆಲ್ಲವೂ ಮರಣ ಹೊಂದುತ್ತವೆ. ವಿಠ್ಠಲ ಹರೀ ಹರೀ ಇದೇ ತಾರಕ ಮಂತ್ರ. ರಾಮಕೃಷ್ಣ ಹರಿ ಗೋವಿಂದ ಗೋಪಾಳ ನಾಮಜಪದಿಂದ ಯಮಧರ್ಮ ಕೂಡಾ ವಂದಿಸುತ್ತಾನೆಂದು ಸಂತ ನಾಮದೇವರು ಹೇಳುತ್ತಾರೆ.

೧೮) ಕೃಷ್ಣ ಕಥಾ ಸಾಂಗ ಜೇಣೇ ತುಟೇ ಪಾಂಗ । ನ ಲಗೇ ತುರುಝ ಉದ್ಯೋಗ ಕರಣೆ ಕಾಹೀ ॥
ಸಮರ್ಥ ಸೋಯರ ರಾಮ ಹಾ ನಿಧಾನ । ಜನೀ ಜನಾರ್ದನ ಏಕ ಧ್ಯಾಯೀ ॥
ನಾಮಾ ಮ್ಹಣೇ ಉಚ್ಚಾರ ರಾಮಕೃಷ್ಣ ಸಾರ । ತುಟೇಲ ಯೇರಝಾರ ಭವಾಬ್ಧೀಚಿ ॥

ಶ್ರೀಕೃಷ್ಣ ಕಥಾಸಾರವನ್ನು ಸುರಸವಾಗಿ ವರ್ಣಿಸುವದರಿಂದ ನಿನ್ನ ಎಲ್ಲ ಆತಂಕಗಳು ನಿವಾರಣೆಯಾಗುತ್ತವೆ. ರಾಮನು ಸಮರ್ಥ ಆಪ್ತ-ಬಂದುವಿದ್ದು, ಎಲ್ಲ ಜನರಲ್ಲಿ ಅವನೇ ತುಂಬಿಕೊಂಡಿದ್ದಾನೆಂದು ಧ್ಯಾನಿಸು. ಆದ್ದರಿಂದ ಜನ್ಮ ಮರಣಗಳಿಂದ ಮುಕ್ತಿ ಹೊಂದುವ ಸಲುವಾಗಿ ರಾಮ ಕೃಷ್ಣ ನಾಮ ಜಪಿಸಿರೆಂದು ಸಂತನಾಮದೇವರು ಹೇಳುತ್ತಾರೆ.

೧೯) ಭವಾಬ್ಧೀತಾರಕ ರಾಮಕೃಷ್ಣ ನಾಮ । ರೋಹಿಣೀಚೇ ಮಾವ ಸಕಳ ದಿಸೇ ॥
ನಾಮ ಹೇಚಿ ಥೋರ ನಾಮಹೇಚಿ ಥೋರ । ಹೇಚಿ ವೈಕುಂಠೀ ಬಿಢಾರ ರಾಮನಾಮೆ ॥

ಪರಿಪೂರ್ಣ ಬ್ರಹ್ಮನಾದುದರಿಂದ ಅವನನ್ನೇ ಮಹಾದೇವರು ಹಗಲು ರಾತ್ರಿ ನೇಮದಿಂದ ಪೂಜಿಸುತ್ತಾರೆಂದು ಸಂತ ನಾಮದೇವರು ಹೇಳುತ್ತಾರೆ.

೨೫) ಕಾ ಕರಿತೋಸಿ ಶೀಣ ವಾಚೇ ನಾರಾಯಣ । ಜಪತಾ ಸಮಾಧಾನ ಹೋಯಿೀಲ ತುಜ ॥
ಕೃಷ್ಣ ಹರೀ ಗೋವಿಂದ ಹರೇ ಗೋವಿಂದ । ವಾಚೇಸೀ ಹಾ ಛಂದ ನಾಮ ಪಾಠ ॥
ವಂದಿತೀಲ ಯಮ ಕಲಿಕಾಳ ಸರ್ವದಾ । ನ ಪವಸೀ ಆಪದಾ ಅಸತಾ ದೇಹೀ ॥
ನಾಮಾಮ್ಹಣೆ ವೋಳಂಗೆ ಸೀಣ ಝಾಲಾ ಸಂಗೇ । ಪ್ರಪಂಚ ವಾವುಗೆ ಟಾಕೀ ಪರತೇ ॥

ನಾರಾಯಣ ನಾಮ ಜಪಿಸಲಿಕ್ಕೆ ಈ ಜನರು ಯಾಕೆ ಬೇಸರ ಪಡುತ್ತಾರೆಂದು ಸಂತ ನಾಮದೇವರು ಪ್ರಶ್ನಿಸುತ್ತಾರೆ. ಕೃಷ್ಣ ಹರಿ ಗೋವಿಂದ ಅನ್ನುವದರಿಂದ ಯಮ ಹಾಗೂ ಕಲಿಕಾಳದ ಬಾಧೆಯಾಗುವದಿಲ್ಲ. ಪ್ರಪಂಚ ಹಾಗೂ ಪ್ರಪಂಚದಲ್ಲಿಯ ಆಕರ್ಷಕ ವಸ್ತುಗಳ ಆಸಕ್ತಿಯನ್ನು ತೊರೆದು, ಭಗವನ್ನಾಮಸ್ಮರಣೆಯ ರುಚಿ ಹಚ್ಚಿಕೊಳ್ಳಿರೆಂದು ಸಂತ ನಾಮದೇವರು ಉಪದೇಶಿಸುತ್ತಾರೆ.

೨೬) ನಾಮಾಚೇನಿ ಪಾಠೇ ಜಾತೀಲ ವೈಕುಂಠೇ । ತೋ ಪುಂಡಲೀಕ ಪೇಠೆ ಪ್ರಕಟ ಅಸೇ ॥
ವಿಠ್ಠಲ ಹಾ ಮಂತ್ರ, ಸಾಂಗತಸೇ ಶಾಸ್ತ್ರ। ಆಣಿಕ ನಾಹೀ ಶಸ್ತ್ರ ನಾಮಾವಿಣ ॥
ಪುರಾಣ ವ್ಯುತ್ಪತ್ತಿ ನ ಲಗತೀ ಶೃತಿ। ಮುನಿ ಹರಿಪಂಥೀ ಗೇಲೇ ॥
ನಾಮಾ ಮ್ಹಣೆ ಹರಿ ನಾಮೇಂಚಿ ಉದ್ಧರೀ । ಜನ್ಮಾಚೇ ಏರಝಾರೀ ಹರೇ ನಾಮೇಂ ॥

ಹರಿನಾಮ ಜಪದಿಂದ ವೈಕುಂಠ ಪ್ರಾಪ್ತಿಯಾಗುತ್ತದೆ. ಆ ವೈಕುಂಠಾಧಿಪತಿಯು ಭಕ್ತ ಶ್ರೇಷ್ಠ ಪುಂಡಲೀಕರಾಯನ ನಗರದಲ್ಲಿ ಅಂದರೆ ಪಂಢರಪುರದಲ್ಲಿ ಸಗುಣ-ಸಾಕಾರ ರೂಪದಲ್ಲಿದ್ದಾನೆ. ವಿಠ್ಠಲ ಮಂತ್ರದ ನಾಮಸ್ಮರಣೆ ವ್ಯತಿರಿಕ್ತ ಭವತಾರಕ ಶಸ್ತ್ರ ಮತ್ತೊಂದಿಲ್ಲವೆಂದು ಎಲ್ಲ ಶಾಸ್ತ್ರಗಳು ಹೇಳುತ್ತವೆ. ಪುರಾಣ ಮತ್ತು ಶೃತಿಗಳ ಅಭ್ಯಾಸವೇನೂ ಮಾಡುವ ಅವಶ್ಯಕತೆ ಇಲ್ಲಾ; ಹಿಂದಿನ ಮುನಿಗಳು ತೋರಿದ ಹರಿಪಂಥದಿಂದಲೇ ನಾವೂ ಹೋಗಬೇಕು. ಹರಿನಾಮ ಜಪದಿಂದಲೇ, ಜನ್ಮ-ಮರಣ ಇಲ್ಲವಾಗಿ, ಜೀವನ ಉದ್ಧಾರವಾಗುವುದೆಂದು ಸಂತ ನಾಮದೇವರು ಹೇಳುತ್ತಾರೆ.

೨೭) ಸರ್ವಾಭೂತೀ ಭಜ ನಮನ ಕರೀ ಸಂತಾ । ನಿತ್ಯ ತ್ಯಾ ಅಚ್ಯುತಾ ಸ್ಮರಣ ಕರೀ ॥
ಐಸೇ ಭಜನೀ ವಿನಟ ಸಾಪಡೇಲ ವಾಟ । ರಾಮಕೃಷ್ಣ ನೀಟ ವೈಕುಂಠೀಚೇ ॥

ನ ಲಗತೀ ಸಾಧನೆ ವಾಯಾಂಚಿ ಬಂಧನೇ । ಏಕ ನಾಮೇ ಹೋಣೇ ಚತುರ್ಭುಜ ॥
ನಾಮಾ ಮ್ಹಣೇ ಥೋರ ನಾಮಚಿ ಸಧರ । ವೈಕುಂಠೀ ಬಿಢಾರ ತಯಾ ಭಕ್ತಾ ॥

ಸರ್ವಭೂತ ಮಾತ್ರಗಳಲ್ಲಿ ಪರಮಾತ್ಮನಿದ್ದಾನೆಂಬ ಭಾವವಿರಲಿ. ನಿತ್ಯ ನೇಮದಿಂದ ಪರಮಾತ್ಮನ ಹಾಗೂ ಸಂತರ ಭಕ್ತಿ ಮಾಡುವದರಿಂದ, ಪರಮಾತ್ಮನಲ್ಲಿ ಲೀನವಾಗುವ ದಾರಿ ಸಿಗುತ್ತದೆ. ನಿಷ್ಠೆಯಿಂದ ಜಪಿಸುವ ರಾಮಕೃಷ್ಣ ನಾಮದಿಂದಲೇ ಭಕ್ತರಿಗೆ ವೈಕುಂಠವಾಸ ಪ್ರಾಪ್ತವಾಗುವುದೆಂದು ಸಂತನಾಮದೇವರು ಹೇಳುತ್ತಾರೆ.

೨೮) ತೂ ತವ ನೇಣತಾ ಪರೀ ಹರಿ ಜಾಣತಾ । ಆಹೇ ತೋ ಸಮತಾ ಸರ್ವಾಭೂತೀ ॥
ಸರ್ವ ಬ್ರಹ್ಮ ಹರಿ ಏಕಚಿ ನಿರ್ಧಾರ । ಹೋಶಿ ಝಡಕರೀ ಬ್ರಹ್ಮ ತೂಚಿ ॥
ಅಚ್ಯುತ ಮಾಧವ ಅಮೃತಾಚ್ಯಾ ಪಾಠೇ । ಲಾಗತಾಚೀ ವಾಟೇ ವಂದೀ ಯಮ ॥
ನಾಮಾ ಮ್ಹಣೆ ಹೋಶೀ ಜಿವಲಗ ವಿಷ್ಣೂಚಾ । ದಾಸ ತ್ಯಾ ಹರೀಚಾ ಆವಡತಾ ॥

ಜೀವ ಅಜ್ಞಾನಿ, ಶ್ರೀಹರಿ ಜ್ಞಾನಿ. ಶ್ರೀಹರಿಯು ಎಲ್ಲ ಪ್ರಾಣಿ ಮಾತ್ರಗಳಲ್ಲಿ ಸಮನಾಗಿ ತುಂಬಿಕೊಂಡಿರುತ್ತಾನೆಂಬ ಸತ್ಯವನ್ನು ನೀನು ಮನಗಂಡಿದ್ದಾದರೆ, ನೀನೇ ಬ್ರಹ್ಮನಾಗುವಿ. ಅಚ್ಯುತ ಮಾಧವ ಎಂಬ ನಾಮಾಮೃತವನ್ನು ಅಖಂಡ ಸೇವಿಸಿದ್ದಾದರೆ, ನೀನು ಶ್ರೀಹರಿ ವಿಷ್ಣುವಿನ ಪ್ರೇಮಳ ಭಕ್ತನಾಗುತ್ತಿಯೆಂದು ಸಂತನಾಮದೇವರು ಹೇಳುತ್ತಾರೆ.

೨೯) ಕಾ ಕರಿಸೀ ಸೊಸ ಮಾಯೇಚಾ ಅಸೋಸ । ನವ್ಹೇ ತುಜ ಸೌರಸ ನಾಮೇವೀಣ ॥
ನಾಮಚಿ ಹಾ ಮಂತ್ರ ನಾಮಚಿ ಹಾ ತಂತ್ರ । ನಾಮೇವೀಣ ಪವಿತ್ರ ನ ಹೋಸಿ ದೇಖಾ ॥
ತಿಹೀ ಲೋಕೀ ಪಾಹತಾ ನಾಮೇವೀಣ ಸರ್ವಥಾ । ಅಚ್ಯುತ ಮ್ಹಣತಾ ಪುಣ್ಯ ಕೋಟಿ ॥
ನಾಮಾ ಮ್ಹಣೇ ಬ್ರಹ್ಮ ಆದಿ ಅಂತಿ ನೇಮ । ತೇ ವಿಟೇವರೀ ಸಮ ಉಭೆ ಅಸೇ ॥

ಈ ಮಾಯಾ ಜಗತ್ತಿನಲ್ಲಿ ಕಷ್ಟಪಟ್ಟು ಸಂಶೋಧನೆ ಮಾಡಿದರೂ, ಸುಖದ ಲವಲೇಶವೂ ಸಿಗುವದಿಲ್ಲ. ಆದ್ದರಿಂದ ಭಗವನ್ನಾಮಸ್ಮರಣೆಯಿಂದಲೇ ಎಲ್ಲ ತಂತ್ರ-ಮಂತ್ರಗಳಾಗಿವೆಯೆಂಬ ವಿಶ್ವಾಸದಿಂದ ನಾಮ ಜಪಿಸು. ಅಂದರೆ ಮೂರೂ ಲೋಕಗಳಲ್ಲಿ ಪವಿತ್ರನಾಗುತ್ತೀ ಮತ್ತು ಅಪಾರ ಪುಣ್ಯ ಸಂಪಾದಿಸುತ್ತೀ. ಆದಿ ಅಂತ್ಯವಿಲ್ಲದ ಪರಬ್ರಹ್ಮನು ಸಗುಣ ಸಾಕಾರ ರೂಪದಲ್ಲಿ ಸಮ ಚರಣಾರವಿಂದನಾಗಿ ಇಟ್ಟಂಗಿ ಮೇಲೆ ನಿಂತಿದ್ದಾನೆಂದು ಸಂತ ನಾಮದೇವರು ಹೇಳುತ್ತಾರೆ.

೩೦) ಪವಿತ್ರ ಪರಿಕರ ನಾಮ ಹಾ ಉಚ್ಚಾರ । ಉದ್ಧರಣ ಸಾಚಾರ ಜಗಾ ಯಾ ॥
ಗೋವಿಂದ ಕೇಶವ ಉಚ್ಚಾರಾ ಶ್ರೀರಾಮ । ನ ಲಗತೀ ನೇಮ ಅಮುಪ ಜಪ ॥
ತೇ ಹೇ ವಿಠ್ಠಲ ರೂಪ ಪಿಕಲೇ ಪಂಢರೀ । ನಾಮ ಚರಾಚರೀ ವಿಠ್ಠಲ ಐಸೇ ॥
ನಾಮಾ ಮ್ಹಣೇ ವಿಠ್ಠಲ ಸರ್ವಾಂತ ಸಖೋಲ । ಉಚ್ಚಾರಿತಾ ಮೋಲ ನ ಲಗೇ ತುಜ ॥

ಗೋವಿಂದ, ಕೇಶವ, ಶ್ರೀರಾಮ ಈ ನಾಮಗಳು ಪವಿತ್ರ ಮತ್ತು ಪತಿತ-ಪಾವನವಿದ್ದು, ಜಗದೋದ್ಧಾರ ಮಾಡುವಂಥಹವು. ನಾಮ ಜಪಕ್ಕೆ ಸ್ನಾನಾದಿ ಬಂಧನಗಳಿಲ್ಲ. ಅವರವರಿಗೆ ಸಾಧ್ಯವಾದಷ್ಟು ಜಪ ಮಾಡಬಹುದು. ಪರಮಾತ್ಮನು ಪಂಢರಪುರದಲ್ಲಿ ವಿಠ್ಠಲ ನಾಮದಿಂದ ಪ್ರಕಟನಾಗಿದ್ದು, ಎಲ್ಲ ದೇವಾದಿಗಳ ವರಿಷ್ಠ ದೇವನಾಗಿದ್ದಾನೆಂದು ಸಂತ ನಾಮದೇವರು ಹೇಳುತ್ತಾರೆ.

೩೧) ಪೋಶಿಸೀ ಶರೀರ ಇಂದ್ರಿಯಾಂಚಾ ಬಾಧಾ । ಶೇಖೀ ತೇ ಆಪದಾ ಕರೀಲ ತುಜ ॥
ನವ್ಹೇ ತುಝೀ ಹಿತ ವಿಷಯ ಪೋಷಿತಾ । ಹರಿ ಹರಿ ಮ್ಹಣತಾ ಉದ್ದರಸೀ ॥
ವಾಯಾಚೀ ಪಾಲ್ಹಾಳ ಚರಿತ್ರ ಸಾಂಗಸೀ । ಪರೀ ರಾಮ ನ ಮ್ಹಣಸೀ ಅರೇ ಮೂಢಾ ॥
ನಾಮಾ ಮ್ಹಣೇ ಹೇಚಿ ಪಂಢರಿಯೇ ನಿಧಾನ । ಉಚ್ಚಾರಿತಾ ಜನ ತರಲೇ ಐಸೇ ॥

ಮಿತಿ ಇಲ್ಲಿದೇ ಶರೀರಕ್ಕೆ ಆಹಾರವನ್ನು ಪೂರೈಸಿದರೆ, ರೋಗಗಳ ಬಾಧೆಯಾಗಿ ನೀನು ಸಂಕಟಪಡಬೇಕಾಗುತ್ತದೆ. ಇಂದ್ರಿಯಗಳು ಬೇಡಿದ ವಸ್ತುಗಳನ್ನೆಲ್ಲಾ ನೀನು ಪೂರೈಸಿದರೆ ಆಪತ್ತಿಗೆ ಗುರಿಯಾಗುತ್ತೀ. ಇದನ್ನೆಲ್ಲಾ ಬಿಟ್ಟು ಹರಿಜಪ ಮಾಡಿದರೆ ಉದ್ಧಾರವಾಗುತ್ತೀ. ಕೀರ್ತನೆಯಲ್ಲಿ ಜನರಿಗೆ ಮನರಂಜನೆಯ ಕಥಾ ಚರಿತ್ರೆಗಳನ್ನು ಹೇಳುತ್ತೀ. ಆದರೆ ನೀನು ಮಾತ್ರ ಸ್ವತಃ ರಾಮಜಪವನ್ನು ಮಾಡುವುದೇ ಇಲ್ಲಾ. ಇದೇ ಮೂಢತನ. ಪಂಢರಪುರದಲ್ಲಿಯ ವಿಠ್ಠಲನ ನಾಮಸ್ಮರಣೆಯಿಂದ ಎಷ್ಟೋ ಜನರು ಉದ್ಧಾರವಾಗಿದ್ದಾರೆಂದು ಸಂತ ನಾಮದೇವರು ಹೇಳುತ್ತಾರೆ.

೩೨) ವಿಷಯ ಖಟಪಟ ಆಚಾರ ಸಾಂಗಸೀ । ವಿಠ್ಠಲ ನ ಭಜಸೀ ಅರೇ ಮೂಢಾ ॥
ಪೂರ್ಣ-ಬ್ರಹ್ಮ ಹರಿ ವಿಠ್ಠಲ ಶ್ರೀಹರಿ । ಅಂತೀ ಹಾ ನಿರ್ಧಾರೀ ತಾರೀಲ ಸತ್ಯ ॥
ನಲಗೇ ಸಾಯಾಸ ಕರಣೇ ಉಪವಾಸ । ನಾಮಾಚಾ ವಿಶ್ವಾಸ ಐಸಾ ಧರೀ ॥
ನಾಮಾ ಮ್ಹಣೆ ಪ್ರೇಮ ಧರೀ ತೂ ಸಪ್ರೇಮ । ವಿಠ್ಠಲ ಹಾಚಿ ನೇಮ ದಿನನಿಸೀ ॥

ಪ್ರಯತ್ನ ಪೂರ್ವಕವಾಗಿ ನಾನಾ ವಿಷಯ ಆಚಾರ-ವಿಚಾರಗಳನ್ನು ಕೀರ್ತನೆಯಲ್ಲಿ ಜನರಿಗೆ ಉತ್ತಮ ರೀತಿಯಲ್ಲಿ ಹೇಳುತ್ತಾರೆ. ಆದರೆ ಸ್ವತಃ ತಾವು ಏಕಾಂತದಲ್ಲಿ ವಿಠ್ಠಲನಾಮ ಜಪವನ್ನು ಮಾಡದೇ ಇರುವುದೇ ಮೂಢತನ. ಶ್ರೀಹರಿ ವಿಠ್ಠಲನು ಪೂರ್ಣ ಬ್ರಹನಿದ್ದು, ತನ್ನ ಭಕ್ತರನ್ನು ರಕ್ಷಿಸಲು ಸಮರ್ಥನಿದ್ದಾನೆ. ವಿಶ್ವಾಸವಿಟ್ಟು ನಾಮ ಜಪ ಮಾಡಿದ್ದಾದರೆ ಉಪವಾಸ ಇತ್ಯಾದಿ ದೇಹ ದಂಡನೆ ಅವಶ್ಯವಿಲ್ಲ. ಆದ್ದರಿಂದ ನೇಮದಿಂದ ಮತ್ತು ಪ್ರೇಮದಿಂದ ವಿಠ್ಠಲ ಭಜನೆ ಮಾಡಿರೆಂದು ಸಂತ ನಾಮದೇವರು ಹೇಳುತ್ತಾರೆ.

೩೩) ನವ್ಹೆ ತುಜ ಹಿತ ವಿಷಯ ಪೋಷಿತಾ। ಹರಿ ಹರಿ ಮ್ಹಣತಾ ತರಶೀಲ ॥
ಮಾಧವ ಶ್ರೀಹರಿ ಕೃಷ್ಣ ನರಹರಿ। ವೇಗೀ ಹಾ ಉಚ್ಚಾರೀ ಲವಲಾಹೀ ॥
ಘಡತೀಲ ಯಜ್ಞ ಪಾಪೇ ಹೋತೀಲ ಭಗ್ನ। ಪ್ರಪಂಚ ಸರ್ವಜ್ಞ ಹೋಯೀಲ ಬ್ರಹ್ಮ ॥
ನಾಮಾ ಮ್ಹಣೆ ಹರಿಕಥಾ ಹರೀ ಭವವ್ಯಥಾ। ಉದ್ಧರಸೀ ಸರ್ವಥಾ ಭಾಕ ಮಾಝೀ ॥

ಇಂದ್ರಿಯಗಳಿಗೆ ವಿಷಯ ವಸ್ತುಗಳನ್ನು ಪೂರೈಸುವುದು ಅಪಾಯಕಾರಿ. ಮಾಧವ ಶ್ರೀಹರಿ ಕೃಷ್ಣ ನರಹರಿ ಜಪದಿಂದ ಮಾತ್ರ ಉದ್ಧಾರ ; ಅಂದರೆ ಎಲ್ಲ ಪಾಪಗಳು ನಾಶವಾಗಿ ನೀನು ಸರ್ವಜ್ಞನಾಗುತ್ತೀ. ಶ್ರೀಹರಿ ಕಥಾ ಮತ್ತು ಶ್ರೀಹರಿ ಜಪ, ಇವುಗಳಿಂದ ಭವದುಃಖ ನಾಶವಾಗಿ ಎಲ್ಲರೂ ಉದ್ಧಾರವಾಗುವರು. ಇದು ನನ್ನ ಸತ್ಯ ವಚನವೆಂದು ಸಂತ ನಾಮದೇವರು ಹೇಳುತ್ತಾರೆ.

೩೪) ಉಪದೇಶ ಸುಗಮ ಆಯಿಕರೇ ಏಕ। ನಾಮ ಹೇ ಸಮ್ಯಕ ವಿಠ್ಠಲಾಚೇ ॥
ಜನೀ ಜನಾರ್ದನ ಭಾವಾಚೇ ಸಂಪನ್ನ। ವಿಠ್ಠಲ ಉದ್ಧರಣ ಕಲೀಮಾಜೀ ॥
ಸಾಧೇಲ ನಿಧಾನ ಪುರೇಲ ಮನೋರಥ। ನಾಮೇಚಿ ಕೃತಾರ್ಥ ಹೋಸೀ ಜನಾ ॥
ನಾಮಾ ಮ್ಹಣೇ ನಾಮ ಘೇಯೀ ತೂ ಝಡಕರೀ। ಪಾವಸೀ ನಿರ್ಧಾರೀ, ವೈಕುಂಠ-ಪದ ॥

ಶ್ರೀ ವಿಠ್ಠಲ ನಾಮದ ಜಪವೇ ಮುಖ್ಯವಾದದ್ದು. ಎಲ್ಲ ಜನರಲ್ಲಿ ಜನಾರ್ದನ ಇರುತ್ತಾನೆಂಬ ವಿಶ್ವಾಸವೇ ಮುಖ್ಯ. ಇಹ ಪರ ಎಲ್ಲ ಮನೋರಥಗಳನ್ನು ಪೂರೈಸಿಕೊಂಡು ವೈಕುಂಠಪದ ಪ್ರಾಪ್ತಿಗೆ ನಾಮಜಪ ಮತ್ತು ಸರ್ವಭೂತಗಳಲ್ಲಿ ಭಗವದ್ಭಾವ, ಇವುಗಳೇ, ನಿಮಗೆ ಸುಗಮ ಸಾಧನಗಳಾಗಿವೆಯೆಂದು ಸಂತ ನಾಮದೇವರು ಹೇಳುತ್ತಾರೆ.

ಶ್ರೀ ಸಂತ ನಾಮದೇವ ಮಹಾರಾಜರ ಆರತಿ

೧) ಜನ್ಮತಾ ಪಾಂಡುರಂಗೇ, ಜಿವ್ಹೆವರೀ ಲಿಹಿಲೇ ।
ಶತಕೋಟಿ ಅಭಂಗ ಕವಿತ್ವ ರಚಿಲೇ ॥ ೧ ॥

ಜಯ ಜಯಜೀ ಭಕ್ತರಾಯಾ ಜಿವಲಗ ನಾಮಯಾ ।
ಆರತಿ ಓವಾಳಿತಾ ಚಿತ್ತ ಪಾಲಟೆ ಕಾಯಾ ॥ ಧೃ ॥ಧೃ

ಪ್ರತ್ಯಕ್ಷ ಪ್ರಚೀತ ಹೇ ವಾಳುವಂಟ ಪರಿಸ ಕೇಲೇ ।
ಹಾರಪಲೀ ವಿಷಮತಾ ದ್ವೈತ ಬುದ್ಧಿ ನಿರಸಲಿ ॥ ೨ ॥ ಜಯ ಜಯಜೀ ॥

ಘ್ಯಾವಯಾ ಭಕ್ತಿ ಸುಖ ಪಾಂಡುರಂಗ ಅವತಾರ ।
ಕರೂನಿಯಾ ತೀರ್ಥಮಿಸೆ ಕೇಲಾ ಜಗಾಚಾ ಉದ್ಧಾರ ॥ ೩ ॥ ಜಯ ಜಯಜೀ॥

ಸಮಾಧಿ ಮಹಾದ್ವಾರಿ ಶ್ರೀ ವಿಠ್ಠಲ ಚರಣೀ ।
ಆರತೀ ಓವಾಳಿತೋ ಪರಿಸಾ ಕರ ಜೋಡೋನೀ ॥ ೪ ॥ ಜಯ ಜಯಜೀ ॥

೨) ಆರತಿ ನಾಮದೇವಾ । ಭಕ್ತಿ ಭೂಷಣಾಚಾ ಠೇವಾ ।
ಪಂಚಾರತಿ ಓವಾಳಿತೋ । ಘ್ಯಾವೀ ಮಾಝೀ ಹೀ ಸೇವಾ ॥ ಧೃ ॥

ಪಾಹೂನಿಯಾ ತವ ಭಕ್ತಿ । ಆನಂದಲೇ ರುಕ್ಮಿಣೀಪತಿ ।
ಗುಜ ಬೋಧಿಯಲೇ ಏಕಾಂತೀ । ದಿಲಾ ಕೃಪೇಚಾ ಠೇವಾ ॥ ೧ ॥ ಆರತಿ ॥

ತುಝೇ ಗುಣ ವರ್ಣವೇನಾ । ಉತರಾಯೀ ಹೋತಾ ದಿಸೇನಾ ।
ಶ್ರೀ ರಾಮ ಲಾಗೇ ಚರಣಾ । ವರ ಕೃಪೇಚಾ ದ್ಯಾವಾ ॥ ೨ ॥ ಆರತಿ ॥



ಶ್ರೀ ಸಂತ ತುಕಾರಾಮ ಮಹಾರಾಜರ ಹರಿಪಾಠ

೧) ನಮಿಲಾ ಗಣಪತಿ ಮಾವುಲಿ ಶಾರದಾ । ಆತ್ತಾ ಗುರುರಾಯಾ ದಂಡವತ ॥
ಗುರುರಾಯಾ ಚರಣೀ ಮಸ್ತಕ ಠೇವಿಲಾ । ಆಪುಲ್ಯಾ ಸ್ತುತೀಲಾ ದ್ಯಾವೀ ಮತೀ ॥
ಗುರುರಾಯಾ ತುಜ ಐಸಾ ನಾಹೀ ಸಖಾ । ಕೃಪಾ ಕರೂನಿ ರಂಕಾ ಧರೀ ಹಾತೀ ॥
ತುಕಾ ಮ್ಹಣೇ ಮಾತಾ ಪಿತಾ ಗುರು ಬಂಧು । ತೂಚೀ ಕೃಪಾಸಿಂಧು ಪಾಂಡುರಂಗಾ ॥

ಶ್ರೀ ಗಣಪತಿ, ಮಾತಾ ಶಾರದಾ ಮತ್ತು ಗುರುರಾಯನಿಗೆ, ದಂಡವತ ನಮಸ್ಕಾರಗಳು. ಹೇ, ಗುರುರಾಯಾ, ನಿನ್ನ ಪಾದಕಮಲಗಳಲ್ಲಿ ಮಸ್ತಕವನ್ನಿಟ್ಟು ಬೇಡಿಕೊಳ್ಳುವುದೇನೆಂದರೆ; ನಿನ್ನ ಸ್ತುತಿ ಮಾಡಲಿಕ್ಕೆ ನನಗೆ ಬುದ್ಧಿಯನ್ನು ಕೊಡು. ಹೇ ಗುರುರಾಯಾ, ನಿನ್ನಂಥ ಆಪ್ತ ಮಿತ್ರರು ಬೇರಾರೂ ಇಲ್ಲ ; ಹೀಗಾಗಿ ನೀನೇ ತಾಯಿ, ತಂದೆ, ಬಂಧು, ಗುರು ಆಗಿದ್ದು; ಕೃಪಾಸಿಂಧೂ ಪಾಂಡುರಂಗನೇ, ಈ ದೀನನನ್ನು ಕೈ ಹಿಡಿದು ನಡೆಸು ಎಂದು ಶ್ರೀ ಸಂತ ತುಕಾರಾಮರು ವಿನಂತಿಸುತ್ತಾರೆ.

೨) ಪಹಾಟೇಚ್ಯಾ ಪ್ರಹರೀ ಮ್ಹಣಾ ಹರಿಹರಿ । ತಯಾ ಸುಖಾ ಸರೀ ನಾಹೀ ದುಜೀ ॥
ಕೇಶವ, ವಾಮನ, ನಾರಾಯಣ ವಿಷ್ಣು । ಕೃಷ್ಣ ಸಂಕರ್ಷಣ ರಾಮರಾಮ ॥
ಮಾಧವಾ ವಾಮನಾ ಶ್ರೀಧರಾ, ಗೋವಿಂದಾ । ಅಚ್ಯುತಾ, ಮುಕುಂದಾ ಪುರುಷೋತ್ತಮಾ ॥
ನರಹರಿ ಭಾರ್ಗವಾ ಗೋಪಾಳಾ ವಾಸುದೇವಾ । ಹೃಷಿಕೇಶಿ ಪಾವ ಸ್ಮರಣ ಮಾತ್ರೇ ॥
ತುಕಾಮ್ಹಣೇ ಏಕಾ ನಾಮೀ ಭಾವ ರಾಹೇ । ತೇವ್ಹಾ ಹೋಯ ಸಾಹ್ಯ ಪಾಂಡುರಂಗ ॥

ಸೂರ್ಯೋದಯಕ್ಕಿಂತ ಮೊದಲು ಎದ್ದು, ಹರೀಹರಿ ನಾಮ ಜಪ ಮಾಡುವದರಿಂದ ಅಪಾರ ಸುಖ ಲಭಿಸುತ್ತದೆ. ಕೇಶವ ವಾಮನ ನಾರಾಯಣ, ಕೃಷ್ಣ ರಾಮ ವಾಸುದೇವ ಹೀಗೆ ಸ್ಮರಣ ಮಾತ್ರದಿಂದ ಅನುಗ್ರಹವಾಗುತ್ತದೆ. ಮೇಲೆ ಹೇಳಿದ ಹೆಸರುಗಳಲ್ಲಿ ಯಾವುದಾದರೂ ಒಂದು ಹೆಸರಿನಲ್ಲಿ ವಿಶ್ವಾಸವಿದ್ದರೂ ಪಂಢರೀರಾಯನು ಕೃಪೆ ಮಾಡುತ್ತಾನೆ.

೩) ಅಯೋಧ್ಯಾ ಮಥುರಾ ಕಾಶೀ ಅವಂತಿಕಾ । ಕಾಂಚೀ ಹೇ ದ್ವಾರಕಾ ಮಾಯಾ ಸತ್ಯ ॥
ಮೋಕ್ಷ ಪುರ್ಯಾ ಐಶಾ ನಿತ್ಯ ವಾಚೇಸ್ಮರೇ । ಪ್ರಾಣ ತೋ ಉದ್ಧರೇ ಸ್ಮರಣ ಮಾತ್ರೆ ॥
ನಿತ್ಯ ನಿತ್ಯ ಮನೀ ಹರೀ ಆಠವಾವಾ । ತೇಣೆಚೀ ತರಾವಾ ಭವಸಿಂಧು ॥
ತುಕಾ ಮ್ಹಣೇ ಐಸಾ ನಾಮಾಚಾ ಮಹಿಮಾ । ರಾಹೀಲ ಜೋ ನೇಮಾ ತೋಚಿ ಧನ್ಯ ॥

ಅಯೋಧ್ಯಾ, ಮಥುರಾ, ಕಾಶೀ, ಅವಂತಿಕಾ, ಕಾಂಚೀ, ದ್ವಾರಕಾಪುರಿ, ಮತ್ತು ಮಾಯಾವತಿ ಇವು ಮೋಕ್ಷಪುರಿಗಳೆಂದು ಪ್ರಸಿದ್ಧವಿದ್ದು, ನಿತ್ಯ ಸ್ಮರಣೆ ಮಾತ್ರದಿಂದ ಜನರು ಉದ್ಧಾರವಾಗುತ್ತಾರೆ. ನಿತ್ಯ ನೇಮದಿಂದ ಹರಿನಾಮ ಸ್ಮರಣೆ ರೂಢಿಸಿಕೊಂಡವನೇ ಧನ್ಯನು, ಮತ್ತು ಅವನೇ ಭವಸಾಗರ ದಾಟುತ್ತಾನೆಂದು ಶ್ರೀ ಸಂತ ತುಕಾರಾಮರು ಹೇಳುತ್ತಾರೆ.

೪) ಯಮುನಾ ಕಾವೇರಿ ಗಂಗಾ ಭಾಗೀರಥೀ । ಕೃಷ್ಣಾ ಸರಸ್ವತಿ ತುಂಗಭದ್ರಾ ॥
ನರ್ಮದಾ ಆಠವೀ ವೇಳೋವೇಳ ವಾಚೆ । ನಾಹೀ ಭಯಸಾಚೇ ಪ್ರಾಣಿಯಾಸೀ ॥
ಜಯಾಚೇ ಸಂಗತೀ ಪ್ರಾಣೀ ಉದ್ಧರತೀ । ದರ್ಶನೇಚ ಹೋತೀ ಮುಕ್ತಿ ಪ್ರಾಪ್ತ ॥
ತುಕಾಮ್ಹಣೆ ನಾಮೀ ಏಕನಿಷ್ಠ ಭಾವ । ತೇಥೇ ವಾಸುದೇವ ಸರ್ವಕಾಳ ॥

ಯಮುನಾ, ಕಾವೇರಿ, ನರ್ಮದಾ ಇತ್ಯಾದಿ ಮೇಲೆ ಹೇಳಿದಂತೆ ಪವಿತ್ರ ನದಿಗಳನ್ನು, ಪುನಃ ಪುನಃ ಸ್ಮರಿಸುವದರಿಂದ ಮನುಷ್ಯರಿಗೆ ಯಾವ ಭಯವೂ ಇಲ್ಲಾ, ಈ ಪವಿತ್ರ ನದಿಗಳ ತೀರ್ಥಯಾತ್ರೆ, ದರ್ಶನ ಮಾತ್ರದಿಂದ ಮೋಕ್ಷ ಪ್ರಾಪ್ತವಾಗುತ್ತದೆ. ಏಕನಿಷ್ಠ ಭಾವವಿದ್ದಲ್ಲಿ ವಾಸುದೇವನ ವಾಸ್ತವ್ಯವಿರುತ್ತದೆಂದು ಶ್ರೀ ಸಂತ ತುಕಾರಾಮರು ಹೇಳುತ್ತಾರೆ.

೫) ಪ್ರಾತಃಕಾಳೀ ನಾಮ ಪವಿತ್ರಚಿ ಘ್ಯಾವೇ । ತೇಣೆ ವಿಸರಾವೇ ಜನ್ಮ ಮೃತ್ಯು ॥
ನಳ ಯುಧಿಷ್ಠಿರ ಜನಕ ಜನಾರ್ದನ । ಸ್ಮರಣೇಚಿ ಧನ್ಯ ಹೋತೀ ಪ್ರಾಣೀ ॥
ನ ಕರಾ ಆಳಸ ನಾಮ ಘೇತಾ ವಾಚೇ । ನಾಹೀ ಭಯ ಸಾಚೇ ಪ್ರಾಣಿಯಾಸೀ ॥
ತುಕಾಮ್ಹಣೇ ವಾಚೇ ಗಾಯಿಲ ಗೋವಿಂದ । ಹೋಯಿಲ ಪರಮಾನಂದ ನಾಮೇ ಏಕಾ ॥

ಪ್ರಾತಃಕಾಲದಲ್ಲಿ ಪವಿತ್ರವಾದ ನಾಮಜಪದಿಂದ ಜನನ ಮರಣ ಇಲ್ಲದಂತಾಗುತ್ತದೆ. ನಳ, ಯುಧಿಷ್ಠಿರ, ಜನಕ ಜನಾರ್ದನ ಇವರ ಸ್ಮರಣ ಮಾತ್ರದಿಂದ ಜನರು ಧನ್ಯರಾಗುತ್ತಾರೆ. ಆಲಸ್ಯವನ್ನು ತೊರೆದು ನಾಮಜಪ ಮಾಡುವದರಿಂದ ಪರಮಾನಂದ ಪ್ರಾಪ್ತವಾಗುವದೆಂದು ಸಂತ ತುಕಾರಾಮರು ಹೇಳುತ್ತಾರೆ.

೬) ಕಶ್ಯಪ ಗೌತಮ ಭಾರಧ್ವಾಜ ಅತ್ರಿ । ಋಷಿ ವಿಶ್ವಾಮಿತ್ರ ನಾಮ ಥೋರ ॥
ಜಮದಗ್ನಿ ಮುನಿ ವಶಿಷ್ಠ ವರ್ಣಿಲಾ । ತಿಹೀ ಲೋಕೀ ಝಾಲಾ ವಂದ್ಯ ಏಕ ॥
ನಾಮ ಘೇತಾ ನುರೇ ಪಾಪ ತಾಪ ದೈನ್ಯ । ಹೋಯ ಥೋರ ಪುಣ್ಯ ಉಚ್ಚಾರಿತಾ ॥
ತುಕಾಮ್ಹಣೇ ಐಸೀ ಉಚ್ಚಾರಿತಾ ವಾಣೀ । ತೇಥೇ ಅಂತಃಕರಣೀ ಸುಖಹೋಯ ॥

ಕಶ್ಯಪ, ಗೌತಮ, ಜಮದಗ್ನಿ, ವಶಿಷ್ಠ ಈ ಎಲ್ಲ ಋಷಿಮುನಿಗಳು ಜಗದ್ವಂದ್ಯರಿದ್ದು, ಇವರ ನಾಮ ಮಾತ್ರದಿಂದ ಪಾಪ, ತಾಪ, ದರಿದ್ರತನ ನಷ್ಟವಾಗಿ, ಅಪಾರ ಪುಣ್ಯ ಪ್ರಾಪ್ತವಾಗುತ್ತದೆಯಲ್ಲದೇ, ಅಂತರಂಗ ಸುಖವು ಲಭಿಸುತ್ತದೆಂದು ಶ್ರೀ ಸಂತ ತುಕಾರಾಮರು ಹೇಳುತ್ತಾರೆ.

೭) ಅಹಿಲ್ಯಾ ದ್ರೌಪದೀ ಸೀತಾ ತಾರಾ । ಮುಖ್ಯ ಮಂಡೋದರೀ ಪತಿವ್ರತಾ ॥
ನಾಮೇ ಘೇತಾ ತ್ಯಾಂಚೀ ವಾಣೀ ಹೇ ಪವಿತ್ರ । ಹೋಯ ಕುಳ ಗೋತ್ರ ಉದ್ಧರಣ
ಸಂಕಲ್ಪ ವಿಕಲ್ಪ ಸಾಂಡೋನಿಯಾ ದುರೀ । ವಾಚೇ ಹರಿ ಹರಿ ಉಚ್ಚಾರಾವೇ
ನಾಹೀ ಬದ್ಧಕತಾ ತಯಾ ಸಂಸಾರಾಚೀ । ಜಾಚಣೀ ಯಮಾಚೀ ಮಗ ಕೈಂಚಿ ॥
ತುಕಾಮ್ಹಣೆ ನಾಮ ಪವಿತ್ರಚಿ ವಾಚೇ । ತೇಣೆ ಹೋಯ ಸಾಚೇ ಜನ್ಮಫಳ ॥

ಅಹಿಲ್ಯಾ, ದ್ರೌಪದಿ, ಸೀತಾ, ತಾರಾ, ಮಂಡೋದರಿ, ಪಂಚ ಪತಿವ್ರತೆಯರ ನಾಮ ಜಪಿಸುವದರಿಂದ ಕುಲಗೋತ್ರ ಉದ್ಧಾರವಾಗುತ್ತದೆ. ನಾನಾ ವಿಕಲ್ಪಗಳನ್ನು ದೂರ ಮಾಡಿ ವಿಶ್ವಾಸದಿಂದ ದೇವರ ನಾಮಸ್ಮರಣೆ ಮಾಡಿದ್ದಾದರೆ ಯಮಯಾತನೆ ಮತ್ತು ಸಂಸಾರ ಭಯದಿಂದ ಮುಕ್ತರಾಗುವಿರೆಂದು ಸಂತ ತುಕಾರಾಮರು ಹೇಳುತ್ತಾರೆ.

೮) ವ್ಯಾಸ ಅಂಬರೀಷ ವಶಿಷ್ಠ ನಾರದ । ಶೌನಕ ಪ್ರಲ್ಹಾದ ಭಾಗವತ ॥
ನಿತ್ಯ ಸ್ಮರಣ ಕರೀ ಯಾಂಚೇ ಜರೀ ಪ್ರಾಣೀ । ಪುನ್ಹಾ ನಾಹೀ ಖಾಣೀ ಚೌರ್‍ಯಾಂಶೀಚೇ ॥
ಶುಕ ಪರಾಶರ ಮುನಿ ಪುಂಡಲೀಕ । ಅರ್ಜುನ ವಾಲ್ಮೀಕ ನಾಮ ಗಾತೀ ॥
ಬಳೀ ವಿಭೀಷಣ ಭೀಷ್ಮ ಋಕ್ಮಾಂಗದ । ಬಕದಾಲ್ಭ್ಯ ಶುದ್ಧ ಮಹಾಋಷಿ ॥
ತುಕಾಮ್ಹಣೇ ಯಾಂಚೀ ನಾಮೇ ಯೇತಾ ವಾಣೀ । ಪ್ರತ್ಯಕ್ಷ ತೋ ಪ್ರಾಣೀ ದೇವಾ ಐಸಾ ॥

ವ್ಯಾಸ, ಅಂಬರೀಷ, ವಶಿಷ್ಠ, ನಾರದ, ಶೌನಕ, ಪ್ರಲ್ಹಾದ ಇವರು ಶ್ರೇಷ್ಠ ಭಾಗವತ ಭಕ್ತರಿದ್ದು ನಿತ್ಯ ಸ್ಮರಣೆ ಮಾಡಿದರೆ ಜೀವನು ಎಂಭತ್ನಾಲ್ಕು ಯೋನಿಗಳ ತಿರುಗಾ

ತಪ್ಪಿಸಿಕೊಳ್ಳುತ್ತಾನೆ. ಶುಕ, ಪರಾಶರ, ಪುಂಡಲೀಕ, ಬಕದಾಲ್ಭ್ಯ ಇವರು ಶ್ರೇಷ್ಠ ಋಷಿ ಮುನಿಗಳು. ಅರ್ಜುನ, ವಾಲ್ಮೀಕ ಬಳೀರಾಜಾ, ವಿಭೀಷಣ, ಭೀಷ್ಮಾಚಾರ್ಯ, ರುಕ್ಮಾಂಗದ ಇವರು ಮಹಾನ್ ಭಗವದ್ಭಕ್ತರು. ಇವರೆಲ್ಲರ ನಾಮ ಮಾತ್ರದಿಂದ ನರನು ದೇವರ ಸಮಾನನಾಗುತ್ತಾನೆಂದು ಸಂತ ತುಕಾರಾಮರು ಹೇಳುತ್ತಾರೆ.

೯) ಗೀತಾ ಭಾಗವತ ವೇದ ಉಚ್ಚಾರಿತಾ । ಪಾಪಾಚೀ ತೋ ವಾರ್ತಾ ಕೋಠೆ ರಾಹೇ ॥
ಸಕಳ ವಾಸನಾ ನಾಮೀ ಜೇ ರಂಗಲೀ । ಸಾಧನೇ ರಾಹಿಲೀ ಮಗ ಕೈಂಚೀ ॥
ಮ್ಹಣೋನಿಯಾ ನೇಮ ಐಸಾ ತಾರೀ ಜೀವಾ । ಹೋಯ ತೋಚಿ ದೇವಾ ಆವಡತಾ ॥
ಉಗವಲಾ ದಿವಸ ಜಾಯ ತೋ ಕ್ಷಣಾತ । ವಿಚಾರೂನೀ ಹಿತ ವೇಗೀ ಕರಾ ॥
ತುಕಾಮ್ಹಣೇ ಸ್ಮರಾ ವೇಗೀ ವಿಠೋಬಾಸೀ । ನ ಧರಾ ಮಾನಸೀ ದುಜೇ ಕಾಹೀ ॥

ಭಗವದ್ಗೀತಾ ಮತ್ತು ಭಾಗವತ ಅಂದರೆ, ಕೃಷ್ಣ ಪರಮಾತ್ಮನಿಂದ ಅರ್ಜುನಿಗೆ ಮತ್ತು ಉದ್ಧವನಿಗೆ ಮಾಡಿದ ಉಪದೇಶಗಳನ್ನೇ ಅಳವಡಿಸಿದ ಮಹಾ ಪವಿತ್ರ ಗ್ರಂಥಗಳು. ಇವುಗಳ ನಾಮ ಮಾತ್ರದಿಂದ ಪಾಪನಾಶವಾಗುತ್ತದೆ. ಯಾವ ಮನುಷ್ಯನಿಗೆ ಭಗವದ್ಭಕ್ತಿ ಮತ್ತು ನಾಮಜಪ ರುಚಿಸಿದೆಯೋ, ಅವನಿಗೆ ಅನ್ಯ ಯಾವ ಸಾಧನೆಯಿಲ್ಲದೇ ದೇವರ ಅನುಗ್ರಹವಾಗುತ್ತದೆ. ದಿವಸೇ ದಿವಸ ಆಯುಷ್ಯ ವ್ಯರ್ಥ ಹೋಗುತ್ತಿದೆ. ಆದ್ದರಿಂದ ಸಾರಾಸಾರ ವಿಚಾರ ಮಾಡಿರಿ; ಮತ್ತು ನಿಮ್ಮ ಮನಸ್ಸಿನಲ್ಲಿ ವಿಠ್ಠಲ ಸ್ಮರಣೆ ಹಿಡಿದಿಟ್ಟುಕೊಳ್ಳಿರೆಂದು ಸಂತ ತುಕಾರಾಮರು ಹೇಳುತ್ತಾರೆ.

೧೦) ತೀರ್ಥಾಚೇ ಜೇ ಮೂಳ ವ್ರತಾಚೇ ಜೇ ಫಳ । ಬ್ರಹ್ಮ ತೇ ಕೇವಳ ಪಂಢರಿಯೇ ॥
ತೇ ಆಮ್ಹೀ ದೇಖಿಲೇ ಆಪುಲೇ ನಯನೀ । ಫಿಟಲೀ ಪಾರಣೀ ಲೋಚನಾಂಚೀ ॥
ಜೀವೀಚಾ ಜಿವ್ಹಾಳಾ ಸುಖಾಚಾ ಶೇಜಾರ । ಉಭೇ ಕಟೀ ಕರ ಠೇವೂನಿಯಾ ॥
ಜಗಾಚಾ ಜನಿತಾ ಕೃಪೇಚಾ ಸಾಗರ । ದೀನಾಂ ಲೋಭಪರ ದುಷ್ಟಾ ಕಾಳ ॥
ಸುರವರಾ ಚಿಂತನೀ ಮುನಿವರಾ ಧ್ಯಾನೀ । ಆಕಾರ ನಿರ್ಗುಣೀ ತೋಚಿ ಅಸೇ ॥
ತುಕಾಮ್ಹಣೇ ನಾಹೀ ಶೃತಿ ಆತುಡಲೇ । ಆಮ್ಹಾ ಸಾಪಡಲೇ ಗೀತೀ ಗಾತಾ ॥

ಎಲ್ಲ ತೀರ್ಥಗಳ ಜನಕ, ಎಲ್ಲ ವ್ರತಗಳ ಫಲದಾತಾ ಹಾಗೂ ಪರಬ್ರಹ್ಮನೆಂದರೆ ಪಂಢರಪುರದ ವಿಠ್ಠಲ ಮಾತ್ರ. ಆ ದೇವನನ್ನು ನನ್ನ ಕಣ್ಣಿನಿಂದ ನೋಡಿ ಸಂತೋಷಪಟ್ಟೆನು.

ಎಲ್ಲ ಜೀವಿಗಳ ಮೂಲಸ್ಥಾನ ಮತ್ತು ಸುಖದ ವಾಸಸ್ಥಾನವಾದ ದೇವನು ಟೊಂಕದ ಮೇಲೆ ಕೈ ಇಟ್ಟುಕೊಂಡು ನಿಂತಿದ್ದಾನೆ. ಈ ದೇವನು ಜಗತ್ತಿನ ಜನಕ, ಕೃಪೆಯಸಾಗರ, ದೀನ ದರಿದ್ರರ ವಿಷಯದಲ್ಲಿ ಅತೀ ದಯಾಳು, ಆದರೆ ದುಷ್ಟರ ವಿಷಯದಲ್ಲಿ ಮಹಾಕಠೋರನಾಗಿದ್ದಾನೆ. ಮಹಾದೇವರು ಸಹಿತ ಎಲ್ಲ ದೇವರುಗಳು ಹಾಗೂ ಋಷಿ-ಮುನಿಗಳು ಇವನನ್ನೇ ಚಿಂತಿಸುತ್ತಾರೆ. ಇವನು ಮೂಲತಃ ನಿರ್ವಿಕಲ್ಪನಿದ್ದು; ನಿರ್ಗುಣನು ಇವನೇ, ಸಗುಣನೂ ಇವನೇ. ಜ್ಞಾನದಲ್ಲಿ ಶ್ರೇಷ್ಠವೆನಿಸಿಕೊಂಡ ಶೃತಿಗಳಿಗೂ ಕೂಡ, ಇವನ ನಿಜಸ್ವರೂಪ ತಿಳಿದಿಲ್ಲವಾದರೂ, ನಮಗೆ ಗೀತ ನೃತ್ಯದಿಂದ ಸಹಜವಾಗಿ ಪ್ರಾಪ್ತನಾದನೆಂದು ಸಂತ ತುಕಾರಾಮರು ಹೇಳುತ್ತಾರೆ.

೧೧) ರಾಜಸ ಸುಕುಮಾರ ಮದನಾಚಾ ಪುಥಳಾ । ರವಿ ಶಶಿಕಳಾ ಲೋಪಲಿಯಾ ॥
ಕಸ್ತೂರಿ ಮಳವಟ ಚಂದನಾಚೀ ಉಟೀ । ರೂಳೇ ಮಾಳ ಕಂಠೀ ವೈಜಯಂತೀ ॥
ಮುಕುಟ ಕುಂಡಲೇ ಶ್ರೀಮುಖ ಶೋಭಲೇ । ಸುಖಾಚೆ ಓತಲೇ ಸಕಳಹೀ ॥
ಕಾಸೇ ಸೋನಸಳಾ ಪಾಂಘರೇ ಪಾಠೋಳಾ । ಘನ ನೀಳಾ ಸಾವಳಾ ಬಾಯಿಯಾನೊ ॥
ಸಕಳಹೀ ತುಮ್ಹೀ ಹ್ವಾಗೇ ಏಕೀಸವಾ । ತುಕಾಮ್ಹಣೇ ಜೀವಾ ಧೀರ ನಾಹೀ ॥

ಮೇಘ-ಶ್ಯಾಮ ಸುಂದರ ಸುಕುಮಾರ, ಮದನ ಮೂರ್ತಿ ಸ್ವರೂಪನಾದ, ಸೂರ್ಯನ ತೇಜಸ್ಸಿಗಿಂತಲೂ ಅಪರಂಪಾರ ತೇಜಸ್ವಿಯಾದ, ಚಂದ್ರನಿಗಿಂತಲೂ ಹೆಚ್ಚಿಗೆ ಸೀತಲವಾದ, ಹಣೆಯ ಮೇಲೆ ಕಸ್ತೂರಿ ಮಿಶ್ರಣ ಲೇಪನ, ಮೈಮೇಲೆ ಚಂದನ ಲೇಪನ, ಕೊರಳಲ್ಲಿ ತುಳಸೀ ಮಾಲೆ, ಕಿರೀಟ-ಕುಂಡಲಗಳಿಂದ ಶೋಭಿಸುವ ಮುಖ, ರೇಷ್ಮೀ ಭರಜರೀ ಪಿತಾಂಬರ ಉಟ್ಟು, ಮೈಮೇಲೆ ಶೆಲ್ಲೆ ಹೊದಿಸಿದ, ಪಂಢರಿನಾಥನನ್ನು ಕಣ್ಣುತುಂಬ ನೋಡಬೇಕೆಂಬ ತೀವ್ರವಾದ ಇಚ್ಛೆಯಾದ್ದರಿಂದ, ದೇವರನ್ನು ಮರೆ ಮಾಡಿ ನನ್ನ ಮುಂದೆ ನಿಂತ ಭಕ್ತರೆಲ್ಲಾ, ಒಂದು ಬಾಜೂಗೆ ಸರಿಯಿರೆಂದು ಸಂತ ತುಕಾರಾಮರು ಹೇಳುತ್ತಾರೆ.

೧೨) ಆವಡೆ ಹೇ ರೂಪ ಗೋಜಿರೇ ಸಗುಣ । ಪಾಹತಾ ಲೋಚನ ಸುಖಾವಲೇ ॥
ಆತಾ ದೃಷ್ಟಿಪುಢೇ ಐಸಾಚಿ ತೂ ರಾಹೇ । ಜೋ ಮೀ ತುಜ ಪಾಹೇ ಪಾಂಡುರಂಗಾ ॥
ಲಾಚಾವಲೇ ಮನ ಲಾಗಲೀಸೆ ಗೋಡೀ । ತೇ ಜೀವೇ ನ ಸೋಡೀ ಐಸೇ ಝಾಲೇ ॥
ತುಕಾಮ್ಹಣೇ ಆಮ್ಹೀ ಮಾಗಾವೇ ಲಡಿವಾಳೀ । ಪುರವಾವೀ ಆಳಿ ಮಾಯಬಾಪೇ ॥

ಹೇ ದೇವಾ, ನಿನ್ನ ಸುಂದರ ಸಗುಣ ಸಾಕಾರ ರೂಪವನ್ನು ನೋಡಿ ನನ್ನ ಕಣ್ಣುಗಳಿಗೆ ಸುಖವೆನಿಸಿ, ಅವು ಮುಗ್ಧಗೊಂಡಿವೆ. ಹೇ ಪಾಂಡುರಂಗಾ, ನಾನು ನೋಡುತ್ತಿರುವವರೆಗೂ, ನನ್ನ ಎದುರಿಗೆ ಇದೇ ರೂಪದಲ್ಲಿ ನಿಂತುಕೊಳ್ಳು. ನಿನ್ನ ಈ ರೂಪಕ್ಕೆ ನನ್ನ ಮನಸ್ಸು ಸೋತು ಹೋಗಿದೆಯಲ್ಲದೆ, ಜೀವಭಾವದಿಂದ ಅಂದರೆ ಹೃದಯಾಂತರಾಳದಿಂದ ನಿನ್ನ ಈ ರೂಪವು ಸ್ಥಿರವಾಗಿದ್ದು ಮರೆಯದಂತಾಗಿದೆ. ಹೇ ದೇವಾ, ನಿನ್ನ ಈ ಪ್ರಿಯ ಭಕ್ತರು ಬೇಡುವ ಅವಶ್ಯಕತೆಗಳನ್ನೆಲ್ಲಾ ತಂದೆ-ತಾಯಿಯಂತಿರುವ ನೀನು ಪೂರೈಸಲೇಬೇಕೆಂದು ಸಂತ ತುಕಾರಾಮರು ಪಾಂಡುರಂಗನಿಗೆ ವಿನಂತಿಸುತ್ತಾರೆ.

೧೩) ಶಂಖ ಚಕ್ರ ಗದಾ ರೂಳೇ ವೈಜಯಂತೀ । ಕುಂಡಲೇ ತಳಪತೀ ದೋನ್ಹೀ ಕಾನೀ ॥
ಮಸ್ತಕೀ ಮುಕುಟ ನವರತ್ನ ಹಾರ । ವರೀ ಪೀತಾಂಬರ ಪಾಂಘುರಲಾ ॥
ರತ್ನ ಹೀರೇಜಡಿತ ಕಟೀ ಕಡದೋರಾ । ರಮ್ಯ ಶೋಭೆ ಹಿರಾ ಬೇಂಬೀಪಾಸೀ ॥
ಜಡಿತ ಕಂಕಣ ಕರ್ಣ ಶೋಭೆ ಮುದ್ರಿಕಾ । ಲಾಚಾವಲಾ ತುಕಾ ಭೇಟಿಸಾಟೀ ॥

ಶಂಖ ಚಕ್ರ, ಗದಾ, ತುಳಸೀಹಾರ, ಎರಡೂ ಕಿವಿಗಳಲ್ಲಿ ಮೀನದಾಕಾರದ ಕುಂಡಲಗಳು, ತಲೆಯ ಮೇಲೆ ಕಿರೀಟ, ಕೊರಳಲ್ಲಿ ನವರತ್ನ ಹಾರ, ಪೀತಾಂಬರಧಾರಿ, ರತ್ನ ವಜ್ರ ಖಚಿತ ಉಡದಾರ, ಹೊಕ್ಕಳದ ಹತ್ತಿರದ ದೊಡ್ಡ ರತ್ನ ಇವೆಲ್ಲವುಗಳಿಂದ ಶೋಭಿಸುವ ಪಾಂಡುರಂಗನನ್ನು ನೋಡುವ ಇಚ್ಛೆ ತೀವ್ರವಾಗಿದೆಯೆಂದು ಸಂತ ತುಕಾರಾಮರು ಹೇಳುತ್ತಾರೆ.

೧೪) ನೇಣೇ ಜಪ ತಪ ಯೋಗ ಯುಕ್ತಿ ಧ್ಯಾನ । ಕರಿತೋ ಚಿಂತನ ರಾತ್ರಂದಿವಸ ॥
ನೇಣೆ ಕಾಂಹೀ ದೇವಾ ಝಾಲೋ ಉತರಾಯೀ । ಮಾಗೇ ಲಾಗೋ ಪಾಹೀ ಬಾಳ ಜೈಸಾ ॥
ಅಣುನಿಯಾ ಶುದ್ಧ ಉದಕ ತೇ ಪಾಹೇ । ಪ್ರಕ್ಷಾಳಿಲೇ ಪಾಯ ವಿಟೇಸಹಿತ ॥
ಜನ್ಮಲೀ ಜಾಹ್ನವೀ ಜ್ಯಾತಾಯೀ ಉತ್ತಮ । ಹರಾವಯಾ ಶ್ರಮ ಭಾವಿಕಾಂಚೇ ॥
ತುಕಾಮ್ಹಣೆ ಆಮ್ಹೀ ಝಾಲೋ ಪುಣ್ಯವಂತ । ಸೇವಿಲೇ ಅಮೃತ ರಾಮತೀರ್ಥ ॥

ದೇವಾ ಜಪ, ತಪ, ಯೋಗ, ಯುಕ್ತಿ, ಧ್ಯಾನ, ಇವುಗಳ ಸಾಧನೆ ನನಗೆ ಗೊತ್ತಿಲ್ಲ. ರಾತ್ರಂದಿವಸ ನಿನ್ನ ಚಿಂತನೆ ಮಾಡುತ್ತೇನೆ. ಹೇ ದೇವಾ, ಇಷ್ಟರಿಂದ ಮಾತ್ರ ನಿನ್ನ ಉಪಕಾರದ ಋಣದಿಂದ ಮುಕ್ತನಾದೆನೋ ಏನೂ ತಿಳಿದಿಲ್ಲ; ಚಿಕ್ಕ ಬಾಲಕನು ಪ್ರತಿಯೊಂದಕ್ಕೂ ತಾಯಿಯ ಮೇಲೆ ಭಾರ ಹಾಕಿ ತಾಯಿಯನ್ನೇ ಅನುಸರಿಸುವಂತೆ, ನಾನು ನಿನ್ನನ್ನೇ ಅವಲಂಬಿಸಿದ್ದೇನೆ.

ನನ್ನ ಆಳಲು ಸೇವೆಯೆಂದರೆ, ಶುದ್ಧ ನೀರಿನಿಂದ ನಿನ್ನ ಪಾದಗಳನ್ನು ತೊಳೆದು ಪಾದೋದಕ ಪ್ರಸಾದವೆಂದು ಸೇವಿಸುವದು. ನಿನ್ನ ಪಾದದ ಮಾಹಾತ್ಮೆ ಏನಂದರೆ, ಅನಂತ ಜೀವ ರಾಶಿಗಳಿಗೆ ತೃಪ್ತಿ ಕೊಡುವಂತಹ ಗಂಗಾನದಿಯಂತೆ, ಎಲ್ಲ ಪವಿತ್ರ ನದಿಗಳು ನಿನ್ನ ಪಾದಗಳಲ್ಲಿ ಜನಿಸಿವೆ. ಹೇ ದೇವಾ, ನಿನ್ನ ನಾಮಾಮೃತವೆಂಬ ತೀರ್ಥವನ್ನು ಸದಾ ಸೇವಿಸುತ್ತಾ, ಅಪಾರ ಪುಣ್ಯ ಸಂಪಾದಿಸಿ ಪವಿತ್ರರಾಗಿದ್ದೇವೆಂದು ಸಂತ ತುಕಾರಾಮರು ಹೇಳುತ್ತಾರೆ.

೧೫) **ಪರಿಮಳ ಮಿಶ್ರಿತ ಕರೂನಿ ಉಟಣೇ । ನಾರಾಯಣ ತೇಣೇ ತೋಷವಿಲಾ ॥**
ಪಯ ಘೃತ ದಧೀ ಮಧು ತೇ ಶರ್ಕರಾ । ಗೋಶೃಂಗಧಾರಾ ಅಖಂಡಿತ ॥
ಕರೋನಿ ಸಂಯುಕ್ತ ಓಪಿಯಲೀ ಈಶಾ । ಪಂಚಾಮೃತೇ ತೈಸೀ ಪಂಚವಿಧ ॥
ತುಕಾಮ್ಹಣೇ ಜೇಥೇ ಗಂಗೇ ಜನ್ಮ ಝಾಲಾ । ಪ್ರಸಾದ ದಿಧಲಾ ಆಮ್ಹಾಲಾಗೀ ॥

ಸುಗಂಧ ದ್ರವ್ಯಗಳಿಂದ ತಯಾರಾದ ವಿಶ್ರಣವನ್ನು, ದೇವರ ಶರೀರಕ್ಕೆಲ್ಲಾ ಹಚ್ಚಿ, ಶುದ್ಧೋದಕ ಸ್ನಾನ ಮಾಡಿಸುವದರಿಂದ ನಾರಾಯಣನು ಸಂತೋಷಗೊಳ್ಳುತ್ತಾನೆ. ಹಾಲು, ತುಪ್ಪ, ಮೊಸರ ಜೇನುತುಪ್ಪ, ಸಕ್ಕರೆ ಇವೆಲ್ಲವನ್ನು ಮಿಶ್ರಣ ಮಾಡಿ ದೇವರಿಗೆ ಅಭಿಷೇಕ ಮಾಡಬೇಕು. ಮೇಲೆ ಅಖಂಡಿತವಾಗಿ ಆಕಳ ಹಾಲನ್ನು ಧಾರಾಕಾರವಾಗಿ ಮಸ್ತಕದ ಮೇಲೆ ಸುರಿಯಬೇಕು. ಇದರಿಂದ ನಾರಾಯಣನು ಸಂತುಷ್ಟನಾಗಿ ಅನುಗ್ರಹರೂಪಿ ಪ್ರಸಾದವನ್ನು ಕೊಡುತ್ತಾನೆಂದು ಸಂತ ತುಕಾರಾಮರು ಹೇಳುತ್ತಾರೆ.

೧೬) **ಆಪುಲಿಯಾ ಘರೀ ಕಷ್ಟ ತರೀ ಕರೀ । ಆಣೋನಿ ಘಾಗರೀ ಗಂಗೋದಕ ॥**
ಕರೋನಿ ವಿನಂತೀ ವಿನವಿತೋ ತುಮ್ಹಾ । ಸ್ನಾನ ಪುರುಷೋತ್ತಮಾ ಕರಾ ವೇಗೀ ॥
ಉತ್ತಮ ವಸ್ತ್ರಾನೇ ಪುಸಾವೇ ತೇ ಅಂಗ । ಕರೋನೀ ಅಭ್ಯಂಗ ಸರ್ವಾಂಗಾಸೀ ॥
ಪರಿಧಾನ ವಸ್ತ್ರೇ ಕೇಲೆ ಪೀತಾಂಬರೇ । ತೆಣೇ ಹೇ ಸಾಜಿರೇ ರೂಪ ದಿಸೇ ॥
ತುಕಾಮ್ಹಣೇ ನೇತ್ರ ಪಾಹತಾ ನಿವಾಲೇ । ಧ್ಯಾನ ಸಂಚಾರಲೇ ಹೃದಯಾಮಾಜೀ ॥

ನೀವು ಸ್ವತಃ ಕೃಷ್ಟಪಟ್ಟು ಶುದ್ಧ ನೀರು ತಂದು, ನಿಮ್ಮ ಮನೆಯಲ್ಲಿಯೇ ದೇವರ ಮೂರ್ತಿಗಳಿಗೆ ಅಭ್ಯಂಗ ಸ್ನಾನ ಮಾಡಿಸಿರಿ. ಸ್ವಚ್ಛ ಅರಿವೆಯಿಂದ ಒರಸಿ, ಸುಂದರ ಮನಮೋಹಕ ವಸ್ತ್ರಗಳನ್ನು ತೊಡಿಸಿರಿ. ದೇವರ ಮೂರ್ತಿಯನ್ನು ನೋಡಿದ ಕೂಡಲೇ ನಿಮಗೆ, ತನ್ನಿಂದ ತಾನೇ ಭಕ್ತಿಭಾವ ಹುಟ್ಟಿ, ಹೃದಯದಲ್ಲಿ ಪರಮಾತ್ಮನ ಧ್ಯಾನ ಸಂಚಾರವಾಗುತ್ತದೆಯೆಂದು ಸಂತ ತುಕಾರಾಮರು ಹೇಳುತ್ತಾರೆ.

೧೭) ಮನ ಹಾ ಮೋಗರಾ ಅರ್ಪೂನೀ ಈಶ್ವರಾ । ಪುನರಪಿ ಸಂಸಾರಾ ಏಣೇ ನಾಹೀ ॥
ಮನ ಹೇ ಸೇವಂತೀ ಅರ್ಪೂನೀ ಭಗವಂತೀ । ಪುನರಪಿ ಜನ್ಮಾಸೀ ಏಣೇ ನಾಹೀ ॥
ಮನ ಹೇ ತುಳಸೀ ಅರ್ಪೂನಿ ಹೃಷಿಕೇಶಿ । ಪುನರಪಿ ಜನ್ಮಾಸೀ ಏಣೆ ನಾಹೀ ॥
ತುಕಾಮ್ಹಣೆ ಐಸಾ ಜನ್ಮ ದಿಲಾ ದೇವಾ । ತಯಾ ವಾಸ ಹ್ವಾವಾ ವೈಕುಂಠಾಸೀ ॥

ಮಲ್ಲಿಗೆಯ ಹೂವಿನಂತೆ, ಸೇವಂತಿಗೆ ಹೂವಿನಂತೆ, ತುಳಸೀ ದಳದಂತೆ ನಮ್ಮ ಮನಸ್ಸನ್ನೂ ಕೂಡಾ ಪರಮಾತ್ಮನಿಗೆ ಅರ್ಪಿಸಿದರೆ, ಪರಮಾತ್ಮನ ಅನುಗ್ರಹವಾಗಿ ವೈಕುಂಠವಾಸ ಲಭಿಸುತ್ತದೆಂದು ಸಂತ ತುಕಾರಾಮರು ಹೇಳುತ್ತಾರೆ.

೧೮) ನಾಮ ಪುಷ್ಪ ಶುದ್ಧ ಗಳಾ ಘಾಲಾ ಹಾರ । ವಿವೇಕ ಸಾರಾಸಾರ ತುರಾ ಲಾವೂ ॥
ಬೋಧ ಭಾಳೀ ಬುಕಾ ಕ್ಷಮಾ ತುಳಸೀದಳಾ । ವಾಹತಾ ಗೋಪಾಳಾ ಸಂತೋಷತೋ ॥
ಗಾಯಿಲಿಯಾ ಗುಣೆ ಸಂತೋಷ ತಯಾನೆ । ಕರಿತಾ ಕೀರ್ತನೆ ಆಲ್ಹಾದೇ ತೋ ॥
ಆಲ್ಹಾದೇ ಹಾ ದೇವ ಕೀರ್ತಿ ವಾಖಾಣಿತಾ । ಪವಾಡೇ ಸಾಂಗತಾ ಯಾಚೇ ಯಾಸ ॥
ಯಾಚೇ ಯಾಸ ಕರೂ ಸರ್ವ ನಿವೇದನ । ವಾರೀಲ ಹಾ ಸೀಣ ಸಂಸಾರೀಂಚಾ ॥
ಸಂಸಾರಾಚಾ ವಾರಾ ಲಾಗೋ ನೇದಿ ಅಂಗಾ । ಭಾವೇ ಪಾಂಡುರಂಗಾ ಆಳವಿತೋ ॥
ತುಕಾಮ್ಹಣೇ ಆತಾ ಉಜಳಲೀ ಆರತೀ । ಭಾವೇ ತೋ ಶ್ರೀಪತಿ ಓವಾಳುಯಾ ॥

ನಾವು ಮಾಡುವ ನಾಮಜಪವೇ ಪಾಂಡುರಂಗನ ಕೊರಳಲ್ಲಿ ಹೂಮಾಲೆ ಹಾಕಿದಂತೆ. ನಮ್ಮಲ್ಲಿಯ ನಿತ್ಯಾನಿತ್ಯ ವಿವೇಕವೇ ದೇವರಿಗೆ ಅರ್ಪಿಸುವ ತುರಾಯಿ ಇದ್ದಂತೆ. ಬೋಧವೇ ಅವನ ಹಣೆಗೆ ಹಚ್ಚುವ ಬುಕಾ. ನಮ್ಮಲ್ಲಿಯ ದಯಾಕ್ಷಮಾ ಗುಣಗಳೇ ತುಳಸೀ ದಳ ಅರ್ಪಿಸಿದಂತೆ. ಇವೆಲ್ಲ ದೈವೀ ಗುಣಗಳನ್ನು ಅಳವಡಿಸಿಕೊಂಡು, ಪರಮಾತ್ಮನ ಮಹಾತ್ಮೆಯನ್ನು ಹಾಡಿ ಹರಿಸಿ, ಅವನ ಅನಂತ ಪವಾಡಗಳನ್ನು ಕೀರ್ತನದಲ್ಲಿ ವರ್ಣಿಸುವ ಭಕ್ತರನ್ನು ಸಂಸಾರ-ತಾಪದಿಂದ ಮುಕ್ತಮಾಡುತ್ತಾನೆ. ಆದ್ದರಿಂದ ನಾವೆಲ್ಲರೂ ಶ್ರದ್ಧೆಯಿಂದ ಆರತಿ ಬೆಳಗೋಣಾ, ಎಂದು ಸಂತ ತುಕಾರಾಮರು ಹೇಳುತ್ತಾರೆ.

೧೯) ಶಬ್ದಾಚಿಯಾ ಭಾವೇ ಕೇಲಾ ಉಪಚಾರ । ತೇಣೇ ಸರ್ವೇಶ್ವರ ಸಂತೋಷಲಾ ॥
ಶಬ್ದಾಚಿಯಾ ಕರೇ ಕರವಿಲೇ ಭೋಜನ । ಧಾಲಾ ನಾರಾಯಣ ತೇಣೇಸುಖೇ ॥
ಶಬ್ದಾಚಿಯಾ ಕರೇ ಕರವಿಲೆ ಆಚಮನ । ತಾಂಬೂಲ ಅರ್ಪೂನ ಫಳೇ ಪುಷ್ಪೇ ॥
ತುಕಾಮ್ಹಣೇ ಅನ್ನಾ ಆದೀ ಧೂಪ ದೀಪ । ಉಪಚಾರ ಅಲ್ಪ ಸಮರ್ಪಿಲೇ ॥

ಶುದ್ಧ ಭಾವದಿಂದ, ನಾವು ಕೇವಲ ಶಬ್ದಗಳಿಂದ ಪೂಜೆ ಉಪಚಾರ ಮಾಡಿದರೂ, ಅದರಿಂದ ಪಾಂಡುರಂಗನು ಸಂತುಷ್ಟನಾಗುತ್ತಾನೆ. ಶುದ್ಧ ಭಾವದಿಂದ ಧೂಪದೀಪ ಭೋಜನ ಇತ್ಯಾದಿ ಶಬ್ದಗಳಿಂದಲೇ ಸಮರ್ಪಿಸುತ್ತೇನೆ. ಕುಡಿಯಲು ನೀರು ಶಬ್ದದಿಂದ ಸಮರ್ಪಿಸುತ್ತೇನೆ. ಹೂ-ಹಣ್ಣು ಶಬ್ದಗಳಿಂದ ಸಮರ್ಪಿಸುತ್ತೇನೆ. ಕೊನೆಗೆ ಶಬ್ದದಿಂದ ತಾಂಬೂಲ ಸಮರ್ಪಿಸುತ್ತೇನೆ. ಹೀಗೆ ಕೇವಲ ಭಾವಿಕ ಭಕ್ತನ ಶಬ್ದೋಪಚಾರದಿಂದ ಪರಮಾತ್ಮನು ತೃಪ್ತನಾಗುತ್ತಾನೆಂದು ಸಂತ ತುಕಾರಾಮರು ಹೇಳುತ್ತಾರೆ.

೨೦) **ಮಜ ನಾಹೀಂ ತುಜ ಜ್ಞಾನಾಚೀ ತೀ ಚಾಡ । ಘೇತಾ ವಾಟೇ ಗೋಡ ನಾಮ ತುಜೇ ॥**
ನೇಣತೇ ಲೇಕರೂ ಆವಡಿಚೇ ತಾನ್ಹೆ । ಬೋಲತೋ ವಚನೇ ಆವಡೀನೇ ॥
ಭಕ್ತಿ ನೇಣೆ ಕಾಹೀ ವೈರಾಗ್ಯ ತೇ ನಾಹೀ । ಘಾತಲಾ ವಿಠಾಯೀ ಭಾರ ತುಜೇ ॥
ತುಕಾಮ್ಹಣೇ ನಾಚೂಂ ನಿರ್ಲಜ್ಜ ಹೋವೂನಿ । ನಾಹೀ ಮಾಝೆ ಮನೀ ದುಜಾ ಭಾವ ॥

ದೇವಾ ನಿನ್ನ ಜ್ಞಾನದ ಇಚ್ಛೆ ನನಗಿಲ್ಲ, ಕೇವಲ ನಾಮ ಜಪದಲ್ಲಿ ಮಾತ್ರ ಅಭಿರುಚಿ ಇದೆ. ನಾನು ನಿನ್ನ ಅಲ್ಪವಯಿ, ಅಜ್ಞಾನಿ, ಪ್ರೇಮಳ ಬಾಲಕನಂತಿದ್ದೇನೆ. ಆದ್ದರಿಂದಲೇ ಮುಚ್ಚು ಮರೆಯಿಲ್ಲದೇ ನಿನ್ನೊಡನೆ ಮಾತನಾಡುತ್ತಿದ್ದೇನೆ. ಭಕ್ತಿ ಅಂದರೆ ಏನು, ಹೇಗೆ ಮಾಡಬೇಕು; ವಿವೇಕ ವೈರಾಗ್ಯವೆಂದರೇನು, ಇವಾವೂ ನನಗೆ ತಿಳಿಯುವದಿಲ್ಲ. ಆದ್ದರಿಂದ ತಾಯಿ ಸ್ವರೂಪವಿರುವ ನಿನ್ನ ಮೇಲೆಯೇ ನನ್ನ ಉದ್ಧಾರದ ಸರ್ವ ಹೊಣೆಯನ್ನು ವಹಿಸಿದ್ದೇನೆ. ಆದ್ದರಿಂದ ನಿನ್ನ ಗುಣಗಾನ ಮಾಡುತ್ತಾ, ದೇಹದ ಪರಿವೆಯಿಲ್ಲದೆ ಮತ್ತು ಜನರ ಅಪಹಾಸ್ಯವನ್ನು ಲೆಕ್ಕಿಸದೇ, ನಿರ್ಲಜ್ಜನಾಗಿ ಕುಣಿಯುವ ಸ್ಫೂರ್ತಿ ಮಾತ್ರ ನನ್ನಲ್ಲಿದೆಯೆಂದು ಸಂತ ತುಕಾರಾಮರು ಹೇಳುತ್ತಾರೆ.

೨೧) **ಪೂಜೂ ನಾರಾಯಣ ಶಬ್ದಾಚೇ ಸುಮನೇ । ಮಂತ್ರ ಪುಷ್ಪ ತೇಣೆ ವಾಹಿಯೇಲೇ ॥**
ಭಾವಾಚೆ ಪೈ ಹಾತೀ ಜೊಡೋನಿ ಓಂಜಳ । ಸಮರ್ಪಿಲೇ ಜಳ ಶುದ್ಧ ಭಾವೇ ॥
ಮುಖ ಶುದ್ಧೀ ತಾಂಬೂಲ ದಿಲೇ ತುಳಸೀದಳ । ಆನಂದ ಸಕಳ ಓಸಂಡಲಾ ॥
ತುಕಾಮ್ಹಣೇ ಆತ್ತಾ ಉರಲೇ ನಾಹೀ । ನಾಮಾವೀಣ ಕಾಹೀ ಬೋಲಾವಯಾ ॥

ಶಬ್ದ-ರೂಪಿ ಪುಷ್ಪದಿಂದ ನಾರಾಯಣನ್ನು ಪೂಜಿಸಿ, ಭಕ್ತಿಭಾವದಿಂದ ಎರಡೂ ಕೈ ಜೋಡಿಸಿ ನಮಸ್ಕರಿಸೋಣ. ಇದೇ ಭಕ್ತಿಭಾವವೇ ನಾರಾಯಣನಿಗೆ ಮೃಷ್ಟಾನ್ನ ಮತ್ತು ಸೀತಳ

ಜಲವಿದ್ದಂತೆ. ಮುಖ ಶುದ್ಧಿಸಲುವಾಗಿ ತುಳಸೀದಳ ಅರ್ಪಿಸಿದರೆ, ಅದೇ ತಾಂಬೂಲ ಸಮರ್ಪಿಸಿದಂತೆ. ಭಗವನ್ನಾಮಸ್ಮರಣೆ ವ್ಯತಿರಿಕ್ತ ಇನ್ನು ಮುಂದೆ ಹೇಳಲಿಕ್ಕೆ ಏನೂ ಉಳಿದಿಲ್ಲವೆಂದು ಸಂತ ತುಕಾರಾಮರು ಅನ್ನುತ್ತಾರೆ.

೨೨) ಸಮಾಧಾನ ಚಿತ್ತಾಚೀ ಚರಣಾ ಆಲಿಂಗನ । ಪಾಯಾವರೀ ಮನ ಸ್ಥಿರಾವಲೇ ॥
ಜೈಸೇ ಕೇಲೇ ತೈಸೆ ಘಾಲೂ ಲೋಟಾಂಗಣಾ । ಕರೂ ಪ್ರದಕ್ಷಿಣಾ ನಮಸ್ಕಾರ ॥
ಪ್ರಾರ್ಥಿತೊ ಮೀ ತುಜ ರಾಹೇ ಮಾಝೀ ಪೋಟೀ । ಹೃದಯ-ಸಂಪುಟೀ ದೇವರಾಯಾ ॥
ಕ್ಷೇಮ ಅಲಿಂಗನ ದಿಲೀ ಪಾಯೀ ಮಿಠೀ । ಫೇತಲೀಸೆ ಲುಟೀ ಅಮುಪ ಹೋ ॥
ತುಕಾಮ್ಹಣೇ ಆತ್ತಾ ಆನಂದೀ ಆನಂದ । ಗಾವೂ ಪರಮಾನಂದ ಮನಾಸಂಗೇ ॥

ಪಾಂಡುರಂಗಾ, ನಿನ್ನ ಚರಣದ ಆಲಿಂಗನದಿಂದ ನನ್ನ ಚಿತ್ತ ಸಮಾಧಾನಗೊಂಡು, ಮನಸ್ಸು ನಿನ್ನ ಪಾದದ ಮೇಲೆ ಸ್ಥಿರವಾಗಿ ನಿಂತಿರುತ್ತದೆ. ಹಾಗೆಯೇ ಉರುಳು ಸೇವೆ, ಪ್ರದಕ್ಷಣಾ ಸೇವೆ ಮೇಲಿಂದ ಮೇಲೆ ಮಾಡಬೇಕೆಂಬ ಉತ್ಸಾಹವಿದೆ. ನಿನ್ನ ಸ್ಮರಣೆ ಮಾಡಿ ಪ್ರಾರ್ಥನೆಗೆ ಅಣಿಯಾದ ಕೂಡಲೆ, ನೀನು ನನ್ನ ಹೃದಯವಾಸಿಯಾಗಿರುವುದನ್ನು ಅನುಭವಿಸುತ್ತೇನೆ. ನಿನ್ನ ದೇಹದ ಆಲಿಂಗನ ಮತ್ತು ಪಾದಸ್ಪರ್ಶದಿಂದ ಅಪಾರ ಆನಂದದ ಅನುಭವವಾಗುತ್ತದೆ. ಹೀಗಾಗಿ ನನ್ನ ದೇಹದ ಒಳಗೂ ಹೊರಗೂ ಆನಂದವೇ ಆನಂದ ತುಂಬಿ, ಪರಮಾನಂದದಿಂದ ನಿನ್ನ ಕೀರ್ತನೆ ಭಜನೆ ಮಾಡುತ್ತೇನೆಂದು ಸಂತ ತುಕಾರಾಮರು ಹೇಳುತ್ತಾರೆ.

೨೩) ಕಾಯ ಉಪಚಾರ ಕರೂ ಪಾಂಡುರಂಗಾ । ಹೇಚಿ ಮಜ ಸಾಂಗಾ ವಿಚಾರೂನಿ ॥
ಕೋಣತಾ ಪದಾರ್ಥ ಉಣಾ ತುಜಪಾಸೀ । ಬೋಲಾಯಾ ವಾಚೇಸೀ ಮೌನಪಡೇ ॥
ಶಂಕರ ಶೇಷಾದಿ ಕರಿತೀ ಸ್ಮರಣ । ತೇಥೆ ಮಾಝೇ ಮನ ಗಾವೂಶಕೇ ॥
ಇಂದ್ರ, ಸುರವರ ವಾಹತೀ ಸುಮನೇ । ತೇಥೇ ಮ್ಯಾ ವಾಹಣೆ ಕಾಯ ಏಕ ॥
ಪರೀ ಆವಡೀನೆ ಜೋಡೂನಿ ಓಂಜಳ । ಬುಕಾ ವಾಹೂಂ ಮಾಳ ತುಳಸೀಚೀ ॥
ಉಣೇ ಪುರೇ ತುಮ್ಹೀ ಕರೂನಿಯಾ ಸಾಂಗಾ । ಜಿವಾಲಾಗೀ ಮಗ ಸುಖ ತೇವ್ಹಾಂ ॥
ತುಕಾಮ್ಹಣೇ ಮಾಝೀ ಐಕಾವೀ ಪ್ರಾರ್ಥನಾ । ತುಮ್ಹೀ ನಾರಾಯಣಾ ಸೇವಕಾಚೀ ॥

ಹೇ ನಾರಾಯಣಾ, ನಿನ್ನ ಉಪಚಾರವನ್ನು ಹೇಗೆ ಮಾಡಬೇಕೆಂಬುದು ತಿಳಿಯಲೊಲ್ಲದು. ಯಾಕೆಂದರೆ ನಿನ್ನಲ್ಲಿ ಇಲ್ಲದಂತಾ ವಸ್ತು ಯಾವುದು ಇಲ್ಲಾ; ಮತ್ತು ನಿನ್ನಲ್ಲಿ

ಯಾವುದಕ್ಕೂ ಕಡಿಮೆಯಿಲ್ಲಾ. ಆದಿಶೇಷ, ಮಹಾದೇವರು ಮೊದಲಾಗಿ ಎಲ್ಲರೂ ನಿನ್ನ ಸ್ಮರಣೆ ಅಂದರೆ ಭಕ್ತಿಯಲ್ಲಿ ಏಕಾಗ್ರಚಿತ್ತರಾಗಿದ್ದಾರೆ. ಇಂದ್ರಾದಿ ದೇವತೆಗಳು ಹೂಗಳ ಮಳೆ ಸುರಿಸುತ್ತಿದ್ದಾರೆ. ಅವರೆಲ್ಲರ ಸಮರ್ಪಣೆ ಹಾಗೂ ಭಕ್ತಿಯ ಆಳಕ್ಕೆ ಹೋಲಿಸಿದರೆ, ನಾನು ಮಾಡುವ ಸೇವೆ ಅತ್ಯಲ್ಪ. ಆದರೂ ಶ್ರದ್ಧೆಯಿಂದ ಮತ್ತು ಪ್ರೇಮದಿಂದ ತುಳಸೀ ದಳಗಳ ಹಾರ ಮತ್ತು ಬುಕ್ಕಾ ಸಮರ್ಪಿಸಿ, ಎರಡೂ ಕೈ ಜೋಡಿಸಿ ವಂದಿಸುತ್ತೇನೆ. ಈ ಅಳಲಿ ಸೇವೆಯಿಂದಲೇ ಸಂತುಷ್ಟನಾಗಿ, ಈ ಭಾವಿಕ ಅಜ್ಞ ಸೇವಕನಿಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸುವದಾಗಿ ಸಂತ ತುಕಾರಾಮರು ಹೇಳುತ್ತಾರೆ.

೨೪) **ಕೈಸೇ ಕರೂ ಧ್ಯಾನ ಕೈಸಾ ಪಾಹೂ ತುಜ । ವರ್ಮ ದಾವೀ ಮಜ ಯಾಚಕಾಸೀ ॥**
ಕೈಸೀ ಭಕ್ತಿ ಕರೂ ಸಾಂಗ ತುಝೀ ಸೇವಾ । ಕೋಣ್ಯಾ ಭಾವೇ ದೇವಾ ಆತುಡಸೀ ॥
ಕೈಸೀ ಕೀರ್ತಿ ವಾಣೂ ಕೈಸಾ ಲಕ್ಷೀ ಆಣೂ । ಜಾಣೂ ಹಾ ಕವಣೂ ಕೈಸಾ ತುಜ ॥
ಕೈಸಾ ಗಾವೂ ಗೀತೀ ಕೈಸಾ ಧ್ಯಾವೂ ಚಿತ್ತೀ । ಕೈಸೀ ಸ್ಥಿತಿ ಮತಿ ನ ಕಳೇ ಮಜ ॥
ತುಕಾಮ್ಹಣೇ ಜೈಸೇ ದಾಸ ಕೇಲೇ ದೇವಾ । ತೈಸೆ ಹೇ ಅನುಭವಾ ಆಣೇ ಮಜ ॥

ಹೇ ದೇವಾ, ನಿನ್ನ ಧ್ಯಾನ ಹೇಗೆ ಮಾಡಬೇಕು? ನಿನ್ನನ್ನು ಹೇಗೆ ನೋಡಬೇಕು? ಎಂಬ ವರ್ಮವನ್ನು ನನಗೆ ತಿಳಿಸು. ನಿನ್ನ ಭಕ್ತಿ ಮತ್ತು ಸೇವೆ ಹೇಗೆ ಮಾಡಬೇಕು? ನಿನ್ನ ಕೀರ್ತಿಯನ್ನು ಹೇಗೆ ವರ್ಣಿಸಬೇಕು. ಲಕ್ಷ್ಯದಲ್ಲಿ ಹೇಗೆ ತರಬೇಕು? ನಿನ್ನನ್ನು ಹೇಗೆ ತಿಳಿದುಕೊಳ್ಳಬೇಕು? ಗುಣಗಾನ ಹೇಗೆ ಮಾಡಬೇಕು? ಚಿತ್ತದಲ್ಲಿ ನಿನ್ನನ್ನು ಹೇಗೆ ಧ್ಯಾನಿಸಬೇಕು? ಇವೆಲ್ಲವೂ ನನ್ನ ಬುದ್ಧಿಗೆ ತಿಳಿಯದಾಗಿವೆ. ಆದ್ದರಿಂದ ನಿನ್ನ ಈ ದಾಸನಿಗೆ ಪ್ರತ್ಯಕ್ಷ ಅನುಭವ ಪ್ರಮಾಣವಾಗಿ ತಿಳಿಸುವ ಕೃಪೆಯಾಗಬೇಕೆಂದು, ಸಂತ ತುಕಾರಾಮರು ವಿನಂತಿಸುತ್ತಾರೆ.

೨೫) **ಕಾಯ ತುಜ ಕೈಸೇ ಜಾಣಾವೇಗಾ ದೇವಾ । ಆಣಾವೇ ಅನುಭವಾ ಕೈಶಾಪರೀ ॥**
ಸಗುಣ ನಿರ್ಗುಣ ಸ್ಥೂಳ ಕೀ ಲಹಾನ । ನ ಕಳೇ ಅನುಮಾನ ಮಜ ತುಜೇ ॥
ಕೋಣತಾ ನಿರ್ಧಾರ ಕರೂ ಹಾ ವಿಚಾರ । ಭವಸಿಂಧೂ ಪಾರ ತಾರಾವಯಾ ॥
ತುಕಾ ಮ್ಹಣೇ ಕೈಸೇ ಪಾಯ ಆತುಡತೀ । ನ ಪಡೇ ಶ್ರೀಪತೀ ವರ್ಮ ಠಾವೇ ॥

ಹೇ ದೇವಾ! ಹೇಗೆ ನಿನ್ನನ್ನು ತಿಳಿದುಕೊಳ್ಳಬೇಕು? ನೀನು ಸಗುಣನೋ

ನಿರ್ಗುಣನೋ? ನೀನು ಸ್ಥೂಲನೋ ಸೂಕ್ಷ್ಮನೋ? ಈ ಎಲ್ಲ ಸಮಸ್ಯೆಗಳಿಗೆ ನನ್ನಲ್ಲಿ ಪರಿಹಾರವಿಲ್ಲ. ಈ ಭವಸಾಗರ ದಾಟಲಿಕ್ಕೆ ಏನು ಉಪಾಯ ಅನುಸರಿಸಬೇಕೆಂದು ತಿಳಿದಿಲ್ಲ. ಹೇ ಶ್ರೀಪತೀ, ನಿನ್ನ ಪ್ರಾಪ್ತಿಯ ಮಾರ್ಗ ಯಾವುದೆಂಬುದು ನನಗೆ ಗೊತ್ತಿಲ್ಲ. ಆದ್ದರಿಂದ ಅನುಗ್ರಹಿಸಬೇಕೆಂದು ಸಂತ ತುಕಾರಾಮರು ಭಿನ್ನವಿಸುತ್ತಾರೆ.

೨೬) **ಸ್ತುತೀ ಕರೂ ತರೀ ಕೋಣ ಮಾಜೀ ಮತೀ । ವೇದಾಂ ಪಡೇ ಭ್ರಾಂತಿ ಹೇ ಆಶ್ಚರ್ಯ ॥**
ಪರೀ ಹಾ ಜಿಹ್ವಾಗ್ರೀ ರಾಮಕೃಷ್ಣಹರಿ । ಬೈಸವೀ ಲೌಕರೀ ಯಾತೀಗುಣ ॥
ರೂಪಗುಣ ಕೀರ್ತಿ ಕೃಪಾಳು ಉದಾರ । ವರ್ಣಾವಯಾ ಪಾರ ಬ್ರಹ್ಮಾ ನೇಣೇ ॥
ರೂಪೀ ನಾಮೀ ಶಿವ ಹೋವೂನಿಯಾ ವೇಡಾ । ವರ್ಣಿಲಾ ಪವಾಡಾ ರಾಮನಾಮೀ ॥
ತುಕಾಮ್ಹಣೇ ಮಜ ನೇಣವೇಚಿ ಶಿವ । ನಾಹೀ ರಾಹಿಲಾ ವಾವ ಬೋಲಾವಯಾ ॥

ಹೇ ದೇವಾ! ಈ ಜಗತ್ತಿನಲ್ಲಿಯೇ ಬುದ್ಧಿವಂತನೆನಸಿಕೊಂಡ ವೇದಗಳಿಗೆ ನಿನ್ನ ಸ್ತುತಿ ಮಾಡಲಿಕ್ಕೆ ಆಗಲಿಲ್ಲ. ಅಂದ ಮೇಲೆ ನನ್ನಂಥ ಮಂದ ಮತಿಗಳು ಸ್ತುತಿ ಮಾಡಲು ಅಸಮರ್ಥರು. ಆದರೂ ನನ್ನ ನಾಲಿಗೆಯ ತುದಿಯ ಮೇಲೆ ರಾಮಕೃಷ್ಣ ಹರಿ ನಾಮವು ಸದಾ ಕೂಡ್ರುವಂತೆ ಮಾಡು. ನಿನ್ನ ರೂಪವನ್ನು ಮತ್ತು ಅನಂತ ಗುಣ ಕೀರ್ತಿಯನ್ನು ವರ್ಣಿಸಲು ಬ್ರಹ್ಮ ದೇವರಿಗೂ ಆಗುವದಿಲ್ಲ. ನಿನ್ನ ಅನಂತ ನಾಮ, ಅನಂತರೂಪಗಳಿಗೆ ಮೋಹಿತನಾಗಿ ಮಹಾದೇವರೂ ಕೂಡಾ ರಾಮನಾಮ ಕೀರ್ತಿ ಪವಾಡ ಸದಾ ಹಾಡುತ್ತಿರುತ್ತಾರೆ. ಶಿವ ಬ್ರಹ್ಮಾದಿಕರಿಗೆ ವರ್ಣಿಸಲಾಗದ ನಿನ್ನ ಅನಂತರೂಪ ಅನಂತ ಗುಣಗಳನ್ನು ವರ್ಣಿಸುವುದು ನನ್ನಂಥ ಪಾಮರನಿಂದ ಸಾಧ್ಯವಿಲ್ಲವೆಂದು ಸಂತ ತುಕಾರಾಮರು ಹೇಳುತ್ತಾರೆ.

೨೭) **ನಾಮಾಚಾ ಪ್ರತಾಪ ನ ವರ್ಣವೇಚಿ ಮಜ । ಸಾಂಗ ಗರುಡಧ್ವಜ ರಾಹೇ ತೇಥೆ ॥**
ಮಜ ವಾಚಾ ಕಿತೀ ಪರತಲ್ಯಾ ಶ್ರುತಿ । ವೇದ ಮುಖೇ ಶ್ರುತಿ ಮೌನ ಠೇಲೇ ॥
ವರ್ಣೂ ನೆಣೇ ಶೇಷ ನಾಮಾಚಾ ಪವಾಡಾ । ಚಿರಲಿಯಾ ರಾಂಡಾ ಜಿಹ್ವಾ ತ್ಯಾಚ್ಯಾ ॥
ಅನುಸರಲೀ ರಮಾ ವರ್ಣಾವಯಾ ಶ್ರೀಹರಿ । ಪಾಯಾಂಚೀ ಕಿಂಕರೀ ಹೋವುನಿ ಠೇಲೀ ॥
ತುಕಾಮ್ಹಣೇ ಆಮ್ಹಿ ಮಾನವ ಕಿಂಕರ । ವರ್ಣಾವಯಾ ಪಾರ ನ ಕಳೇ ತುಝಾ ॥

ಹೇ ಶ್ರೀಹರಿ! ನಿನ್ನ ಅನಂತ ನಾಮಗಳ ಪ್ರತಾಪವನ್ನು ವರ್ಣಿಸಲು ಹೇಗೆ ಸಾಧ್ಯವಿದೆಯೆಂಬುದನ್ನು ತಿಳಿಸು. ವೇದಗಳ ಜ್ಞಾನದ ಭಾಗವಾದ ಶ್ರುತಿಗಳು ಮೌನಗೊಂಡವು.

ಸಾವಿರ ಮುಖಗಳುಳ್ಳ ಆದಿಶೇಷನು, ನಿನ್ನ ನಾಮದ ಪವಾಡಗಳನ್ನು ಸಂಪೂರ್ಣವಾಗಿ ವರ್ಣಿಸಲು ಅಸಮರ್ಥನಾದನು. ಅವನ ಸಹಸ್ರ ನಾಲಿಗೆಗಳು ಸೀಳಿದವು. ಲಕ್ಷ್ಮೀ ದೇವಿಯು ನಿನ್ನನ್ನು ವರ್ಣಿಸಲು ಅಸಮರ್ಥಳಾಗಿ ಸೋಲನ್ನು ಒಪ್ಪಿಕೊಂಡು ನಿನ್ನ ಪಾದ ಸೇವೆ ಅಂಗೀಕರಿಸಿದಳು ; ಅಂದ ಮೇಲೆ ನಮ್ಮಂಥ ಪಾಮರ ಮಾನವರು, ನಿನ್ನ ವರ್ಣನೆ ಮಾಡಲು ಅಸಮರ್ಥರೆಂದು ಸಂತ ತುಕಾರಾಮರು ಹೇಳುತ್ತಾರೆ.

೨೮) **ಆಮ್ಹೀ ಮಾನವಾಂನೀ ವರ್ಣಾವೇ ತೇ ಕಾಯ । ಸುರವರ ಪಾಯ ವಂದಿತಾತೀ ॥**
ಗಣೇಶ ಶಾರದಾ ಕರಿತೀ ಗಾಯನ । ಆದಿದೇವ ಗಣ ಶ್ರೇಷ್ಠ ಶೇಷ್ಠ ॥
ಜಯಾಚ್ಯಾ ಗಾಯನಾ ತಿಷ್ಠತೋ ಶಂಕರ । ತಯಾಸೀ ಪೈ ಪಾರ ನ ಕಳೇ ತುಝಾ ॥
ತುಕಾಮ್ಹಣೇ ಆಮ್ಹೀ ಕಿಂಕರ ತೇ ಕಿತೀ । ಇಂದ್ರಾಚೀ ತೀ ಮತೀ ನಾಗವಿಲೀ ॥

ಹೇ ಪಾಂಡುರಂಗಾ! ಪಾಮರ ಮಾನವರಾದ ನಾವು ನಿನ್ನ ವರ್ಣನೆ ಮಾಡುವದು ಹೇಗೆ ಸಾಧ್ಯ? ಯಾಕೆಂದರೆ ಎಲ್ಲ ದೇವತೆಗಳು ನಿನ್ನ ಪಾದ ವಂದಿಸುತ್ತಾರೆ. ಗಣೇಶ, ಶಾರದಾದೇವಿ ಮುಂತಾಗಿ, ಶ್ರೇಷ್ಠ ಶ್ರೇಷ್ಠ ದೇವಗಣಗಳೆಲ್ಲಾ ಗಾಯನ ಮಾಡುತ್ತ ನಿನ್ನನ್ನು ಸ್ತುತಿಸುತ್ತಾರೆ. ಈ ಗಾಯನ ಕಾರ್ಯಕ್ರಮದಲ್ಲಿ, ಎಲ್ಲ ದೇವತೆಗಳಿಗೆ ವರಿಷ್ಠನಾದ ಮಹಾದೇವರು ಉಪಸ್ಥಿತರಿರುತ್ತಾರೆ. ನಿನ್ನ ಮಾಹಾತ್ಮೆ ಅಂದರೆ ನಿನ್ನ ಅನಂತ ನಾಮ, ಅನಂತಗುಣ, ಅನಂತ ಅವತಾರ. ಇವುಗಳನ್ನು ಸಂಪೂರ್ಣ ವರ್ಣಿಸಲು, ಅಂಥವರ ಬುದ್ಧಿಗೂ ನಿಲುಕದ ವಿಷಯವಾಗಿದ್ದಾಗ, ನಮ್ಮಂಥ ಕಿಂಕರರು ವರ್ಣಿಸಲು ಹೇಗೆ ಸಾಧ್ಯ? ಹೀಗೆಂದು ಸಂತ ತುಕಾರಾಮರು ಪಾಂಡುರಂಗನಿಗೆ ಪ್ರಶ್ನಿಸುತ್ತಾರೆ.

೨೯) **ಅಗಾ ಮಹಾವಿಷ್ಣು ಅನಂತ ಭುಜಾಂಚ್ಯಾ । ಆಮ್ಹಾ ಅನಾಥಾಂಚ್ಯಾ ಸೋಯರಿಯಾ ॥**
ನ ಕಳೇ ಮಹಿಮಾ ವೇದ ಮೌನಾವತೀ । ತೇಥೆ ಮಾಜೀ ಮತೀ ಕೋಣೇ ಕಡೆ ॥
ಕಾಯ ಮ್ಯಾ ವರ್ಣಾವೇ ತುಝ್ಯಾ ಥೋರಪಣಾ । ಸಹಸ್ರವದನಾ ಶಕ್ತಿ ನವ್ಹೇ ॥
ರವಿ ಶಶಿ ಜೇಥೇ ತೇಜೆ ಸಾಮಾವತೀ । ತೇಥೇ ಮಾಝೀ ಮತೀ ಕೋಣೇ ಕಡೆ ॥
ತುಕಾಮ್ಹಣೇ ಆಮ್ಹಿ ಬಾಳ ತೂ ಮಾವುಲೀ । ಕರಾವೀ ಸಾವುಲೀ ಕರೂಣೆಚೀ ॥

ಹೇ ಅನಂತ ಭುಜಗಳುಳ್ಳ ಮಹಾವಿಷ್ಣುವೇ, ನಮ್ಮಂಥ ಅನಾಥರಿಗೆಲ್ಲಾ ನೀನೇ ಆಪ್ತನಿದ್ದಂತೆ. ನಿನ್ನ ಮಹಿಮೆ ವೇದಾದಿಗಳಿಗೂ ತಿಳಿದಿಲ್ಲವೆಂದ ಮೇಲೆ, ನಮ್ಮಂಥ ಮಂದ ಬುದ್ಧಿಗಳಿಗೆ ತಿಳಿಯುವದಾದರೂ ಹೇಗೆ? ಸಾವಿರ ನಾಲಿಗೆಯ ಆದಿಶೇಷನೇ ನಿನ್ನ

ಮಹಾತ್ಮೆಯನ್ನು ವರ್ಣಿಸಲು ಅಸಮರ್ಥನಿದ್ದಾಗ, ನನ್ನಂಥ ಪಾಮರನು ವರ್ಣಿಸಲು ಹೇಗೆ ಸಾಧ್ಯ? ನಿನ್ನ ಪ್ರಕಾಶದಲ್ಲಿ ಸೂರ್ಯ ಚಂದ್ರರೂ ಮಂಕಾಗುತ್ತಾರೆಂದ ಮೇಲೆ, ನನ್ನಂಥ ಮಂದಮತಿಯು ನಿನ್ನನ್ನು ಹೇಗೆ ತಿಳಿದುಕೊಳ್ಳುವನು? ಆದ್ದರಿಂದ ಹೇ ದೇವಾ, ನಾವು ನಿನ್ನ ಮಕ್ಕಳ ಸಮಾನ ಹಾಗೂ ನೀನು ತಾಯಿ ಇದ್ದಂತೆ. ಆದ್ದರಿಂದ ಆಶೀರ್ವಾದದ ವರದ ಹಸ್ತವು ನಮ್ಮ ಮೇಲೆ ಯಾವಾಗಲೂ ಇರಲೆಂದು ಸಂತ ತುಕಾರಾಮರು ಬೇಡಿಕೊಳ್ಳುತ್ತಾರೆ.

೩೦) **ನಮೋ ವಿಶ್ವರೂಪಾ ವಿಷ್ಣು ಮಾಯ ಬಾಪಾ । ಅಪಾರಾ ಅಮೂಪಾ ಪಾಂಡುರಂಗಾ ॥**
ವಿನವಿತೋ ರಂಕ ದಾಸ ಮೀ ಸೇವಕ । ವಚನ ತೇ ಏಕ ಆಯೀಕಾವೇ ॥
ತುಝೀ ಸ್ತುತಿ ವೇದ ಕರಿತಾ ಭಾಗಲಾ । ನಿವಾಂತಚೀ ಠೇಲಾ ನೇತಿ ನೇತಿ ॥
ಋಷಿ ಮುನಿ ಸಿದ್ಧ ಬಹು ಕವಿಜನ । ವರ್ಣಿತಾ ತುಜೇ ಗುಣ ನಾ ಸರತೀ ॥
ತುಕಾಮ್ಹಣೇ ತೇಥೇ ಕಾಯ ಮಾಝೀ ವಾಣೀ । ತೇ ತುಝೀ ವಾಖಾಣೀ ಕೀರ್ತಿ ದೇವಾ ॥

ಹೇ ವಿಶ್ವರೂಪಿ ಮಹಾ ವಿಷ್ಣುವೇ, ನೀನೇ ನಮ್ಮ-ತಾಯಿ ತಂದೆ ಇದ್ದು, ವ್ಯಾಪಕನಾಗಿರುತ್ತೀ; ಅಮುಪ ಅಂದರೆ ಉಪಮಾರಹಿತ, ಅದ್ವಿತೀಯನಾಗಿರುತ್ತೀ. ದೀನ ದುರ್ಬಲನಾದ ನಾನು ನಿನ್ನ ಆಜ್ಞಾಧಾರಕ ದಾಸನಿದ್ದು, ನನ್ನ ವಿನಂತಿಯನ್ನು ನೀನು ಕೇಳಬೇಕು. ದೇವಾ, ವೇದಗಳು ಸಹಿತ ನಿನ್ನ ಸ್ತುತಿಯನ್ನು ಮಾಡುತ್ತಾ ದಣಿದು, ಕೊನೆಗೆ ಏನೂ ತಿಳಿಯುವದಿಲ್ಲವೆಂದು ಸುಮ್ಮನೇ ತಟಸ್ಥವಾದವು. ಋಷಿ ಮುನಿಗಳು, ಅನೇಕ ಸಿದ್ಧರು ಮತ್ತು ಕವಿಗಳು ನಿನ್ನ ಅನಂತ ಗುಣಮಹಿಮೆಗಳನ್ನು ವರ್ಣಿಸುತ್ತಿದ್ದಾರೆ. ಆದರೂ ಸ್ತುತಿ ಇನ್ನೂ ಸಂಪೂರ್ಣವಾಗಿಲ್ಲ. ಇಂಥ ದೊಡ್ಡ ದೊಡ್ಡ ಪ್ರತಿಭಾವಂತರೇ ನಿನ್ನ ಅನಂತ ಗುಣ ವರ್ಣನೆಯನ್ನು ಮಾಡಲು ಅಸಮರ್ಥರಿದ್ದಾಗ, ಹೇ ದೇವಾ ನನ್ನಂಥ ಒಬ್ಬ ಬಡಪಾಯಿ ಭಕ್ತನು, ನೀನು ತೃಪ್ತಿಪಡುವಂತೆ ವರ್ಣಿಸುವುದು ಹೇಗೆ ಸಾಧ್ಯವಿದೆ? ಎಂದು ಸಂತ ತುಕಾರಾಮರು ಹೇಳುತ್ತಾರೆ.

೩೧) **ತ್ರಿಗುಣ ಆಟೀವ ವಾಚೇಚಾ ಪಸಾರಾ । ಪಡೇಲ ವಿಚಾರ ಸರ್ವರಸ ॥**
ಆದಿ ಮಧ್ಯ ಅಂತೀ ನಾಹೀ ಅವಸಾನ । ಜೀವನೀ ಜೀವನ ಮಿಳೂನಿ ಗೇಲೇ ॥
ರಾಮಕೃಷ್ಣ ನಾಮ ಮಾಳ ಹೀ ಸಾಜಿರೀಂ । ಓವಿಲೀ ಗೋಜಿರೀ ಕರ್ಣೀ ಮನೀಂ ॥
ತುಕಾಮ್ಹಣೇ ತನು ಝಾಲೀ ಹೇ ಶೀತಳ । ಆವಡೀ ಸಕಳ ಬ್ರಹ್ಮಾನಂದೇ ॥

ಸತ್ವ, ರಜ ತಮ, ಈ ತ್ರಿಗುಣಗಳು ಕರಗಿ ಹೋದರೆ, ವಾಚಾಳತನ ಮತ್ತು ಶಬ್ದ

ಸಮೂಹ ಇಲ್ಲದಂತಾಗಿ, ವಿಚಾರ ಪಕ್ವವಾಗಿ ಹೃದಯದಲ್ಲಿ ಆನಂದರಸ ಉಕ್ಕುತ್ತದೆ. ಆದಿ ಮಧ್ಯ ಅಂತೀ ಬದಲಾಗದ ಆತ್ಮಸ್ವರೂಪದಂತೆ, ನೀರಿನಲ್ಲಿ ನೀರು ಕೂಡಿ ಒಂದಾಗುವಂತೆ, ಜೀವನು ಶಿವನಲ್ಲಿ ಕರಗಿ ಏಕರೂಪವಾಗುತ್ತಾನೆ. ರಾಮಕೃಷ್ಣ ನಾಮದ ಮಾಲೆಯು ಸದಾಕಾಲ ಮನಸ್ಸಿನಲ್ಲಿ ಮತ್ತು ಒಳ ಕಿವಿಯಲ್ಲಿ ಶೋಭಿಸುತ್ತದೆ. ಅಂದರೆ ಮನದಲ್ಲಿ ರಾಮಕೃಷ್ಣ ಅಂದದ್ದು ಸದೋಕಾಲ ಗಡಿಯಾರದ ಟಿಕ್ ಟಿಕ್ ಧ್ವನಿಯಂತೆ ಒಳಗಿವಿಯಲ್ಲಿ ಕೇಳುತ್ತಿರುತ್ತದೆ. ಮನುಷ್ಯನಿಗೆ ಈ ಸ್ಥಿತಿಯು ಪ್ರಾಪ್ತವಾದ ನಂತರ, ಸಾಧಕನ ಶರೀರದ ಒಳಗೂ ಹೊರಗೂ ಶಾಂತಿ ದಯಾ ಕ್ಷಮಾ ಈ ದೈವೀ ಗುಣಗಳು ತುಂಬಿ, ಎಲ್ಲೆಡೆಗೂ ಬ್ರಹ್ಮಾನಂದದ ಅನುಭವವಾಗುತ್ತದೆಂದು ಸಂತ ತುಕಾರಾಮರು ತಮ್ಮ ಅನುಭವವನ್ನು ಹೇಳುತ್ತಾರೆ.

೩೨) **ಇತುಕೆ ಕರೀ ದೇವಾ ಐಕೇ ಹೇ ವಚನ । ಸಮೂಳ ಅಭಿಮಾನ ಜಾಳೀ ಮಾಝಾ ॥**
ಇತುಕೆ ಕರೀ ದೇವಾ ಐಕೇ ಹೇ ಗೋಷ್ಟಿ। ಸರ್ವ ಸಮದೃಷ್ಟಿ ತುಜ ದೇಖೇ ॥
ಇತುಕೆ ಕರೀ ದೇವಾ ವಿನವಿತೋ ತುಜ । ಸಂತಚರಣರಜ ವಂದೀ ಮಾಥಾ ॥
ಇತುಕೆ ಕರೀ ದೇವಾ ಐಕೇ ಹೇ ಮಾತ । ಹೃದಯೀ ಪಂಢರೀನಾಥ ದಿವಸ ರಾತ್ರೀ ॥
ಭಲತಿಯಾ ಭಾವೇ ತಾರೀ ಪಂಢರೀನಾಥಾ । ತುಕಾಮ್ಹಣೇ ಆತ್ತಾ ಶರಣ ಆಲೋ ॥

ಹೇ ದೇವಾ! ನನ್ನ ಪ್ರಾರ್ಥನೆ ಕೇಳುವ ಕೃಪೆಯಾಗಬೇಕು. ಅದೇನೆಂದರೆ, ನನ್ನ ಅಭಿಮಾನವು ಸಮೂಳ ಇಲ್ಲದಂತೆ ಮಾಡು. ನಾನು ಈ ಜಗತ್ತಿನಲ್ಲಿ ಯಾರನ್ನು ನೋಡಿದರೂ, ಯಾವ ವಸ್ತುವನ್ನು ನೋಡಿದರೂ, ಅವರಲ್ಲಿ ಮತ್ತು ಆ ಎಲ್ಲ ವಸ್ತುಗಳಲ್ಲಿ ನಿನ್ನ ಅಸ್ತಿತ್ವದ ಭಾವನೆಯನ್ನು ಅನುಭವಿಸುವಂತೆ ಮಾಡು. ಸಂತರ ಪಾದ ಹಾಗೂ ಚರಣಧೂಳಿಯನ್ನು ನಾನು ಆದರದಿಂದ ನತಮಸ್ತಕನಾಗಿ ವಂದಿಸುವಂತೆ ಮಾಡು. ಅಹೋ ರಾತ್ರಿ, ನನ್ನ ಹೃದಯದಲ್ಲಿ, ನಿನ್ನ ಅಂದರೆ ಪಂಢರಿನಾಥನ, ವಾಸವಿರುವಂತೆ ಮಾಡು. ಹೇ ಪಂಢರಿನಾಥಾ, ನಾನು ನಿನಗೆ ಸಂಪೂರ್ಣ ಶರಣಾಗತನಾಗಿದ್ದು, ನನ್ನ ಈ ಶರಣಾಗತಿ ಭಕ್ತಿ ನಿನ್ನ ಗಣನೆಯಲ್ಲಿ ಉತ್ತಮ, ಮಧ್ಯಮ, ಕನಿಷ್ಠ ಯಾವುದೇ ಮಟ್ಟದ ಭಕ್ತಿಯೆನಿಸಿದರೂ, ಅಥವಾ ಇದು ಭಕ್ತಿಯ ಸ್ವರೂಪವೇ ಅಲ್ಲವೆನಿಸಿದರೂ, ನಿನ್ನ ಬೆನ್ನಿಗೆ ಬಿದ್ದ ಮಗು ಎಂದು ತಿಳಿದು, ನನ್ನನ್ನು ಉದ್ಧಾರ ಮಾಡಲಿಕ್ಕೇಬೇಕೆಂದು, ಸಂತ ತುಕಾರಾಮರು, ಮಗುವು ತಾಯಿಗೆ ಸಲಿಗೆಯಿಂದ ಹಟ ಹಿಡಿದು ಕೇಳುವಂತೆ, ಪಾಂಡುರಂಗನಿಗೆ ಕೇಳುತ್ತಿದ್ದಾರೆ.

ಶ್ರೀ ಸಂತ ತುಕಾರಾಮ ಮಹಾರಾಜರ ಆರತಿ

ಆರತೀ ತುಕಾರಾಮಾ । ಸ್ವಾಮಿ ಸದ್ಗುರು ಧಾಮಾ ।
ಸಚ್ಚಿದಾನಂದ ಮೂರ್ತಿ । ಪಾಯ ದಾಖವೀ ಆಮ್ಹಾ ॥ ಧೃ ॥ ಆರತಿ ॥

ರಾಘವೇ ಸಾಗರಾತ । ಪಾಷಾಣ ತಾರಿಲೇ ।
ತೈಸೇ ತುಕೋಬಾಚೇ । ಅಭಂಗ ರಕ್ಷಿಲೇ ॥ ೧ ॥ ಆರತಿ ॥

ತುಕಿತಾ ತುಳನೇಸೀ । ಬ್ರಹ್ಮ ತುಕಾಸೀ ಆಲೇ ।
ಮ್ಹಣೋನಿ ರಾಮೇಶ್ವರೇ । ಚರಣೀ ಮಸ್ತಕ ಠೇವಿಲೇ ॥ ೨ ॥ ಆರತಿ ॥

ಚಿರಂಜೀವ ಪದ

ಶ್ರೀ ಸಂತ ಏಕನಾಥ ಮಹಾರಾಜರು ಉಪದೇಶಿಸಿದ ಚಿರಂಜೀವ ಪದವು, ಮೂಲತಃ ದ್ವಾಪಾರ ಯುಗದಲ್ಲಿ ಶ್ರೀ ಕೃಷ್ಣ ಪರಮಾತ್ಮನು ಉದ್ಧವನಿಗೆ ಉಪದೇಶಿಸಿದ್ದನ್ನೇ ಹೇಳಿದ್ದಾರೆ. ಚಿರಂಜೀವ ಪದವಿ ಗಳಿಸಿಕೊಳ್ಳಲು ಸಾಧಕ ಭಕ್ತರು, ಯಾವ ಅರ್ಹತೆಗಳನ್ನು ಹೊಂದಿರಬೇಕೆಂಬುದನ್ನು ನಿಶ್ಚಿತ ಶಬ್ದಗಳಲ್ಲಿ ಹೇಳುತ್ತಿದ್ದೇನೆ; ಅದರಂತೆ ಸಾಧಕರು ತಮ್ಮ ಜೀವನ ಕ್ರಮವನ್ನು ಬದಲಾಯಿಸಿಕೊಳ್ಳಬೇಕು.

ಮೊದಲನೆಯದಾಗಿ ಸಾಧಕನು, ತನ್ನ ಈ ವರೆಗಿನ ಅಜ್ಞಾನಕ್ಕಾಗಿ ಹಳಹಳಿಸಬೇಕು. ಈ ಅನುತಾಪದ (ಹಳಿಹಳಿಸುವುದರ) ಸ್ವರೂಪವೇನೆಂದರೆ; ಇದೇ ಕ್ಷಣದಲ್ಲಿ ನನಗೆ ಸಾವು ಬಂದರೂ ಬರಬಹುದು. ಪರಮಾತ್ಮನ ಭಕ್ತಿ ಮಾಡಿ, ಅವನ ಅನುಗ್ರಹ ಸಂಪಾದಿಸಿ, ಪರಮಾನಂದ ಪ್ರಾಪ್ತಿಗಾಗಿ ಈ ನರದೇಹ ನಿರ್ಮಿಸಿದ್ದಾನೆಂಬುದನ್ನು ಅಲಕ್ಷಿಸಿ, ಪ್ರಾಪಂಚಿಕ ಮತ್ತು ಇಂದ್ರಿಯ ಸುಖ ಭೋಗಗಳಲ್ಲಿಯೇ ಆಯುಷ್ಯ ಸವೆಸಿ, ಪರಮಾರ್ಥ ದೃಷ್ಟಿಯಿಂದ ಖಾಲಿ ಕೈಯಿಂದ ಹೋಗುತ್ತಿದ್ದೇನಲ್ಲ ಎಂಬ ಅನುತಾಪವು ಚಿತ್ತದಲ್ಲಿ ಸದಾ ಜಾಗ್ರತವಿರಬೇಕು. ಇದರಿಂದಲೇ ಸಾಧಕನಲ್ಲಿ ವೈರಾಗ್ಯ ಸ್ಥಿತಿ ಜಾಗೃತಗೊಳ್ಳುತ್ತದೆ. ಈ ವೈರಾಗ್ಯದ ಸ್ವರೂಪವು, ಸಾತ್ವಿಕ, ರಾಜಸ, ತಾಮಸ, ಹೀಗೆ ಮೂರು ಪ್ರಕಾರದ್ದು ಇರುತ್ತದೆ. ರಾಜಸ ಮತ್ತು ತಾಮಸ ವೈರಾಗ್ಯದಿಂದ ಪರಮಾರ್ಥ ಮಾರ್ಗ ತಿಳಿಯುವುದಿಲ್ಲ. ಯಾಕೆಂದರೆ ರಾಜಸ-ತಾಮಸಗಳ ಸ್ವರೂಪ ಹೀಗಿದೆ. ವೇದ ವಿಧಿ ವಿಚಾರ ಗೊತ್ತಿರುವುದಿಲ್ಲ. ತನ್ನ ಕೆಲಸವನ್ನು ತಾನು ಸರಿಯಾಗಿ ಮಾಡುವಂತಿಲ್ಲ. ಎರಡನೆಯವರನ್ನೂ ಮಾಡಿ ಗೊಡುವಂತಿಲ್ಲ. ಇದು ತಾಮಸ ವಿಚಾರ.


ತನ್ನ ಪ್ರಸಿದ್ಧಿ ಪ್ರತಿಷ್ಠೆ ಮತ್ತು ಸ್ವಲಾಭ ಇವುಗಳ ಸಲುವಾಗಿ ಢಾಂಬಿಕ ವೈರಾಗ್ಯವನ್ನು ಜನರಿಗೆ ತೋರಿಸಲು ಸದಾ ಸಿದ್ಧನಿರುವದು, ಪಾದ ಪೂಜೆ ಮಾಡಿಸಿಕೊಳ್ಳುವದು, ಜನರಿಗೆ ತೋರಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಶಿಷ್ಯರನ್ನು ಕೂಡಿಸಿ, ಶಿಷ್ಯರ ಮೇಲಿನ ಮಮತೆ ಮತ್ತು ಅಭಿಮಾನ ಇವುಗಳನ್ನು ಬಹಿರಂಗ ಸಭೆಯಲ್ಲಿ ಜಾಹೀರ ಪಡಿಸುವದು; ಇತ್ಯಾದಿ ಇವೆಲ್ಲವೂ ರಾಜಸ ಗುಣದ ಲಕ್ಷಣಗಳು. ಆದ್ದರಿಂದ ಈ ತಾಮಸ ಮತ್ತು ರಾಜಸ

ವೈರಾಗಿಗಳು ಸಂತರಿಗೆ ಮಾನ್ಯವಿಲ್ಲ. ಯಾಕೆಂದರೆ ಇವುಗಳು ಅನರ್ಥಗಳಿಗೆ ಮೂಲ ಕಾರಣವಾದ್ದರಿಂದ ಪರಮಾತ್ಮ ಪ್ರಾಪ್ತಿಯು ಸಾಧ್ಯವಿಲ್ಲ.

ಈಗ ಜಗದ್ವಂದ್ಯ ಶುದ್ಧ ಸಾತ್ವಿಕ ವೈರಾಗ್ಯದ ಸ್ವರೂಪವನ್ನು ಸವಿಸ್ತಾರವಾಗಿ ವಿವರಿಸುವೆನು. ಸಾಧಕನ ಭಾಗ್ಯದಲ್ಲಿ ಲೋಕದ ಎಲ್ಲ ಭೋಗ ವಸ್ತುಗಳಿದ್ದರೂ, ಅವುಗಳಲ್ಲಿ ಸಾಧಕನ ಮನಸ್ಸು ಸಿಕ್ಕಿಕೊಳ್ಳಬಾರದು. ಶಬ್ದ, ಸ್ಪರ್ಶ, ರೂಪ, ರಸ, ಗಂಧ ಹೀಗೆ ಐದು ವಿಷಯಗಳಿದ್ದು, ಈ ಯಾವ ವಿಷಯಗಳಲ್ಲಿಯೂ ಸಾಧಕನಿಗೆ ಅನುರಾಗವಿರಕೂಡದು. ಶುದ್ಧ ಪರಮಾರ್ಥ ಜೀವನವನ್ನು ಜೀವಿಸುತ್ತಿರುವ ಸಾಧಕನ ಭಕ್ತಿ ವೈರಾಗ್ಯಗಳನ್ನು ನೋಡಿ, ಜನರು ಅವನ ಸ್ತುತಿ ಹಾಗೂ ಮಾನ ಸನ್ಮಾನ ಮಾಡಲಿಕ್ಕೆ, ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಆ ಸಾಧಕ ಭಕ್ತನ ಭಕ್ತಿ ವೈರಾಗ್ಯಗಳು ಇನ್ನೂ ಪ್ರಾಥಮಿಕ ಹಂತದಲ್ಲಿ ಕೋಮಲವಾಗಿರುವುದರಿಂದ, ಮಾನ-ಸನ್ಮಾನ, ಸ್ತುತಿ, ಪಾದಪೂಜೆ ಇವೆಲ್ಲವುಗಳಿಂದ ಭ್ರಮೆಗೊಳ್ಳುತ್ತಾನೆ; ಮತ್ತು ತನ್ನ ಯೋಗ್ಯತೆ (ನಿಜವಾಗಿ ಇರದಿದ್ದರೂ) ತಾನೇ ಶ್ರೇಷ್ಠವೆಂದು ಅಭಿಮಾನ ಪಡುತ್ತಾನೆ. ಈ ಸಾಧಕ-ಭಕ್ತನನ್ನು, ಶ್ರೀಹರಿಯೇ ಈ ನಾಮ ರೂಪದಲ್ಲಿ ನಮ್ಮ ಉದ್ಧಾರಕ್ಕಾಗಿಯೇ ಅವತರಿಸಿದ್ದಾನೆಂಬ ಜನರ ಸಿಹಿ ಮಾತುಗಳಿಗೆ ಸಾಧಕನು ಮರುಳಾಗುತ್ತಾನೆ. ಈ ಐದು ವಿಷಯಗಳಲ್ಲಿ ಶಬ್ದ ವಿಷಯವನ್ನು ಮೇಲೆ ಹೇಳಿದ್ದಾಯ್ತು. ಇನ್ನು ಸ್ಪರ್ಶ ವಿಷಯದ ಬಗ್ಗೆ ಹೀಗೆ- ಈ ಸಾಧಕ ಭಕ್ತನಿಗೆ ಮೃದು ಆಸನಗಳನ್ನು ಮತ್ತು ಶಯನಕ್ಕೆ ಗಾದೆಗಳನ್ನು ಒದಗಿಸಿ, ಸ್ತ್ರೀ-ಪುರುಷರು ಇವನ ಅಂಗ ಸೇವೆ ಮಾಡುತ್ತಾರೆ. ಹೀಗೆ ಸ್ಪರ್ಶ ವಿಷಯದಲ್ಲಿ ಪ್ರೀತಿಯುಳ್ಳವನಾಗುತ್ತಾನೆ. ಇನ್ನು ರೂಪ ವಿಷಯ, ಜನರು ಸಾಧಕ ಭಕ್ತನಿಗೆ ಸೌಂದರ್ಯ ವರ್ಧಿಸುವ ವಸ್ತು ಪೋಷಾಕುಗಳನ್ನು ಕೊಡುತ್ತಾರೆ. ಹೀಗೆ ರೂಪ ವಿಷಯವು ಅವನಿಗೆ ಅಂಟಿಕೊಳ್ಳುತ್ತದೆ. ರಸ ವಿಷಯ; ಸಾಧಕ ಭಕ್ತನಿಗೆ ರುಚಿಯಾದ ನಾನಾ ತರದ ಭಕ್ಷ್ಯ ಭೋಜನಗಳನ್ನು ನೀಡುವದರಿಂದ ಸಹಜವಾಗಿ ಅವನು ಭಿನ್ನ ಭಿನ್ನ ರುಚಿಗಳಲ್ಲಿ ಅಭಿರುಚಿವುಳ್ಳವನಾಗುತ್ತಾನೆ. ಜನರು ಅವರಿಗೆ ಸುಗಂಧ ದ್ರವ್ಯಗಳನ್ನು ಸಿಂಪಡಿಸುವುದರಿಂದ, ಗಂಧ ವಿಷಯವೂ ಅಂಟಿಕೊಳ್ಳುತ್ತದೆ. ಹೀಗೆ ಕೆಲವೊಂದು ವರ್ಷಗಳು ಉರುಳಿದ ನಂತರ ಈ ಐದೂ ವಿಷಯಗಳಿಗೆ ಆ ಸಾಧಕ ಭಕ್ತನು ದಾಸನಾಗಿ, ಯಾವುದರಲ್ಲಾಗಲಿ ಏನಾದರೂ ಕಡಿಮೆಯಾದರೆ ಸಿಡಿಮಿಡಿಗೊಳ್ಳುತ್ತಾನೆ. ಹೀಗಾದೊಡನೆ ಈ ಹಿಂದೆ ಯಾವ ಜನರು ಅವನನ್ನು ಸ್ತುತಿಸಿ ಪಾದಪೂಜೆ ಮಾಡುತ್ತಿದ್ದರೋ, ಅದೇ

ಜನರು, ಆ ಸಾಧಕ ಭಕ್ತನನ್ನು ನಿಂದಿಸಲು ಮತ್ತು ಅವಹೇಳನ ಮಾಡಲಾರಂಭಿಸುತ್ತಾರೆ. ಆದರೂ ಕೂಡ ಅವನಲ್ಲಿ ಅನುತಾಪಭಾವ ಹುಟ್ಟುವುದಿಲ್ಲ. ಯಾಕೆಂದರೆ ಪಂಚ ವಿಷಯಗಳು, ಮಾನ ಸನ್ಮಾನಗಳ ಭ್ರಮೆ, ಶಿಷ್ಯರ ಅಭಿಮಾನ, ಮಮತೆ ಇತ್ಯಾದಿಗಳು ಸುತ್ತುವರಿದು, ಸಂಪೂರ್ಣ ಅವನನ್ನು ಅಸಹಾಯಕನನ್ನಾಗಿ ಮಾಡುತ್ತವೆ. ಅವನ ವಿವೇಕ ಬುದ್ಧಿಯು ಭ್ರಮೆಯಿಂದ ಮುಚ್ಚಿ ಹೋಗಿರುತ್ತದೆ. ತನ್ನನ್ನು ನಿಂದಿಸುವ ಜನರಿಗೆ ಹೀಗೆ ಹೇಳುತ್ತಾನೆ:– ತನ್ನಂಥ ಜ್ಞಾನಿಗಳಿಗೆ ಮತ್ತು ವಿವೇಕಿಗಳಿಗೆ ಪಾದ ಪೂಜೆ ಮಾಡಿದರೆ, ನಮಗೇನೂ ಅಹಂಕಾರ ಬರುವುದಿಲ್ಲ ; ಮತ್ತು ನಿಮಗೆ ಒಳ್ಳೆಯದೇ ಆಗುತ್ತದೆಂಬ ಉಪದೇಶ ಹೇಳುತ್ತಾನೆ. ನಿಜವಾದ ಜ್ಞಾನಿಯು, ಸ್ವಲ್ಪೇ ಮಾನ-ಸನ್ಮಾನ ಮಾಡಿದರೂ ಬಹಳೇ ಸಂಕೋಚಪಟ್ಟು ಉದಾಸೀನನಾಗಿರುತ್ತಾನೆ. ಭಗವತ್ ಕೃಪೆಯಾಗದ ಸಾಧಕ ಭಕ್ತನ ಚಿತ್ತದಲ್ಲಿ, ಲೋಕವಾಸನೆ, ಧನವಾಸನೆ, ಇತ್ಯಾದಿ ಒಮ್ಮೆ ಸ್ಥಿರವಾದರೆ, ಶ್ರೀ ಹರಿ ಕೃಪೆಯಿಲ್ಲದೇ ಅವನಿಗೆ ವೈರಾಗ್ಯ ಸ್ಥಿತಿ ಬರುವುದಿಲ್ಲ. ನಿಜವಾದ ವೈರಾಗ್ಯ ಬರಬೇಕಾದರೆ, ಮಾನ-ಸನ್ಮಾನ ಪಾದ ಪೂಜೆ ಮತ್ತು ಸ್ತುತಿ ಮಾಡಿಸಿಕೊಳ್ಳುವವರ ಮತ್ತು ಮಾಡುವವರ ಸಂಗತಿಯನ್ನು ಮತ್ತು ಆ ಸ್ಥಳಗಳನ್ನು ನಿರ್ಭಿಡೆಯಾಗಿ ತ್ಯಜಿಸಬೇಕು. ಆದ್ದರಿಂದ ಕೆಲವೊಂದು ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಅವು ಹೀಗೆ :- ಜನರಿಂದ ಮಾನ ಸನ್ಮಾನ, ಆಕರ್ಷಕ ಪೋಷಾಕು, ಅಲಂಕಾರಗಳು, ಪರರ ಮನೆಯಲ್ಲಿ ಊಟ ಅಥವಾ ಪರಾಳ, ಪರರಿಂದ ಹಣ ತೆಗೆದುಕೊಳ್ಳುವುದು, ಪ್ರಾಪಂಚಿಕ ಜನರಲ್ಲಿ ಕೂಡ್ರುವದು ಮತ್ತು ಹರಟೆ ಹೊಡೆಯುವದು, ತನ್ನನ್ನು ತಾನೇ ಬಣ್ಣಿಸಿಕೊಳ್ಳುವದು, ಸ್ತ್ರೀಯರ ಕೂಡ ಮಾತನಾಡುವದು, ಸ್ತ್ರೀಯರನ್ನು ನೋಡುವದು, ಸ್ತ್ರೀಯರೊಡನೆ ಚೇಷ್ಟೆ ಮಾಡುವದು, ಸ್ಪರ್ಶ ಮಾಡುವದು; ಸ್ತ್ರೀಯರ ಕೂಡ ಏಕಾಂತ ಮತ್ತು ಪರಮಾರ್ಥ ಇವೆಲ್ಲವೂ ಪುರುಷ ಸಾಧಕರಿಗೆ ಅಪಾಯಕರವಾಗಿರುತ್ತವೆ. ಗೃಹಸ್ಥ ಸಾಧಕ ಭಕ್ತರು ತಮ್ಮ ಹೆಂಡಿರನ್ನು ಬಿಟ್ಟು ಎಲ್ಲಿ ಹೋಗಬೇಕೆಂದು ಕೇಳಿದರೆ ಅದಕ್ಕೆ ಉತ್ತರ ಹೀಗೆದೆ :- ಸ್ವಂತ ಪತ್ನಿಯನ್ನು ಬಿಟ್ಟು ಬೇರೆ ಯಾವ ಸ್ತ್ರೀಯರಿಗೂ ಆಶ್ರಯ ಕೊಡಬಾರದು; ಮನೆಯಲ್ಲಿ ಇಟ್ಟುಕೊಳ್ಳಬಾರದು, ಸಮೀಪಿಸಲೂ ಬಾರದು. ತನ್ನ ಸ್ವಂತ ಹೆಂಡತಿಯ ಕೂಡ ಸಹ, ಪ್ರಜೋತ್ಪತ್ತಿ ಉದ್ಧೇಶದಿಂದ ಮಾತ್ರ ಸ್ಪರ್ಶಿಸಬೇಕು ; ಆದರೆ ಯಾವಾಗಲೂ ಅವಳಲ್ಲಿಯೇ ಆಸಕ್ತನಾಗಿ ಕೂಡ್ರಬಾರದು. ಒಂದು ವೇಳೆ ಸ್ತ್ರೀಯರೂ ಸಹ, ಪರಮಾತ್ಮನ ಭಜನೆ, ಕೀರ್ತನೆ, ಪ್ರವಚನ ಚೆನ್ನಾಗಿ

ಮಾಡುತ್ತಿದ್ದರೂ, ಭಕ್ತಿ ಮಾರ್ಗದಲ್ಲಿದ್ದರೂ, ಅವರ ಸಂಗತಿಯಲ್ಲಿ ಹೆಚ್ಚಿಗೆ ಇರಕೂಡದು. ಶುದ್ಧ ಪರಮಾರ್ಥ ಮಾಡುವವರು, ಸ್ತ್ರೀಯರ ಸಂಗತಿಯಲ್ಲಿ ಇರಲೇಬಾರದು. ಏಕಾಂತದಲ್ಲಿ ಅಖಂಡ ಒಬ್ಬನೇ ಕೂಡ್ರಬೇಕು. ಯಾವುದೇ ತರಹದ ಅಭಿಮಾನ ಅಹಂಕಾರವಿಲ್ಲದೇ ಇರಬೇಕು ; ಮತ್ತು ಮನಸ್ಸಿಗೆ ದುಃಖವಾಗುವಂತಹ ಪ್ರಸಂಗ ತಂದುಕೊಳ್ಳಬಾರದು. ಈ ರೀತಿಯಾಗಿ ಜೀವನವನ್ನು ಮಾರ್ಪಾಡು ಮಾಡಿಕೊಳ್ಳದೇ, ಶ್ರೀಕೃಷ್ಣ ಪರಮಾತ್ಮನ ಪ್ರಾಪ್ತಿಯಾಗುತ್ತಿದೆ ಎಂಬ ಅಭಿಲಾಷೆ ಶುದ್ಧ ಮೂರ್ಖತನದ್ದು. ಇದನ್ನು ನಾನು ದೇವರಾಣೆಯಾಗಿ ಹೇಳುತ್ತಿದ್ದೇನೆ. ಚಿರಂಜೀವ ಪದದ ವರ್ಣನೆ ನನ್ನದಲ್ಲ. ಶ್ರೀಕೃಷ್ಣ ಪರಮಾತ್ಮನು ಭಕ್ತ ಶ್ರೀ ಉದ್ಧವನಿಗೆ, ಅವನ ಹಿತಾರ್ಥ ಹೇಳಿದ್ದನ್ನೇ ಇಲ್ಲಿ ನಾನು ಪುನರುಚ್ಚರಿಸಿದ್ದೇನೆ. ಇದು ಸತ್ಯವಿಲ್ಲವೆಂದು ತಿಳಿದವರಿಗೆ ಕಲ್ಪಾಂತದಲ್ಲಿಯೂ ಕೂಡ, ಅಂದರೆ ಎಂದೆಂದೂ ಶ್ರೀ ಕೃಷ್ಣ ಚರಣ ಪ್ರಾಪ್ತಿಯಾಗುವುದಿಲ್ಲ. ಮನುಷ್ಯ ದೇಹದಲ್ಲಿಯೇ ಮಾತ್ರ, ಪ್ರಯತ್ನ ಮಾಡಿದರೆ ಇಂಥ ವೈರಾಗ್ಯ ಸಾಧಿಸಲು, ಶಕ್ಯವಿದೆಯೆಂದು ಸಂತ ಶ್ರೀ ಏಕನಾಥ ಮಹಾರಾಜರು ಹೇಳುತ್ತಾರೆ.


ॐ

ಗ್ರಂಥ ಸಿಗುವ ಸ್ಥಳ

ಶ್ರೀ ಗುರು ಶಿವೂರಕರ ಮಹಾರಾಜರ ಕರ್ನಾಟಕ ಮಠ

ಚಂದ್ರಭಾಗಾ ಘಾಟ, ಪಂಢರಪೂರ

ಗ್ರಂಥ ಸಿಗುವ ಸ್ಥಳ

ಶ್ರೀ ಸಂತ ಜ್ಞಾನೇಶ್ವರ ಸಾಧಕಾಶ್ರಮ

ಜ್ಞಾನೇಶ್ವರ ಪ್ರಸಾದ ಬಿಲ್ಡಿಂಗ್, ಬೈಲಪ್ಪನವರ ನಗರ, ಹುಬ್ಬಳ್ಳಿ-೫೮೦ ೦೨೯.
ಜಿಲ್ಲಾ ಧಾರವಾಡ (ಕರ್ನಾಟಕ ರಾಜ್ಯ)
ದೂರವಾಣಿ : (೦೮೩೬) ೨೩೫೦೬೩೧

ಬೆಲೆ : ರೂ. 15-00